ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ನವೆಂಬರ್ 11 ಸೋಮವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 204 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮುಡಾ ಹಗರಣ: ಹೈಕೋರ್ಟ್ ತೀರ್ಪಿನ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ

ಸಚಿವ ಜಮೀರ್ ವಿರುದ್ಧ ಕಾನೂನು ಕ್ರಮಕ್ಕೆ ರಾಜ್ಯಪಾಲರ ಸೂಚನೆ

ನ್ಯಾಯಾಂಗ ನಿಂದನೆ ಪ್ರಕರಣ ದಾಖಲು ಸಾಧ್ಯತೆ



ಜಮೀರ್ ಅಹಮದ್

ಬೆಂಗಳೂರು, ನ.10– ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಈ ಹಿಂದೆ ಸಿಎಂ ಸಿದ್ದರಾಮಯ್ಯಗೆ ಶಾಕ್ ನೀಡಿದ್ದ ಕರ್ನಾಟಕ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಇದೀಗ ಅವರ ಆಪ್ತ ಸಚಿವ ಜಮೀರ್ ಅಹ್ಮದ್‌ಗೂ ಆಘಾತ ನೀಡಿದ್ದಾರೆ.

ಮುಡಾ ಅಕ್ರಮಕ್ಕೆ ಸಂಬಂಧಿಸಿದಂತೆ ಸಿಎಂ ಸಿದ್ದರಾಮಯ್ಯ ವಿರುದ್ಧ ಹೈಕೋರ್ಟ್ ನೀಡಿದ ತೀರ್ಪಿನ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಜಮೀರ್ ಅಹ್ಮದ್ ಖಾನ್ ನ್ಯಾಯಾಂಗ ನಿಂದನೆ ಆರೋಪ ಎದುರಿಸುತ್ತಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ರಾಜ್ಯಪಾಲ ಥಾವರ್‌ಚೆಂದ್ ಗೆಹ್ಲೋಟ್ ಅವರು ಸರ್ಕಾರದ ಅಡ್ವೋಕೇಟ್ ಜನರಲ್‌ಗೆ ಸೂಚನೆ ನೀಡಿದ್ದಾರೆ.

ಸಾಮಾಜಿಕ ಕಾರ್ಯಕರ್ತ ಟಿಜೆ ಅಬ್ರಾಹಾಮ್ ದೂರಿನ ಮೇರೆಗೆ ಸಚಿವ ಜಮೀರ್ ಅಹ್ಮದ್‌ಖಾನ್ ಹೇಳಿಕೆ ಸಂಬಂಧ ಅಡ್ವೋಕೇಟ್ ಜನರಲ್‌ಗೆ ರಾಜ್ಯಪಾಲರು ಪತ್ರ ಬರೆದಿದ್ದು, ಮುಂದಿನ ಕಾನೂನು ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಿದ್ದಾರೆ.

ಪೊಲಿಟಿಕಲ್ ತೀರ್ಪು ಎಂದಿದ್ದ ಜಮೀರ್: ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ರಾಜ್ಯಪಾಲರಿಗೆ ದೂರು ನೀಡಿದ್ದರು. ಬಳಿಕ ರಾಜ್ಯಪಾಲರು ಸಿದ್ದರಾಮಯ್ಯ ವಿರುದ್ಧ ತನಿಖೆಗೆ ಅನುಮತಿ ನೀಡಿದ್ದರು. ಇದನ್ನು ಪ್ರಶ್ನಿಸಿ ಸಿಎಂ ಸಿದ್ದರಾಮಯ್ಯ ಕೋರ್ಟ್ ಮೆಟ್ಟಿಲೇರಿದ್ದರು. ಆದರೆ, ಹೈಕೋರ್ಟ್ ಸಿಎಂ ವಿರುದ್ಧದ ತನಿಖೆಗೆ ಆದೇಶಿಸಿತ್ತು. ಈ ತೀರ್ಪನ್ನು ಜಮೀರ್ ಅಹಮ್ಮದ್‌ಖಾನ್, ರಾಜಕೀಯ ಪ್ರೇರಿತವಾಗಿದ್ದು, ಅದೊಂದು ರಾಜಕೀಯ ತೀರ್ಪು ಎಂದು ಹೇಳಿದ್ದರು. ಆ ಹಿನ್ನೆಲೆಯಲ್ಲಿ ಮುಡಾ ಪ್ರಕರಣದ ದೂರುದಾರರಲ್ಲೊಬ್ಬರಾದ ಟಿ.ಜೆ. ಅಬ್ರಹಾಂ ಅವರು ಜಮೀರ್ ಅವರ ವಿರುದ್ಧ ನ್ಯಾಯಾಂಗ ನಿಂದನೆ ಕೇಸ್ ದಾಖಲಿಸಿ ಪಾಠ ಕಲಿಸುವುದಾಗಿ ಹೇಳಿದ್ದರು.

ಜಮೀರ್ ಅಹಮ್ಮದ್ ಖಾನ್ ಅವರು ಈ ಹೇಳಿಕೆ ರಾಜ್ಯ ರಾಜಕಾರಣದಲ್ಲಿ ಭಾರಿ ಸಂಚಲನಕ್ಕೆ ಕಾರಣವಾಗಿತ್ತು.



ಥಾವರ್‌ಚಂದ್ ಗೆಹ್ಲೋಟ್

ಅಲ್ಲದೇ ಜಮೀರ್ ಅಹಮ್ಮದ್‌ಖಾನ್ ಅವರು ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಅಬ್ರಾಹಂ ಕಿಡಿಕಾರಿದ್ದರು. ಮತ್ತೊಂದು ಹೆಜ್ಜೆ ಮುಂದೆ ಹೋಗಿ ಜಮೀರ್ ಅಹಮ್ಮದ್ ವಿರುದ್ಧ ರಾಜ್ಯಪಾಲರಿಗೆ ದೂರು ನೀಡಿದ್ದರು. ಇದೀಗ ಈ ದೂರಿನ ಮೇರೆಗೆ ರಾಜ್ಯಪಾಲರು ಜಮೀರ್ ವಿರುದ್ಧ ಕ್ರಮಕ್ಕೆ ಸೂಚಿಸಿದ್ದಾರೆ.

ಕೇಂದ್ರದ ವಿಶೇಷ ಸ್ವಚ್ಛತಾ ಅಭಿಯಾನದ ಪ್ರತಿಫಲ

ಗುಜರಿ ವಸ್ತುಗಳ ವಿಲೇವಾರಿಯಿಂದ ಸರ್ಕಾರಕ್ಕೆ 2,364 ಕೋಟಿ ಆದಾಯ

ನವದೆಹಲಿ, ನ.10–ಕೇಂದ್ರ ಸರ್ಕಾರದ ವಿಶೇಷ ಸ್ವಚ್ಛತಾ ಅಭಿಯಾನದ ವೇಳೆ ಗುಜರಿ ವಸ್ತುಗಳ ವಿಲೇವಾರಿಯಿಂದ ಸರ್ಕಾರಕ್ಕೆ 2,364 ಕೋಟಿ ರೂ. ಆದಾಯ ಬಂದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದ್ದಾರೆ.





ಇಂತಹ ಸಾಮೂಹಿಕ ಪ್ರಯತ್ನವು ಸುಸ್ಥಿರವಾದ ಫಲಿತಾಂಶ ತಂದುಕೊಡಬಲ್ಲದು ಎಂಬುದನ್ನು ತೋರಿಸುತ್ತಿದೆ. ಸ್ವಚ್ಛತೆ ಮತ್ತು ಆರ್ಥಿಕ ವಿವೇಕ ಎರಡನ್ನೂ ಸರ್ಕಾರದ ಈ ವಿಶೇಷ ಅಭಿಯಾನ ಉತ್ತೇಜಿಸುತ್ತದೆ ಎಂದು ಅವರು ತಿಳಿಸಿದ್ದಾರೆ. ಕೇಂದ್ರ ಸರ್ಕಾರ ದೇಶದ ಸ್ವಚ್ಛತೆಗಾಗಿ 2021ರಿಂದ 2024ರವರೆಗೆ ನಡೆಸಿದ ವಿಶೇಷ ಸ್ವಚ್ಛತಾ ಅಭಿಯಾನಗಳು ಗುಜರಿ ವಸ್ತುಗಳ ವಿಲೇವಾರಿ ಮೂಲಕ 2,364 ಕೋಟಿ ರೂ ಆದಾಯ ತಂದುಕೊಟ್ಟಿದೆ ಎಂದು ಮೋದಿ ಅಧಿಕೃತ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕೇಂದ್ರ ಸಿಬ್ಬಂದಿ ಸಚಿವಾಲಯ ಹೊರಡಿಸಿದ ಹೇಳಿಕೆಯಲ್ಲಿ, ಪ್ರಧಾನಿ ನರೇಂದ್ರ ಮೋದಿಯವರ ಮಾರ್ಗಸೂಚಿಗಳಿಂದ ಉತ್ತೇಜನಗೊಂಡು 2021–24ರ ನಡುವೆ ವಿಶೇಷ ಅಭಿಯಾನದಡಿಯಲ್ಲಿ ಇದುವರೆಗೆ ಗುಜರಿ ವಸ್ತುಗಳ ಮಾರಾಟದಿಂದ 2,364 ಕೋಟಿ ರೂಪಾಯಿ ಆದಾಯ ಬಂದಿದೆ. ಇದು ಸರ್ಕಾರಿ ಕಚೇರಿ ಸ್ಥಳವನ್ನು ಸ್ವಚ್ಛಗೊಳಿಸಿದೆ ಮತ್ತು ಸರ್ಕಾರಕ್ಕೆ ಆದಾಯವೂ ಬಂದಿದೆ ಎಂದಿದೆ. ಕೇಂದ್ರ ಸಿಬ್ಬಂದಿ ಖಾತೆ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಮಾತನಾಡಿ, ವಿಶೇಷ ಸ್ವಚ್ಛತಾ ಅಭಿಯಾನ 4.0 ಅನ್ನು ಕೈಗೊಳ್ಳಲಾಯಿತು ಮತ್ತು ಇದು ಸರ್ಕಾರಿ ಕಚೇರಿಗಳಲ್ಲಿ, ಇತರ ಸ್ಥಳಗಳಲ್ಲಿ ತುಂಬಿರುವ ಅನಗತ್ಯ ಗುಜರಿ ವಸ್ತುಗಳನ್ನು ಕಡಿಮೆ ಮಾಡಲು ಭಾರತದ ಅತಿದೊಡ್ಡ ಅಭಿಯಾನ ಇದಾಗಿದೆ ಎಂದಿದ್ದಾರೆ.

ವಿಶೇಷ ಅಭಿಯಾನ 4.0 ಅಡಿಯಲ್ಲಿ, ಇದುವರೆಗೆ 5.97 ಲಕ್ಷಕ್ಕೂ ಹೆಚ್ಚು ಸೈಟ್‌ಗಳಲ್ಲಿ ಸ್ವಚ್ಛತಾ ಅಭಿಯಾನವನ್ನು ಕೈಗೊಂಡಿದೆ ಮತ್ತು ಈ ಪರಿಣಾಮ ಕಚೇರಿ ಬಳಕೆಗಾಗಿ 190 ಲಕ್ಷ ಚದರ ಅಡಿ ಜಾಗವನ್ನು ಸ್ವಚ್ಛಗೊಳಿಸಿದಂತಾಯಿತು. ಪ್ರತಿ ವರ್ಷ ಕಳೆದಂತೆ, ಈ ಸ್ವಚ್ಛತಾ ಅಭಿಯಾನದ ಪ್ರಮಾಣವು ಹೆಚ್ಚುತ್ತಿದೆ ಮತ್ತು 2023ರಲ್ಲಿ 2.59 ಲಕ್ಷ ಸೈಟ್‌ಗಳಿಗೆ ಹೋಲಿಸಿದರೆ 2024ರಲ್ಲಿ 5.97 ಲಕ್ಷಕ್ಕೂ ಹೆಚ್ಚು ಸೈಟ್ ಒಳಗೊಂಡಿದೆ ಎಂದು ಜಿತೇಂದ್ರ ಸಿಂಗ್ ಹೇಳಿದ್ದಾರೆ.

ಎನ್‌ಡಿಎ 3 ಕ್ಷೇತ್ರದಲ್ಲಿ ಗೆದ್ದರೆ ಸಿಎಂ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೀರಾ?

ಸಿದ್ದರಾಮಯ್ಯಗೆ ಬಿಎಸ್ ಯಡಿಯೂರಪ್ಪ ಸವಾಲು

ಹಾವೇರಿ, ನ.10–ಉಪ ಚುನಾವಣೆಯಲ್ಲಿ ಶಿಗ್ಗಾಂವಿ ಸೇರಿದಂತೆ ಮೂರು ಕ್ಷೇತ್ರದಲ್ಲಿ ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಪರಿವಾರದ ಗಾಳಿ ಇದೆ ಮೂರೂ ಕ್ಷೇತ್ರದಲ್ಲಿ ಎನ್‌ಡಿಎ ಗೆದ್ದರೆ, ಸಿದ್ದರಾಮಯ್ಯ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ

● 5ನೇ ಪುಟಕ್ಕೆ

ಸಚಿವ ಚಲುವರಾಯಸ್ವಾಮಿ ಮೇಲೆ ಹಲ್ಲೆ ನಡೆಸಿಲ್ಲವೆಂದು ಚಾಮುಂಡಿಬೆಟ್ಟದಲ್ಲಿ ಕೀಲಾರ ಜಯರಾಂ ಆಣೆ ಮಾಡಲಿ

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸವಾಲು

ಮಂಡ್ಯ, ನ.10(ಮೋಹನ್ ರಾಜ್)– ಮೈಸೂರಿನ ಖಾಸಗಿ ಹೋಟೆಲ್‌ವೊಂದರಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರ ಮೇಲೆ ಹಲ್ಲೆ ನಡೆದಿದೆ ಎಂಬ ಆರೋಪ ನನಗೂ ಮಾಧ್ಯಮಗಳ ಮೂಲಕ ತಿಳಿದು ಬಂದಿದ್ದು, ಪಕ್ಷ ಯಾವುದೇ ಇರಲಿ, ನಮ್ಮ ಜಿಲ್ಲೆಯ ಸಚಿವರ ಮೇಲೆ ಈ ರೀತಿಯ ಘಟನೆ ನಡೆದಿರುವುದು ನಿಜಕ್ಕೂ ಅವಮಾನದ ಸಂಗತಿ ಎಂದು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಸಮಾಧಾನ ಹೊರಹಾಕಿದರು.

ಭಾನುವಾರ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹಲ್ಲೆ ಘಟನೆ ನಡೆದಿದೆ ಎಂದು ಹೇಳಿರುವ ಹೋಟೆಲ್‌ನಲ್ಲಿ ಶುಭ ಸಮಾರಂಭವೊಂದು ನಡೆಯುತ್ತಿತ್ತು. ಅಲ್ಲಿ ನಾನು ಸಹ ಭಾಗಿಯಾಗಿದ್ದೆ. ಎಸಿ ರೂಂವೊಂದರಲ್ಲಿ ಸಚಿವರು, ಕಾಂಗ್ರೆಸ್‌ನ ಕೆಲ ಶಾಸಕರು ಹಾಗೂ ಪಕ್ಷದ ಮುಖಂಡರು ಇದ್ದರು ಎನ್ನಲಾಗಿದ್ದು, ಸಚಿವರು ಹಾಗೂ ಮುಖಂಡ ಕೀಲಾರ ಜಯರಾಂ ಎಂಬುವವರ ನಡುವೆ ಗಲಾಟೆ, ಹೊಡೆದಾಟ ನಡೆಯುತ್ತಿದೆ.



ಪುಟ್ಟರಾಜು

ಜಯರಾಂ ಅವರ ಮೇಲೆ ಮುಖಂಡರು ಹಲ್ಲೆ ನಡೆಸುತ್ತಿದ್ದಾರೆ ಎಂಬ ಮಾಹಿತಿ ಸ್ಥಳದಲ್ಲೇ ನನ್ನ ಕಿವಿಗೂ ಬಿತ್ತು. ನಾನು ಅನ್ಯ ಪಕ್ಷದ ಮುಖಂಡನಾಗಿದ್ದು, ಘಟನಾ ಸ್ಥಳಕ್ಕೆ ಹೋಗಲಿಲ್ಲ ಎಂದು ಸ್ಪಷ್ಟಪಡಿಸಿದರು. ಈ ಘಟನೆಯನ್ನು ಮುಚ್ಚಿಡುವ ಕೆಲಸವನ್ನು ಕಾಂಗ್ರೆಸ್ ಮುಖಂಡರು ಮಾಡುತ್ತಿದ್ದು, ಕೀಲಾರ ಜಯರಾಂ ಏನು ನಡೆದೇ ಇಲ್ಲ ಎಂದು ಹೇಳುತ್ತಿದ್ದಾರೆ. ಏನು ನಡೆದೇ ಇಲ್ಲ ಎನ್ನುವುದಾದರೆ ನನ್ನೊಂದಿಗೆ ಮೈಸೂರಿನ ಚಾಮುಂಡಿ ಬೆಟ್ಟಕ್ಕೆ ಬಂದು ಆಣೆ ಮಾಡಲಿ

● 5ನೇ ಪುಟಕ್ಕೆ

ಕೀಲಾರ ಜಯರಾಂ ನನ್ನ ಮೇಲೆ ಹಲ್ಲೆ ಮಾಡಿಲ್ಲ; ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಊಹಾಪೋಹ

ಮಗನ ಚುನಾವಣೆ ಬಗ್ಗೆ ಗಮನ ಹರಿಸಲಿ: ಸಚಿವ ಚಲುವರಾಯಸ್ವಾಮಿ ವಾಗ್ದಾಳಿ

ಚನ್ನಪಟ್ಟಣ, ನ.10(ಮೋಹನ್ ರಾಜ್)– ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಇಲ್ಲಸಲ್ಲದ ವಿಷಯ ಚರ್ಚೆಗೆ ಬಿಟ್ಟಿದ್ದು, ಮುಖಂಡ ಕೀಲಾರ ಜಯರಾಮ್ ಅವರು ಮತ್ತು ನಾನು ಮೈಸೂರಿನಲ್ಲಿ ನಿಶ್ಚಿತಾರ್ಥ ಕಾರ್ಯಕ್ರಮವೊಂದರಲ್ಲಿ ಭೇಟಿಯಾಗಿದ್ದೆವು. ಆದರೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮೈಸೂರಲ್ಲಿ ಜಯರಾಂರಿಂದ ನನ್ನ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಊಹಾಪೋಹ ಹೇಳಿಕೆ ನೀಡುತ್ತಿದ್ದಾರೆ. ಈ ರೀತಿಯ ಸುಳ್ಳು ಹೇಳಿಕೆಗಳನ್ನು ಬಿಟ್ಟು ಅವರ ಮಗನ ಚುನಾವಣೆ ಬಗ್ಗೆ ಗಮನ ಹರಿಸಲಿ ಎಂದು ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿದರು.



ಚಲುವರಾಯಸ್ವಾಮಿ

ಭಾನುವಾರ ನಗರದ ಕಾಂಗ್ರೆಸ್ ಕ್ಯಾಂಪ್ ಸಭಾಂಗಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಅವರು ಯಾವ ಚಪಲಕ್ಕೆ ಇಲ್ಲದ ಹೇಳಿಕೆ ನೀಡುತಿದ್ದಾರೆ ಗೊತ್ತಿಲ್ಲ. ಮಗನ ಚುನಾವಣೆ ಬಗ್ಗೆ ಗಮನ ಹರಿಸುವುದು ಬಿಟ್ಟು ನನ್ನ ಮತ್ತು ಡಿ.ಕೆ.ಶಿವಕುಮಾರ್ ಬಗ್ಗೆ ಮಾತನಾಡದೆ ಇದ್ದರೆ ಅವರಿಗೆ ನಿದ್ದೆ ಬರುವುದಿಲ್ಲ. ಮಂತ್ರಿಗಳ ಮಾಹಿತಿ ಇದೇ ಎಂದು ಹೇಳುತ್ತಾರೆ. ಪೆನ್‌ಡ್ರೈವ್ ಇದೇ ಅಂತಾರೆ. ಇದುವರೆಗೂ ಏನನ್ನು ಬಿಡುಗಡೆ ಮಾಡಿಲ್ಲ ಎಂದು ವ್ಯಂಗ್ಯವಾಡಿದರು.

ನಂಬಿ ಗೆಲ್ಲಿಸಿದ ಚನ್ನಪಟ್ಟಣದ ಜನರ ಕೈಬಿಟ್ಟ ಕುಮಾರಸ್ವಾಮಿ: ಕುಮಾರಸ್ವಾಮಿ ಯಾರ ನಂಬಿಕೆಗೂ ಅರ್ಹ ವ್ಯಕ್ತಿ ಅಲ್ಲ, ಕೇಂದ್ರದಲ್ಲಿ ಮಂತ್ರಿಯಾಗಲು ಮಂಡ್ಯದಲ್ಲಿ ಮಗನಿಗೂ ಟಿಕೆಟ್ ತಪ್ಪಿಸಿದರು. ಅವರನ್ನು ನಂಬಿ

● 5ನೇ ಪುಟಕ್ಕೆ

ನ್ಯಾಯಾಲಯಗಳಲ್ಲಿ ವಜಾಗೊಂಡ ಅಪರಾಧ ಪ್ರಕರಣಗಳ ಹೆಚ್ಚಳ

ತನಿಖಾ ಲೋಪವೆಸಗಿದ ಪೊಲೀಸ್ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ಐಜಿಪಿ ಕಲಾ ಕೃಷ್ಣಸ್ವಾಮಿ ಆದೇಶ

ಬೆಂಗಳೂರು, ನ.10– ದಿನೇ ದಿನೇ ನ್ಯಾಯಾಲಯಗಳಲ್ಲಿ ವಜಾಗೊಂಡ ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಸಾಕ್ಷಿ ಕೊರತೆ, ಸಾಕ್ಷಿಗಳ ಹೇಳಿಕೆ ಪಡೆದುಕೊಳ್ಳದಿರುವುದು ಸೇರಿದಂತೆ ತನಿಖಾಧಿಕಾರಿಗಳ ಲೋಪದಿಂದಾಗಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವಲ್ಲಿ ವಿಫಲವಾಗುತ್ತಿದೆ. ನ್ಯೂನತೆ ಕಂಡುಬಂದ ಪ್ರಕರಣಗಳ ತನಿಖಾಧಿಕಾರಿಗಳಿಗೆ ವಿಚಾರಣೆ ನಡೆಸಿ ಶಿಸ್ತುಕ್ರಮ ಕೈಗೊಳ್ಳುವ ಸಂಬಂಧ ರಾಜ್ಯ ಪೊಲೀಸ್ ಇಲಾಖೆಯು ಮಾರ್ಗಸೂಚಿ ಹೊರಡಿಸಿದೆ.



ಕಲಾ ಕೃಷ್ಣಸ್ವಾಮಿ

ಖುಲಾಸೆಗೊಂಡ ಅಪರಾಧ ಪ್ರಕರಣಗಳ ಪರಾಮರ್ಶೆ ಸಮಿತಿಯು ಲೋಪವೆಸಗಿದ ತನಿಖಾಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಶಿಫಾರಸು ಮಾಡಿದ ಹಿನ್ನೆಲೆಯಲ್ಲಿ ರಾಜ್ಯ ಆಯಾ ಪೊಲೀಸ್ ವಲಯ ಹಾಗೂ ಕಮಿಷನರೇಟ್‌ಗಳ ಶಿಸ್ತು ಪ್ರಾಧಿಕಾರಿಗಳಿಗೆ

● 5ನೇ ಪುಟಕ್ಕೆ

ಸಿಎಂ ಪತ್ನಿ ಪಾರ್ವತಿ ಕ್ರಯಪತ್ರ ನೋಂದಣಿಗೆ ಮುಡಾ ವಿಶೇಷ ತಹಸೀಲ್ದಾರ್ ಮುದ್ರಾಂಕ ಶುಲ್ಕ ಪಾವತಿ

ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆರೋಪ

ಮೈಸೂರು, ನ.10(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯರ ಪತ್ನಿ ಶ್ರೀಮತಿ ಪಾರ್ವತಿ ಅವರು ಮುಡಾದಿಂದ ನಿವೇಶನ ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳಲು ಮುಡಾ ವಿಶೇಷ ತಹಸೀಲ್ದಾರ್ ಮುದ್ರಾಂಕ ಶುಲ್ಕ ಪಾವತಿ ಮಾಡಿದ್ದಾರೆ ಎಂದು ಸಾಮಾಜಿಕ ಕಾರ್ಯಕರ್ತ ಸ್ನೇಹಮಯಿ ಕೃಷ್ಣ ಆರೋಪಿಸಿದ್ದಾರೆ.

ಮುಡಾದಿಂದ ನನ್ನ ಪತ್ನಿ ನಿವೇಶನ ಪಡೆಯಲು ನಾನು ಯಾವುದೇ ಪ್ರಭಾವ ಬೀರಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ ನೀಡುತಾರೆ. ಆದರೆ ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳುವವರೇ ನೋಂದಣಿ ಶುಲ್ಕವನ್ನು ಪಾವತಿ ಮಾಡಬೇಕು. ಆದರೆ ಪಾರ್ವತಿ ಅವರು ಕ್ರಯಪತ್ರ ನೋಂದಣಿ ಮಾಡಿಸಿಕೊಳ್ಳಲು ಹಣ ಪಾವತಿ ಮಾಡದೇ ಮುಡಾ ವಿಶೇಷ ತಹಸೀಲ್ದಾರ್ ಮುದ್ರಾಂಕ ಶುಲ್ಕ ಪಾವತಿ ಮಾಡಿರುವುದು ಸಿದ್ದರಾಮಯ್ಯ ಪ್ರಭಾವ ಬೀರುವುದಕ್ಕೆ ಇದಕ್ಕಿಂತ



ಕೃಷ್ಣ

● 5ನೇ ಪುಟಕ್ಕೆ

ನಮ್ಮಪ್ಪನ ಆಣೆ ಸಿದ್ದರಾಮಯ್ಯ ಡಿಸೆಂಬರ್‌ವರೆಗೆ ಮಾತ್ರ ಸಿಎಂ ಆಗಿರ್ತಾರೆ

ಚನ್ನಪಟ್ಟಣ, ನ.10– ನಮ್ಮಪ್ಪನ ಆಣೆ ಡಿಸೆಂಬರ್‌ವರೆಗೆ ಮಾತ್ರ ಸಿದ್ದರಾಮಯ್ಯ ಸಿಎಂ ಆಗಿರುತ್ತಾರೆ ಎಂದು ಕೇಂದ್ರ ಸಚಿವ ವಿ.ಸೋಮಣ್ಣ ಭವಿಷ್ಯ ನುಡಿದಿದ್ದಾರೆ. ಚನ್ನಪಟ್ಟಣದ ಹೊಟ್ಟಿಗನಹೊಸಹಳ್ಳಿ ಗ್ರಾಮದಲ್ಲಿ ಮಾತನಾಡಿದ ಅವರು, ಉಪಚುನಾವಣೆ ಫಲಿತಾಂಶಕ್ಕೆ ನೀವೇ ಹೊಣೆ ಎಂದು ಕಾಂಗ್ರೆಸ್ ಹೈಕಮಾಂಡ್ ಸಿದ್ದರಾಮಯ್ಯ ಅವರಿಗೆ ಹೇಳಿದೆ. ರಾಜ್ಯ ಸರ್ಕಾರದ ಭ್ರಷ್ಟಾಚಾರ ಇಡೀ ದೇಶದ ಮೇಲೆ ಪರಿಣಾಮ ಬೀರುತ್ತಿದೆ. ಈ ಕಾರಣಕ್ಕೆ ನಾವು ದೇಶದ ಎಲ್ಲಾ ಚುನಾವಣೆ ಗೆಲ್ಲುತ್ತೇವೆ. ಸಿದ್ದರಾಮಯ್ಯ ಅವರಿಗೆ ಶತ್ರುಗಳು ಅಂತಾ ಇದ್ದರೆ ಅದು ಕಾಂಗ್ರೆಸ್‌ನಲ್ಲೇ ಎಂದು ಕಿಡಿಕಾರಿದರು. ಬಿ.ಎಸ್. ಯಡಿಯೂರಪ್ಪ ಹಾಗೂ ಶ್ರೀರಾಮುಲು ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ವಿಚಾರವಾಗಿ ಪ್ರತಿಕ್ರಿಯಿಸಿದ ಅವರು, ಸಿದ್ದರಾಮಯ್ಯನವರೇ ಈ ಪಾಪದ ಕೆಲಸ ಮಾಡಬೇಡಿ. ಕೋವಿಡ್‌ನಲ್ಲಿ ನಾವೆಲ್ಲಾ ಪ್ರಾಣದ ಹಂಗು ತೊರೆದು ಕೆಲಸ ಮಾಡಿದ್ದೇವೆ. ಯಾವ ರೀತಿ ಕೆಲಸ ಮಾಡಿದ್ದೇವೆ ಎಂದು



ಸೋಮಣ್ಣ

● 5ನೇ ಪುಟಕ್ಕೆ

ಮೈಸೂರಿನ ಕೆಲವೆಡೆ ಒಂದೇ ಸ್ಥಳದಲ್ಲಿ ಅನಗತ್ಯವಾಗಿ ಮೂರು ಪ್ರಯಾಣಿಕರ ತಂಗುದಾಣ

ಜನರ ತೆರಿಗೆ ಹಣ ವ್ಯರ್ಥ, ಜಾಹೀರಾತು ಸಂಸ್ಥೆಗಳಿಗೆ ಲಾಭ, ಹಲವೆಡೆ ತಂಗುದಾಣವಿಲ್ಲದೇ ಪ್ರಯಾಣಿಕರ ಪರದಾಟ



ಮೈಸೂರಿನ ಬನ್ನಿಮಂಟಪದ ಸೈಂಟ್ ಫಿಲೋಮಿನಾ ಕಾಲೇಜು ಎದುರು ಒಂದೇ ಸ್ಥಳದಲ್ಲಿ ಸಾಲಾಗಿ ನಿರ್ಮಾಣವಾಗಿರುವ ಮೂರು ಪ್ರಯಾಣಿಕರ ತಂಗುದಾಣ.

ಮೈಸೂರು, ನ.10(ಬಿಎಲ್‌ಯು)– ಮೈಸೂರಿನ ಬಹಳಷ್ಟು ಬಡಾವಣೆಗಳಲ್ಲಿ ಪ್ರಯಾಣಿಕರ ತಂಗುದಾಣಗಳೇ ಇಲ್ಲ. ಬಸ್ ಬರುವ ತನಕ ಪ್ರಯಾಣಿಕರು ಬಿಸಿಲಲ್ಲಿ ಒಣಗುತ್ತಾ, ಮಳೆಯಲ್ಲಿ ನೆನೆಯುವ ನಿಲ್ಲುವ ಪರಿಸ್ಥಿತಿ ಇದೆ. ಆದರೆ ಮೈಸೂರಿನ ಕೆಲವು ಬಡಾವಣೆಗಳ ಒಂದೇ ಸ್ಥಳದಲ್ಲಿ ಸಾಲಾಗಿ ಎರಡು ಮೂರು ಪ್ರಯಾಣಿಕರ ತಂಗುದಾಣಗಳಿವೆ.

ಬಸ್‌ಗಳು ನಿಲ್ಲುವ ಪ್ರತಿಯೊಂದು ಕಡೆ ಪ್ರಯಾಣಿಕರ ತಂಗುದಾಣವಿರಬೇಕು ಎಂಬ ನಿಯಮವಿದೆ. ಆದರೆ, ಮೈಸೂರಿನ ಬಹಳಷ್ಟು ಬಡಾವಣೆಗಳಲ್ಲಿ ಪ್ರಯಾಣಿಕರ ಬಸ್ ತಂಗುದಾಣಗಳಿಲ್ಲ. ನಗರದ ಮೂಲ ಸೌಕರ್ಯಕ್ಕೆ ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿರುವುದಾಗಿ ಈ ತನಕ ಅಧಿಕಾರ ನಡೆಸಿದ ಎಲ್ಲಾ ಸರ್ಕಾರಗಳು ತನ್ನ ಬೆನ್ನು ತಾನೇ ತಟ್ಟಿಕೊಳ್ಳುತ್ತವೆ. ಆದರೆ ಸ್ವಾತಂತ್ರ್ಯ ಬಂದು 75 ವರ್ಷವಾದರೂ ಇನ್ನು ಕೂಡ ಅಗತ್ಯ ಪ್ರಯಾಣಿಕರ ತಂಗುದಾಣಗಳಿಲ್ಲದಿರುವುದು ಸೋಜಿಗದ ಸಂಗತಿ.

ಬಸ್ ನಿಲುಗಡೆಯಾಗುವ ಸ್ಥಳಗಳಲ್ಲಿ ತಂಗುದಾಣವಿಲ್ಲ ಎಂಬುವುದು ಒಂದು ಸಮಸ್ಯೆಯಾದರೆ, ಒಂದೇ ಸ್ಥಳದಲ್ಲಿ ಸಾಲಾಗಿ ಎರಡು ಮೂರು ಬಸ್ ತಂಗುದಾಣಗಳಿರುವುದು ವಿಪರ್ಯಾಸದ ಸಂಗತಿಯಾಗಿದೆ. ಮೈಸೂರಿನ ಬನ್ನಿಮಂಟಪದ ಸೈಂಟ್ ಫಿಲೋಮಿನಾ ಕಾಲೇಜು ಎದುರು ಅಕ್ಕಪಕ್ಕದಲ್ಲಿ ಸಾಲಾಗಿ ಮೂರು ಪ್ರಯಾಣಿಕರ ತಂಗುದಾಣಗಳಿವೆ. ಒಂದೇ ಸ್ಥಳದಲ್ಲಿ ಮೂರು ಬಸ್ ತಂಗುದಾಣ ನಿರ್ಮಾಣದ ಉದ್ದೇಶವೇನು ಎಂದು ಬನ್ನಿಮಂಟಪದ ನಿವಾಸಿ ಮುಬಾಸಿರ್ ಮಿರ್ಜಾ ಪ್ರಶ್ನಿಸಿದ್ದಾರೆ.

ಬನ್ನಿಮಂಟಪದ ಈ ಬಸ್ ತಂಗುದಾಣದಲ್ಲಿ ಬೆರಳಣಿಕೆಯಷ್ಟು ಪ್ರಯಾಣಿಕರು ನಿಲ್ಲುತ್ತಾರೆ. ಉಳಿದ ಸಮಯದಲ್ಲಿ ಮೂರು ತಂಗುದಾಣ ಖಾಲಿಯಾಗಿರುತ್ತದೆ. ಇದರಿಂದ ಅನಗತ್ಯವಾಗಿ ಎರಡು ಬಸ್ ತಂಗುದಾಣ ನಿರ್ಮಾಣ ಮಾಡಲಾಗಿದೆ. ಈ ಮೂಲಕ ಜನರ ತೆರಿಗೆ ಹಣವನ್ನು ವ್ಯರ್ಥ ಮಾಡುತ್ತಿದ್ದಾರೆ ಎಂದು ಆರೋಪಿಸಿದ್ದಾರೆ. ಮೂರು ಬಸ್ ತಂಗುದಾಣ ಒಂದೇ ಕಡೆ ಇರುವುದರಿಂದ ಬಸ್ ಯಾವ ತಂಗುದಾಣದ ಬಳಿ ನಿಲ್ಲುತ್ತದೆ ಎಂಬ ಗೊಂದಲ ಸಹಜವಾಗಿಯೇ ಪ್ರಯಾಣಿಕರನ್ನು ಕಾಡುತ್ತದೆ. ಅಷ್ಟೆ ಅಲ್ಲದೆ, ಮೂರು ತಂಗುದಾಣದಲ್ಲಿ ಯಾವ ತಂಗುದಾಣದ ಬಳಿ ಬಸ್ ನಿಲುಗಡೆ ಮಾಡಬೇಕು ಎಂಬ ಗೊಂದಲ ಕೂಡ ಬಸ್ ಚಾಲಕನನ್ನೂ ಕಾಡುತ್ತದೆ. ಮೇಲ್ನೋಟಕ್ಕೆ ಒಟ್ಟಿಗೆ ಮೂರು ಬಸ್ ತಂಗುದಾಣ ನಿರ್ಮಾಣ ಮಾಡಿರುವುದರಲ್ಲಿ ಹಗರಣ ನಡೆದಿರುವ ಸಾಧ್ಯತೆ ಇದೆ ಎಂಬ ಆರೋಪಗಳು ಕೇಳಿ ಬಂದಿವೆ.



ಮೈಸೂರಿನ ಜಯಲಕ್ಷ್ಮಿಪುರಂನ ಸೈಂಟ್ ಜೋಸೆಫ್ ಶಾಲೆ ಮುಂಭಾಗ ಅಕ್ಕಪಕ್ಕದಲ್ಲಿ ನಿರ್ಮಾಣವಾಗಿರುವ ಪ್ರಯಾಣಿಕರ ತಂಗುದಾಣ.

ನಗರದ ಕೆಲವು ಬಡಾವಣೆಗಳಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಿರುತ್ತದೆ. ಅಂತಹ ಸ್ಥಳದ ತಂಗುದಾಣದಲ್ಲಿ ನಿಲ್ಲಲು ಪ್ರಯಾಣಿಕರು ತೊಂದರೆ ಅನುಭವಿಸುತ್ತಾರೆ. ಅಂತಹ ಸ್ಥಳ ಬಿಟ್ಟು ಪ್ರಯಾಣಿಕರ ದಟ್ಟಣೆ ಹೆಚ್ಚಿಲ್ಲದ ಸ್ಥಳದಲ್ಲಿ ಅಕ್ಕಪಕ್ಕದಲ್ಲಿ ಸಾಲಾಗಿ ಮೂರು ಬಸ್ ತಂಗುದಾಣ ನಿರ್ಮಾಣ ಮಾಡುವ ಉದ್ದೇಶವೇನಿದೆ ಎಂದು ಪ್ರಶ್ನೆ ಎದುರಾಗಿದೆ.

ಮೈಸೂರಿನ ಒಂಟಿಕೊಪ್ಪಲ್ ಪೊಲೀಸ್ ಠಾಣೆಯಿಂದ ಮಾತೃಮಂಡಳಿ ವೃತ್ತಕ್ಕೆ ಹೋಗುವ ರಸ್ತೆಯಲ್ಲಿ ಕೂಡ 500 ಮೀಟರ್ ಅಂತರದಲ್ಲಿ ಎದುರು ಬದುರಾಗಿ ನಾಲ್ಕು ಪ್ರಯಾಣಿಕರ ತಂಗುದಾಣಗಳಿವೆ.

ಜಯಲಕ್ಷ್ಮಿಪುರಂನ ಸೈಂಟ್ ಜೋಸೆಫ್ ಶಾಲೆ ಮುಂದೆ ಕೂಡ ಅಕ್ಕಪಕ್ಕದಲ್ಲಿ ಎರಡು ಪ್ರಯಾಣಿಕರ ತಂಗುದಾಣ ನಿರ್ಮಾಣ ಮಾಡಲಾಗಿದೆ. ಮೈಸೂರಿನ ಒಂದು ಸ್ಥಳದಲ್ಲಿ ಮಾತ್ರ ಎರಡರಿಂದ ಮೂರು ಪ್ರಯಾಣಿಕರ ತಂಗುದಾಣ ನಿರ್ಮಾಣವಾಗಿದ್ದರೆ ಅರಿವಿಗೆ ಬಾರದೆ ಲೋಪವಾಗಿರಬಹುದು

● 5ನೇ ಪುಟಕ್ಕೆ

ಮೈಸೂರು ಮಿತ್ರ ಸೋಮವಾರ 11 ನವೆಂಬರ್ 2024

ಸತ್ತಂತಿಹ ಕನ್ನಡಿಗರ ಬಡಿದೆಚ್ಚರಿಸು...! ಕಿಚ್ಚಿಗೆ ಬಲಿಯಾದ 'ಗ್ರಂಥಾಲಯ' ರಕ್ಷಿಸು!!

■ ಬಾಪುಲಿಂಗರಾಜೇ ಅರಸ್

ಮೈಸೂರು,ನ.10–ಹಸಿರಾಗಲಿ ಕರ್ನಾಟಕ, ಉಸಿರಾಗಲಿ ಕನ್ನಡ ಘೋಷವಾಕ್ಯದೊಂದಿಗೆ ಪ್ರತಿ ನವೆಂಬರ್ 1ರಂದು ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಕನ್ನಡ... ಕನ್ನಡ... ಜಪಿಸುವವರಿಗೆ ಮೈಸೂರಿನ ರಾಜೀವ್‌ನಗರದಲ್ಲಿ ಸುಟ್ಟು ಕರಕಲಾದ ಕನ್ನಡ ಪುಸ್ತಕ ಭಂಡಾರ 'ಸಾರ್ವಜನಿಕ ಗ್ರಂಥಾಲಯ'ದತ್ತ ಗಮನವೇ ಇಲ್ಲ.

ಟಿವಿ, ಮೊಬೈಲ್, ಸಿನಿಮಾ ಸೇರಿದಂತೆ ಇತರೆ ಮಾಧ್ಯಮಗಳ ಭರಾಟೆಯಲ್ಲಿ ಪುಸ್ತಕ ಓದುವ ಗೀಳು ಇತ್ತೀಚೆಗೆ ಕಡಿಮೆಯಾಗುತ್ತಿದೆ. ದಿನ ಕಳೆದಂತೆ ಪುಸ್ತಕ ಓದುವ ಹವ್ಯಾಸ ಮರೆಯಾಗುತ್ತಿದೆ. ಇಂತಹ ಸಂದರ್ಭದಲ್ಲಿ ಮೈಸೂರಿನ ರಾಜೀವ್‌ನಗರದ ವಾಸಿ 'ಸೈಯದ್ ಇಸಾಖ್' ಕನ್ನಡ ಪ್ರೇಮಿ ಸ್ವಂತ ಖರ್ಚು ಹಾಗೂ ಸಾರ್ವಜನಿಕರ ದೇಣಿಗೆಯಿಂದ ಸಾರ್ವಜನಿಕ ಗ್ರಂಥಾಲಯ ಆರಂಭಿಸಿದರು.

ರಾಜೀವ್‌ನಗರ ಎರಡನೇ ಹಂತದ 5ನೇ ಕ್ರಾಸ್‌ನಲ್ಲಿ 2011ರ ನವೆಂಬರ್ 1ರಂದು ಸೈಯದ್ ಇಸಾಖ್ ಪರಿಶ್ರಮಪಟ್ಟು ಸಾರ್ವಜನಿಕ ಗ್ರಂಥಾಲಯ ಸ್ಥಾಪಿಸಿದ್ದರು. ರಾಜ್ಯದ ಜನರಿಂದ ಸಂಗ್ರಹವಾದ ಪುಸ್ತಕಗಳನ್ನು ಈ ಗ್ರಂಥಾಲಯದಲ್ಲಿ ಇರಿಸಿದ್ದರು. ಹೀಗೆ ಬರೋಬ್ಬರಿ 11 ಸಾವಿರ ಪುಸ್ತಕಗಳನ್ನು ಸಂಗ್ರಹಿಸಿಟ್ಟು, ಜನರನ್ನು ಓದಿಗೆ ಹಚ್ಚಿದರು.



ನೆಲೆ ನಿರೀಕ್ಷೆಯ ಮೈಸೂರಿನ ರಾಜೀವ್‌ನಗರದ ಎರಡನೇ ಹಂತದಲ್ಲಿರುವ ಸೈಯದ್ ಇಸಾಖ್ ಅವರ ಸಾರ್ವಜನಿಕ ಗ್ರಂಥಾಲಯ.

ಅಲ್ಪಸಂಖ್ಯಾತರೇ ಹೆಚ್ಚಿರುವ ಈ ಭಾಗದಲ್ಲಿ ಉರ್ದು ಭಾಷೆಯಲ್ಲಿ ಮಾತನಾಡುವವರು, ಓದುವವರೇ ಹೆಚ್ಚು. ಇಂತಹ ಪ್ರದೇಶದಲ್ಲಿ ಕನ್ನಡ ಪುಸ್ತಕಗಳನ್ನು ಗ್ರಂಥಾಲಯದಲ್ಲಿಟ್ಟ ಸೈಯದ್ ಇಸಾಖ್, ಜನರಿಗೆ ಕನ್ನಡ ಓದಿನ ಹವ್ಯಾಸ ಬೆಳೆಸಿದರು. ಪುಸ್ತಕಗಳಲ್ಲದೆ ದಿನಪತ್ರಿಕೆಗಳನ್ನು ಇಟ್ಟು ಉಚಿತವಾಗಿ ಓದುವ ವ್ಯವಸ್ಥೆ ಮಾಡಿದರು. ಈ ಮೂಲಕ ಮೊಬೈಲ್, ಟಿವಿ, ಸಿನಿಮಾದಂತಹ ಆಧುನಿಕ ಮನೋರಂಜನೆಗೆ ಮಾರುಹೋದ ಜನರಿಗೆ ಪರಿಶ್ರಮ ಪಟ್ಟು ಪುಸ್ತಕ ಓದುವ ಗೀಳು ಹಚ್ಚಿದರು.

5.500 ಚದರಡಿಯ ಸರ್ಕಾರಿ ಜಾಗವನ್ನು ಗ್ರಂಥಾಲಯಕ್ಕಾಗಿ ಮುಡಾ ಮೀಸಲಿಟ್ಟಿತು. ಸೈಯದ್ ಇಸಾಖ್ ಈ ಸ್ಥಳದಲ್ಲಿ ತಾತ್ಕಾಲಿಕ ಸೂರು ನಿರ್ಮಿಸಿ ಗ್ರಂಥಾಲಯ ನಡೆಸುತ್ತಿದ್ದರು. ಪ್ರತಿದಿನ ನೂರಾರು ಮಂದಿ ಇಲ್ಲಿಗೆ ಬಂದು ನಾನಾ ಪುಸ್ತಕ ಓದುತ್ತಿದ್ದರು.

ಆದರೆ ದುರದೃಷ್ಟವಶಾತ್ 2021ರ ಏ.9ರಂದು ಈ ಗ್ರಂಥಾಲಯ ಬೆಂಕಿಗಾಹುತಿಯಾಯಿತು. 11 ಸಾವಿರ ಪುಸ್ತಕಗಳು ಬೆಂಕಿಯ ಕೆನ್ನಾಲಿಗೆಯಲ್ಲಿ ಬೆಂದು ಹೋದವು. ಪುಸ್ತಕವನ್ನು ತನ್ನ ಶಿಶುಗಳಂತೆ ಸಂರಕ್ಷಿಸುತ್ತಿದ್ದ ಸೈಯದ್ ಇಸಾಖ್‌ಗೆ ತೀವ್ರ ಆಘಾತವಾಯಿತು. ಪುಸ್ತಕಗಳು ಬೆಂದ ಬೂದಿಯನ್ನು ಲಾರಿಯಲ್ಲಿ ಸಾಗಿಸುವಾಗ ಹಲವರು ಮಮ್ಮಲ ಮರುಗಿದ್ದರು.

ಒಂದು ಗ್ರಂಥಾಲಯ ನೂರು ದೇವಾಲಯಕ್ಕೆ ಸಮ

ಸೈಯದ್ ಇಸಾಖ್ ಅವರ ಗ್ರಂಥಾಲಯದ ಸುತ್ತಮುತ್ತ ಕನ್ನಡ ಪ್ರೇಮ ಮೆರೆಸುವ ಘೋಷವಾಕ್ಯಗಳು ರಾರಾಜಿಸುತ್ತಿವೆ. 'ಒಂದು ಗ್ರಂಥಾಲಯ ನೂರು ದೇವಾಲಯಕ್ಕೆ ಸಮ', 'ದೇಶ ಸುತ್ತಿ ನೋಡು', 'ಕೋಶ ಓದಿ ನೋಡು', 'ಹಿರಿಯರನ್ನು ಗೌರವಿಸಿ', 'ಕೆಟ್ಟ ಚಟಕ್ಕಿಂತ ಪುಸ್ತಕ ಓದುವ ಚಟ ಒಳ್ಳೆಯದು', 'ಪುಸ್ತಕ ಓದುವುದರಿಂದ ಜ್ಞಾನ ಬೆಳೆಯುತ್ತದೆ', 'ಕನ್ನಡ ನಾಡು ಚಿನ್ನದ ನಾಡು', 'ಸತ್ಯ ಮೇವ ಜಯತೆ', 'ಭಾರತದ ಜನ ಭಾರತೀಯ ಮನ'... ಹೀಗೆ ನಾನಾ ಘೋಷವಾಕ್ಯಗಳು ಜನರ ಗಮನ ಸೆಳೆಯುತ್ತವೆ.

ಪುಸ್ತಕ ಓದುವ ಹವ್ಯಾಸ ಇಲ್ಲದವನು ಕೂಡ ಸೈಯದ್ ಇಸಾಖ್ ಅವರ ಸಾವಿರಾರು ಪುಸ್ತಕ ಭಂಡಾರ ನೋಡಿ ಕುತೂಹಲಕ್ಕಾದರೂ ಗ್ರಂಥಾಲಯಕ್ಕೆ ಹೋಗುತ್ತಾರೆ. ಗ್ರಂಥಾಲಯದ ಒಳಗೆ ಕಾಲಿಟ್ಟರೆ ಸಾಕು ಸೈಯದ್ ಇಸಾಖ್ ಪುಸ್ತಕದ ಮಹತ್ವ ತಿಳಿಸಿ, ಪುಸ್ತಕ ಓದಲು ಉತ್ತೇಜಿಸುತ್ತಾರೆ. ಈಗಲಾದರೂ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಸೈಯದ್ ಇಸಾಖ್ ಅವರ ಗ್ರಂಥಾಲಯಕ್ಕೆ ಶಾಶ್ವತ ಕಟ್ಟಡ ನಿರ್ಮಿಸಿ, ಕನ್ನಡ ತೇರು ಎಳೆಯುತ್ತಿರುವ ಕನ್ನಡ ಪ್ರೇಮಿ ಸೈಯದ್ ಇಸಾಖ್‌ಗೆ ಒತ್ತಾಸೆಯಾಗಿ ನಿಲ್ಲುವರೇ ಕಾದು ನೋಡಬೇಕಿದೆ.

ಮತ್ತೆ ಗ್ರಂಥಾಲಯ ನಿರ್ಮಾಣ ಮಾಡಬೇಕೆಂದು ಸೈಯದ್ ಇಸಾಖ್ ಛಲ ತೊಟ್ಟರು. ವಸತಿ ಸಚಿವ ಜಮೀರ್ ಅಹಮ್ಮದ್ 2 ಲಕ್ಷ, ಅಂದು ಸಂಸದರಾಗಿದ್ದ ಪ್ರತಾಪ್ ಸಿಂಹ 50 ಸಾವಿರ ನೀಡಿದರು. ಸಾರ್ವಜನಿಕರು ಸಹ ದೇಣಿಗೆ ನೀಡಿದರು. ಎಲ್ಲಾ ಹಣ ಒಟ್ಟುಗೂಡಿಸಿ 3.50 ಲಕ್ಷ ರೂಪಾಯಿ ವೆಚ್ಚದಲ್ಲಿ ಇಸಾಖ್ ಮತ್ತೊಂದು ಸೂರು ನಿರ್ಮಿಸಿ, ಗ್ರಂಥಾಲಯ ಮತ್ತೆ ಸ್ಥಾಪಿಸಿದರು.

ಮೈಸೂರು ಮಾತ್ರವಲ್ಲದೆ ಸುತ್ತಮುತ್ತಲ ಪ್ರದೇಶದ ನೂರಾರು ಮಂದಿ ತಮ್ಮ ಬಳಿ ಇದ್ದ ಪುಸ್ತಕಗಳನ್ನು ಉದಾರವಾಗಿ ನೀಡಿದರು. ಈ ಮೂಲಕ ತಗಡಿನ ಶೀಟ್‌ನಿಂದ ನಿರ್ಮಿಸಿದ್ದ ಕೊಠಡಿಯಲ್ಲಿ ಕೊನೆಗೂ ಸೈಯದ್ ಇಸಾಖ್ ಗ್ರಂಥಾಲಯ ಆರಂಭಿಸಿದರು. ಈಗ ಗ್ರಂಥಾಲಯದಲ್ಲಿ ಬರೋಬ್ಬರಿ 33 ಸಾವಿರ ಪುಸ್ತಕಗಳ ಸಂಗ್ರಹವಿದೆ.

ಸಾವಿರಾರು ಪುಸ್ತಕಗಳ ಭಂಡಾರವಾದ ಇಲ್ಲಿ ಶಾಶ್ವತ ಕಟ್ಟಡ ನಿರ್ಮಾಣ ಮಾಡಬೇಕೆಂಬುದು ಸೈಯದ್ ಇಸಾಖ್ ಕನಸು. ವಿವಿಧ ಪಕ್ಷಗಳ ಜನಪ್ರತಿನಿಧಿಗಳು, ಅಧಿಕಾರಿಗಳು ಶಾಶ್ವತ ಕಟ್ಟಡ ನಿರ್ಮಾಣಕ್ಕೆ ನೆರವಾಗುವ ಭರವಸೆ ನೀಡಿದರು. ಆದರೆ ಮೂರು ವರ್ಷವಾದರೂ ಅವರ ಆಸೆ ಕೈಗೂಡಿಲ್ಲ. ಯಾರೂ ಸಹಾಯ ಮಾಡಲು ಮುಂದೆ ಬಂದಿಲ್ಲ.

ಬೆಳಗ್ಗೆ 7.30ರಿಂದ ರಾತ್ರಿ 7.30ರ ತನಕ ಗ್ರಂಥಾಲಯ ತೆರೆದಿರುವ ಸೈಯದ್ ಇಸಾಖ್ ಇದನ್ನೇ ದೇವಾಲಯವೆಂದು ಪರಿಭಾವಿಸಿದ್ದಾರೆ. ಪುಸ್ತಕ ಪ್ರೇಮಿಗಳು ಬಯಸಿದ ಪುಸ್ತಕವನ್ನು ಹುಡುಕಿ ಕೊಡುತ್ತಾರೆ.

ಯಾರಾದರೂ ಸಹಾಯ ಮಾಡಿದರೆ, ವಿದ್ಯುತ್ ಬಿಲ್ ಪಾವತಿ ಮಾಡಿ, ಹರಸಾಹಸಪಟ್ಟು ನಿರ್ವಹಣೆ ಮಾಡುತ್ತಾ ಬಂದಿದ್ದಾರೆ. ಸೈಯದ್ ಇಸಾಖ್ ಅವರ ಗ್ರಂಥಾಲಯ ಸುಟ್ಟು ಹೋಗಿ ಮೂರು ವರ್ಷವಾಯಿತು. ಅಲ್ಲಿಂದ ಇಲ್ಲಿವರೆಗೆ ಮೂರು ಬಾರಿ ಕನ್ನಡ ರಾಜ್ಯೋತ್ಸವ ಆಚರಿಸಲಾಯಿತು. ಆದರೆ ಯಾರೊಬ್ಬರೂ ಕನ್ನಡ ಭಾಷೆ ದೇಗುಲವಾದ ಇಂತಹ ಗ್ರಂಥಾಲಯಕ್ಕೆ ಮುಕ್ತಿ ಕಾಣಿಸುವ ಮನಸ್ಸು ಮಾಡಿಲ್ಲ.

ಕನ್ನಡ ಹೆಚ್ಚು ಮಾತನಾಡುವ ಕಡೆ ಕನ್ನಡ ಬೆಳೆಸುವುದೇ ದೊಡ್ಡ ವಿಚಾರವಲ್ಲ. ಬಹುತೇಕ ಉರ್ದು ಮಾತನಾಡುವ ಈ ಭಾಗದ ಜನರಿಗೆ ಕನ್ನಡ ಕಲಿಸಬೇಕು. ಇಲ್ಲದಿದ್ದರೆ ಮುಂದೊಂದು ದಿನ ಕನ್ನಡ ಮಾತನಾಡುವವರನ್ನು ಹುಡುಕುವ ಪರಿಸ್ಥಿತಿ ಬರುತ್ತದೆ ಎಂದು ಸೈಯದ್ ಇಸಾಖ್ ಆತಂಕ ವ್ಯಕ್ತಪಡಿಸಿದ್ದಾರೆ.

ಸಂದೇಶ್ ದಿ ಪ್ರಿನ್ಸ್‌ನಲ್ಲಿ ಕೇಕ್ ಮಿಕ್ಸಿಂಗ್....



ಮೈಸೂರಿನ ನಜರ್‌ಬಾದಿನಲ್ಲಿರುವ ಸಂದೇಶ್ ದಿ ಪ್ರಿನ್ಸ್ ಹೋಟೆಲ್‌ನಲ್ಲಿ ಭಾನುವಾರ ಕ್ರಿಸ್‌ಮಸ್ ಪ್ರಯುಕ್ತ ಕೇಕ್ ಮಿಕ್ಸಿಂಗ್‌ಗೆ ಚಾಲನೆ ನೀಡಲಾಯಿತು. ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದ ವಿದೇಶಿ ಪ್ರವಾಸಿಗರು ಸಹ ಕೇಕ್ ಮಿಕ್ಸಿಂಗ್‌ಗೆ ಕೈ ಜೋಡಿಸಿದರು. ಕೇಕ್ ತಯಾರಿಸಿ ಕ್ರಿಸ್‌ಮಸ್ ವೇಳೆ ಹೋಟೆಲ್‌ನಲ್ಲಿ ಹಂಚಿಕೆ ಮಾಡಲಾಗುತ್ತದೆ. ಸಂದೇಶ್ ಗ್ರೂಪ್ ಆಫ್ ಹೋಟೆಲ್ಸ್‌ನ ಅಧ್ಯಕ್ಷರೂ ಆದ ಮಾಜಿ ವಿಧಾನ ಪರಿಷತ್ ಸದಸ್ಯ ಸಂದೇಶ್ ನಾಗರಾಜು, ಇವರ ಪುತ್ರರಾದ ಎನ್.ಸಂದೇಶ್, ಮಂಜೇಶ್, ಮಾಜಿ ಮೇಯರ್ ಸಂದೇಶ್ ಸ್ವಾಮಿಯವರ ಪುತ್ರರೂ ಆದ ಪಾಲಿಕೆ ಮಾಜಿ ಸದಸ್ಯ ಸಾತ್ವಿಕ್ ಚಿತ್ರದಲ್ಲಿದ್ದಾರೆ.

ತಪ್ಪು ಮಾಹಿತಿಗಳನ್ನೊಳಗೊಂಡಿರುವ ಸದಾಶಿವ ಆಯೋಗದ ವರದಿ ಒಪ್ಪಲು ಸಾಧ್ಯವಿಲ್ಲ

'ವೈಜ್ಞಾನಿಕವಾಗಿ ಒಳಮೀಸಲಾತಿ ಜಾರಿ' ವಿಚಾರ ಸಂಕಿರಣದಲ್ಲಿ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಅಭಿಮತ

ಮೈಸೂರು, ನ.10(ಬಿಎಲ್‌ಯು)– ಬಹಳಷ್ಟು ತಪ್ಪು ಮಾಹಿತಿಗಳನ್ನು ಒಳಗೊಂಡಿರುವ ನ್ಯಾಯಮೂರ್ತಿ ಎ.ಜೆ.ಸದಾಶಿವ ಆಯೋಗದ ವರದಿಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎಂದು ಕರ್ನಾಟಕ ರಾಜ್ಯ ಸರ್ಕಾರಿ ಎಸ್‌ಸಿ, ಎಸ್‌ಟಿ ನೌಕರರ ಸಂಘದ ಅಧ್ಯಕ್ಷ ಡಿ.ಚಂದ್ರಶೇಖರಯ್ಯ ಹೇಳಿದರು.

ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಮೈಸೂರು ವಿವಿ ಸಂಶೋಧಕರ ಸಂಘ ಮತ್ತು ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ಸಂಯುಕ್ತವಾಗಿ ಆಯೋಜಿಸಿದ್ದ ವೈಜ್ಞಾನಿಕವಾಗಿ ಒಳ ಮೀಸಲಾತಿ ಜಾರಿ ಕುರಿತ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿದ ಅವರು, ಬಹಳಷ್ಟು ತಪ್ಪು ಮಾಹಿತಿಗಳನ್ನು ನೀಡಿರುವ ಸದಾಶಿವ ಆಯೋಗದ ವರದಿಯನ್ನು ಯಾವುದೇ ಕಾರಣಕ್ಕೂ ಒಪ್ಪಲು ಸಾಧ್ಯವಿಲ್ಲ ಎಂದರು.

ಪರಿಶಿಷ್ಟ ಜಾತಿಯ ಸರ್ಕಾರಿ ನೌಕರರ ಸಂಖ್ಯೆ, ಕೃಷಿಕರ ಸಂಖ್ಯೆ ಹಾಗೂ ಒಟ್ಟಾರೆ ಜನಸಂಖ್ಯೆ ಸೇರಿದಂತೆ ಪ್ರತಿಯೊಂದು ವಿಚಾರಗಳ ಅಂಕಿ ಅಂಶಗಳು ನಿಖರವಾಗಿಲ್ಲ. ಪರಿಶಿಷ್ಟ ಜಾತಿಯಲ್ಲಿ 9 ಲಕ್ಷ ಕೃಷಿಕರಿದ್ದರೆ, ವರದಿಯಲ್ಲಿ 3 ಲಕ್ಷ ಎಂದು ಉಲ್ಲೇಖಿಸಲಾಗಿದ್ದು, ಉಳಿದ ರೈತರನ್ನು ಕೈ ಬಿಡಲಾಗಿದೆ. ರಾಜ್ಯದಲ್ಲಿ 1.4 ಕೋಟಿ ಪರಿಶಿಷ್ಟ ಜಾತಿಯವರಿದ್ದರೆ, 96.66 ಲಕ್ಷ ಎಂದು ಉಲ್ಲೇಖ ಮಾಡಲಾಗಿದೆ. ಉಳಿದ 13 ಲಕ್ಷ ಜನರನ್ನು ವರದಿಯಿಂದ ಹೊರಗಿಡಲಾಗಿದೆ ಎಂದು ಆಪಾದಿಸಿದರು.



ಮೈಸೂರಿನ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ ವೈಜ್ಞಾನಿಕವಾಗಿ ಒಳ ಮೀಸಲಾತಿ ಜಾರಿ ಕುರಿತ ವಿಚಾರ ಸಂಕಿರಣವನ್ನು ಡಿ.ಚಂದ್ರಶೇಖರಯ್ಯ ಉದ್ಘಾಟಿಸಿದರು.

ಪರಿಶಿಷ್ಟ ಜಾತಿಯಲ್ಲಿ ಉಪ ಪಂಗಡಗಳನ್ನು ಕೈ ಬಿಡಲಾಗಿದೆ. ವರದಿಯ ಕೊನೆಯ ಮೂರು ಹಾಳೆಗಳಲ್ಲಿ ಕೈ ಬರಹವಿದೆ. ಇವೆಲ್ಲಾ ಸಂವಿಧಾನ ವಿರೋಧಿಯಾಗಿದ್ದು, ಬಹಳಷ್ಟು ಮಾಹಿತಿಗಳು ತಪ್ಪಿನಿಂದ ಕೂಡಿದ್ದು, ನಿಖರ ಅಂಕಿ ಅಂಶಗಳಿಲ್ಲ. ಈ ಹಿನ್ನೆಲೆಯಲ್ಲಿ ಮತ್ತೊಮ್ಮೆ ಪರಿಶಿಷ್ಟ ಜಾತಿಯವರಿಗೆ ಸಂಬಂಧಿಸಿದಂತೆ ಪ್ರತ್ಯೇಕ ಜಾತಿ ಗಣತಿ ಮಾಡಿಸಬೇಕು. ಇದಕ್ಕಾಗಿ 250 ಕೋಟಿ ರೂಪಾಯಿ ಮೀಸಲಿಟ್ಟು ವರದಿ ತಯಾರಿಸಬೇಕು. ಜೊತೆಗೆ ಮೂರು ತಿಂಗಳಲ್ಲಿ ವರದಿ ಪಡೆಯಬೇಕು ಎಂದು ಸರ್ಕಾರಕ್ಕೆ ಮನವಿ ಮಾಡಿದರು.

ಸದಾಶಿವ ಆಯೋಗದ ವರದಿ ಅವೈಜ್ಞಾನಿಕವಾಗಿದೆ ಎಂಬುದನ್ನು ತಿಳಿಯದ ಬಹಳಷ್ಟು ಜನರು ವರದಿ ಪರವಾಗಿ ವಾದ ಮಾಡುತ್ತಿದ್ದಾರೆ. ಗೋವಿಂದಯ್ಯ ಅವರು ದೇವನೂರು ಮಹಾದೇವ ಅವರನ್ನು ರಾಜಕೀಯಕ್ಕೆ ಎಳೆದು ತಂದಿದ್ದಾರೆ. ಮುಂದೆ ಇಂತಹ ಹೇಳಿಕೆ ನೀಡಿದರೆ ತಕ್ಕ ಉತ್ತರ ನೀಡಬೇಕಾಗುತ್ತದೆ ಎಂದು ಚಂದ್ರಶೇಖರಯ್ಯ ಎಚ್ಚರಿಸಿದರು.

ಮೈಸೂರಿನ ಉರಿಲಿಂಗಪೆದ್ದಿ ಮಠದ ಜ್ಞಾನಪ್ರಕಾಶ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಲೋಕಸೇವಾ ಆಯೋಗದ ಮಾಜಿ ಸದಸ್ಯ ದಾಸಯ್ಯ, ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಆರ್.ರಾಜು, ಲೇಖಕ ಸಿ.ಹರಕುಮಾರ್, ಮಾಜಿ ಮೇಯರ್ ಪುರುಷೋತ್ತಮ್, ಪರಿಶಿಷ್ಟ ಜಾತಿಗಳ ಒಳ ಮೀಸಲಾತಿ ಅನುಷ್ಠಾನ ಜಾಗೃತ ಸಮಿತಿ ಸಂಚಾಲಕ ಡಾ.ನವೀನ್ ಮನಿಯ, ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎ.ಆರ್.ಕಾಂತರಾಜು, ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಕರ್ನಾಟಕ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಭಾಸ್ಕರ್ ಇನ್ನಿತರರು ಉಪಸ್ಥಿತರಿದ್ದರು.

ಮುಡಾದ ಶೇ.50:50 ಅನುಪಾತದ ನಿವೇಶನ ಖರೀದಿದಾರರಿಗೆ ಮತ್ತೊಂದು ಶಾಕ್

ಮನೆ, ಕಾಂಪ್ಲೆಕ್ಸ್‌ಗಳ ನಕ್ಷೆ ರದ್ದು ಮಾಡಲು ಶಾಸಕ ಶ್ರೀವತ್ಸ ಮನವಿ

ಮೈಸೂರು, ನ.10(ಬಿಎಲ್‌ಯು)– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಿಂದ ಮಂಜೂರಾಗಿರುವ ಶೇಕಡ 50:50 ಅನುಪಾತದ ನಿವೇಶನಗಳಲ್ಲಿ ಈಗಾಗಲೇ ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ನಕ್ಷೆ ಅನುಮೋದನೆ ಪಡೆದಿರುವುದನ್ನು ರದ್ದು ಮಾಡಬೇಕು ಎಂದು ಮೈಸೂರಿನ ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾಧಿಕಾರಿ ಲಕ್ಷ್ಮಿಕಾಂತ ರೆಡ್ಡಿ ಅವರಿಗೆ ಪತ್ರ ಬರೆದಿದ್ದಾರೆ.



ಟಿ.ಎಸ್.ಶ್ರೀವತ್ಸ

ನವೆಂಬರ್ 7ರಂದು ನಡೆದ ಮುಡಾ ಸಭೆಯಲ್ಲಿ ಶೇಕಡ 50:50 ಅನುಪಾತದ ನಿವೇಶನಗಳನ್ನು ರದ್ದು ಮಾಡಲು ಮನವಿ ಸಲ್ಲಿಸಿದಾಗ ನ್ಯಾಯಮೂರ್ತಿ ದೇಸಾಯಿ ಆಯೋಗದ ವರದಿ ನಂತರ ಕ್ರಮ ಕೈಗೊಳ್ಳೋಣ ಎಂದು ತಿಳಿಸಿದ್ದೀರಾ. ಇದಕ್ಕೆ ಸಭೆಯಲ್ಲಿ ಭಾಗವಹಿಸಿದ್ದ ಹಿರಿಯ ಸದಸ್ಯರು ಬೆಂಬಲಿಸಿದ್ದಾರೆ ಎಂದು ಹೇಳಿದ್ದಾರೆ.

ಆದರೆ ಈಗ ಶೇಕಡ 50:50 ಅನುಪಾತದ ನಿವೇಶನಗಳಲ್ಲಿ ಈಗಾಗಲೇ ವಸತಿ ಮತ್ತು ವಾಣಿಜ್ಯ ಉದ್ದೇಶಕ್ಕಾಗಿ ಮುಡಾದಿಂದ ನಕ್ಷೆ ಪಡೆದಿರುವುದನ್ನು ರದ್ದು ಮಾಡಬೇಕು. ಅಷ್ಟೆ ಅಲ್ಲದೆ ಇನ್ನು ಮುಂದೆ ಶೇಕಡ 50:50 ಅನುಪಾತದ ನಿವೇಶನಗಳಿಗೆ ನಕ್ಷೆ ಕೋರಿದರೆ ಮಂಜೂರು ಮಾಡಬಾರದೆಂದು ಅಧಿಕಾರಿಗಳಿಗೆ ಸೂಚನೆ ನೀಡಬೇಕೆಂದು ಕೋರುತ್ತೇನೆ ಎಂದು ಶ್ರೀವತ್ಸ ಮನವಿ ಮಾಡಿದ್ದಾರೆ.

> “ ಶ್ರೀವತ್ಸ ಮಾಡಿರುವ ಮನವಿ ಸಂಬಂಧ ಚರ್ಚೆ ನಡೆಸಲಾಗುತ್ತಿದೆ. ಏನೇ ಕ್ರಮ ಕೈಗೊಂಡರೂ ಅದನ್ನು ಕಾನೂನು ವ್ಯಾಪ್ತಿಯಲ್ಲಿ ತೆಗೆದುಕೊಳ್ಳಲಾಗುವುದು. ಮುಡಾ ಪ್ರಕರಣ ಸಂಬಂಧ ಈಗಾಗಲೇ ನ್ಯಾಯಮೂರ್ತಿ ದೇಸಾಯಿ ಆಯೋಗ ತನಿಖೆ ನಡೆಸುತ್ತಿದೆ. ಈಗ ಶೇಕಡ 50:50 ಅನುಪಾತದ ನಿವೇಶನಗಳ ನಕ್ಷೆ ರದ್ದು ಮಾಡುವ ಶ್ರೀವತ್ಸ ಮನವಿ ಬಗ್ಗೆ ಆಯೋಗದ ಸಲಹೆ ಪಡೆಯಲಾಗುವುದು.
>
> –ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ.

ಕನ್ನಡ ಚಿತ್ರರಂಗದ ಮಹಾನ್ ಸ್ಫೂರ್ತಿ ಶಂಕರ್‌ನಾಗ್ ಎಂದೆಂದೂ ಅಮರ



ಮೈಸೂರಿನ ಚಾಮರಾಜಪುರಂನಲ್ಲಿರುವ ಹೊಯ್ಸಳ ಟ್ರಸ್ಟ್ ವತಿಯಿಂದ ಶಂಕರ್‌ನಾಗ್ ಹುಟ್ಟುಹಬ್ಬದ ಸಂಸ್ಮರಣಾ ಕಾರ್ಯಕ್ರಮ ನಡೆಯಿತು.


ಮೈಸೂರು, ನ. 10–ಕನ್ನಡ ಚಲನಚಿತ್ರರಂಗದ ನಿರ್ದೇಶಕ, ನಟ, ನಿರ್ಮಾಪಕ, ಕಿರುತೆರೆ ಮೂಲಕ ಇಡೀ ಭಾರತದಲ್ಲಿ ಅಪಾರ ಕೀರ್ತಿ ಗಳಿಸಿದ ಶಂಕರ್‌ನಾಗ್ ಅವರ ಹುಟ್ಟುಹಬ್ಬದ ಅಂಗವಾಗಿ ಸಂಸ್ಮರಣಾ ಕಾರ್ಯಕ್ರಮವನ್ನು ನಗರದ ಚಾಮರಾಜಪುರಂನಲ್ಲಿರುವ ಹೊಯ್ಸಳ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು.

ಶಂಕರ್‌ನಾಗ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಸಿಹಿ ವಿತರಿಸಿ, ಮಾತನಾಡಿದ ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸವರಾಜ್ ಬಸಪ್ಪ, ಶಂಕರ್‌ನಾಗ್ ಕನ್ನಡ ಚಿತ್ರರಂಗದ ಅದ್ಭುತ ಪ್ರತಿಭಾವಂತ. ಅವರ ದೂರದೃಷ್ಟಿ, ತಂತ್ರಜ್ಞಾನ, ಕನ್ನಡ ಚಿತ್ರರಂಗ ಎಂದೂ ಮರೆಯಲಾಗದು. ಅಭಿವೃದ್ಧಿ ದೃಷ್ಟಿಕೋನ ಕನ್ನಡ ಚಿತ್ರರಂಗದ ಬೆಳವಣಿಗೆ ಕೊಡುಗೆ ಅಪಾರ ಎಂದು ತಿಳಿಸಿದರು.

ಹೊಯ್ಸಳ ಟ್ರಸ್ಟ್ ಅಧ್ಯಕ್ಷ ರಾಜೇಶ್ ಪಳನಿ ಮಾತನಾಡಿ, ಬೆಂಗಳೂರಿನ ಮೆಟ್ರೋ ಯೋಜನೆ, ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಕನಸು ಕಂಡಿದ್ದ ಶಂಕರ್‌ನಾಗ್ ತಮ್ಮ ಚಲನಚಿತ್ರಗಳ ಮೂಲಕ ಸಮಾಜದ ಪರಿವರ್ತನೆಗೆ ವಿಶೇಷವಾಗಿ ಆಟೋ ಚಾಲಕರಿಗೆ ಮಹಾನ್ ಗೌರವವನ್ನು ತಂದು ಕೊಟ್ಟವರು ಎಂದು ತಿಳಿಸಿದರು.

ಈ ವೇಳೆ ಜಿ.ರಾಘವೇಂದ್ರ, ಎಸ್.ಎನ್.ರಾಜೇಶ್, ದೂರ ರಾಜಣ್ಣ, ವಿನಯ್ ಕಣಗಾಲ್,ಶ್ರೀಕಾಂತ್ ಕಶ್ಯಪ್, ಚಕ್ರಪಾಣಿ, ಸಚಿನ್ ನಾಯಕ್, ಸುಹಾಸ್, ಶಿವು, ಮಂಜುನಾಥ್, ಮಹಾನ್ ಶ್ರೇಯಸ್ ಇದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.11.2024 ಸೋಮವಾರ, ಮಳೆ ನಕ್ಷತ್ರ: ವಿಶಾಖ, 06.11.2024ರಿಂದ 18.11.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಕಾರ್ತಿಕ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಶತಭಿಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ ಟ್ರಸ್ಟ್ :** ಕಾರ್ತಿಕ ಮಾಸದ ವಿಶೇಷ ಪೂಜಾ ಮಹೋತ್ಸವ, ಅಗ್ನಿ ಕೊಂಡೋತ್ಸವ ಮತ್ತು ಗಿರಿಜಾ ಕಲ್ಯಾಣ, ಬೆಳಗ್ಗೆ 7 ಗಂಟೆಗೆ ಏಕಾದಶಾವಾರ ರುದ್ರಾಭಿಷೇಕ, ಶ್ರೀ ವೀರಭದ್ರೇಶ್ವರ ಸ್ವಾಮಿ ಹಾಗೂ ಶ್ರೀ ಚಾಮರಾಜೇಶ್ವರಸ್ವಾಮಿಗೆ ತೈಲಾಭಿಷೇಕ, ಪಂಚಾಮೃತ ಅಭಿಷೇಕ, ಮಹಾರುದ್ರಾಭಿಷೇಕ ಮತ್ತು ಸಹಸ್ರ ಬಿಲ್ವಾರ್ಚನೆ, ಮಹಾಮಂಗಳಾರತಿ, ಮಧ್ಯಾಹ್ನ 12 ಗಂಟೆಗೆ ಪ್ರಾಕಾರೋತ್ಸವ, ಪ್ರಸಾದ ವಿನಿಯೋಗ, ಸಂಜೆ 7 ಗಂಟೆಗೆ ಪ್ರಮುಖ ರಾಜ ಬೀದಿಗಳಲ್ಲಿ ಉತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸಂಧಿವಾತಕ್ಕೆ ಯೋಗ ಮತ್ತು ಆಕ್ಯೂಪಂಕ್ಚರ್ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9ರಿಂದ.

■ **ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಕುವೆಂಪು ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು:** ರಾಷ್ಟ್ರಕವಿ ಕುವೆಂಪು ಅವರ 31ನೇ ಸಂಸ್ಮರಣೆ ಪ್ರಯುಕ್ತ ಕುವೆಂಪು ಕಾವ್ಯ: ವಿಭಿನ್ನ ನೆಲೆಗಳು ಒಂದು ದಿನದ ರಾಷ್ಟ್ರೀಯ ವಿಚಾರ ಸಂಕಿರಣ, ಸ್ಥಳ: ಪ್ರೊ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ, ಕಾಲೇಜು ಆವರಣ, ಬೆಳಗ್ಗೆ 9.30ಕ್ಕೆ.

■ **ಸೂರ್ಯಮಂಡಲ ಯೋಗ ಶಾಲಾ (ಎಸ್‌ಪಿಎಂ ಟ್ರಸ್ಟ್), ಪರಮಹಂಸ ಯೋಗ ಮಹಾವಿದ್ಯಾಲಯ, ಇಂಟರ್‌ನ್ಯಾಷನಲ್ ಯೋಗ ಸ್ಕೂಲ್:** ನೂತನ ಸೂರ್ಯ ಮಂಡಲ ಯೋಗ ಶಾಲಾ ಶಾಖೆ ಉದ್ಘಾಟನೆ, ಸ್ಥಳ: ಸುಮನ ಕಾಂಪ್ಲೆಕ್ಸ್, ಎಸ್‌ಬಿಐ ಬ್ಯಾಂಕ್ 1ನೇ ಮಹಡಿ, ಗೋಕುಲಂ, ಬೆಳಗ್ಗೆ 9.30ಕ್ಕೆ

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.

■ **ಶ್ರೀ ಮಲೆ ಮಹದೇಶ್ವರಸ್ವಾಮಿ ದೇವಸ್ಥಾನ ಟ್ರಸ್ಟ್:** 47ನೇ ವರ್ಷದ ಕಾರ್ತಿಕ ಮಾಸದ ಶ್ರೀ ಮಲೆ ಮಹದೇಶ್ವರಸ್ವಾಮಿ ಪೂಜಾ ಮಹೋತ್ಸವ, 26ನೇ ವರ್ಷದ ಮಹಾಕುಂಭಾಭಿಷೇಕ, 10ನೇ ವರ್ಷದ ಹಾಲರವಿ ಸೇವೆ, ಬೆಳಗ್ಗೆ 6 ಗಂಟೆಗೆ ಶ್ರೀ ಮಹದೇಶ್ವರ ಸ್ವಾಮಿಗೆ ಮಹಾರುದ್ರಾಭಿಷೇಕ, ವಿಶೇಷ ಪೂಜೆ, ಹೂವಿನ ಅಲಂಕಾರ, ಬೆಳಗ್ಗೆ 10 ಗಂಟೆಗೆ ಶ್ರೀ ಮಲೆ ಮಹದೇಶ್ವರಸ್ವಾಮಿ ಮಹಾ ಉತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ಗರಡಿಕೇರಿ, ಲಷ್ಕರ್ ಮೊಹಲ್ಲಾ.

■ **ಕಾವೇರಿ ಆಯುರ್ವೇದ ಆಸ್ಪತ್ರೆ :** ಕೂದಲು ಉದುರುವಿಕೆಗೆ ಉಚಿತ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ.

■ **ಪ್ರಜ್ಞಾವಂತ ನಾಗರಿಕ ವೇದಿಕೆ:** ವೀರ ವನಿತೆ ಒನಕೆ ಓಬವ್ವ ಜಯಂತಿ ಆಚರಣೆ, ಮುಖ್ಯ ಅತಿಥಿಗಳು: ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಸ್ಥಳ: ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನ, ನಾರಾಯಣಶಾಸ್ತ್ರಿ ರಸ್ತೆ, ಬೆಳಗ್ಗೆ 11.30ಕ್ಕೆ.

■ **ವ್ಯವಸ್ಥಾಪಕರು:** ವಕ್ಫ್ ಮತ್ತು ರೈತರ ಭೂಮಿಯ ವಿಚಾರದಲ್ಲಿ ಹುಟ್ಟಿಕೊಂಡಿರುವ ಗೊಂದಲ ಎಷ್ಟು ಸತ್ಯ, ಎಷ್ಟು ಸುಳ್ಳು, ಎಷ್ಟು ರಾಜಕೀಯ ವಿಚಾರ ಕುರಿತು ಸಂಕಿರಣ, ಭಾಗವಹಿಸುವವರು: ನುರಿತ ಕಾನೂನು ಸಲಹೆಗಾರರು, ರೆವಿನ್ಯೂ ಇಲಾಖೆ ಅರಿವಿರುವವರು, ರೈತ ಮುಖಂಡರು, ಮುಸ್ಲಿಂ ಸಮುದಾಯ, ಸ್ಥಳ: ನಳಪಾಕ್ ಹೋಟೆಲ್, ಮಧ್ಯಾಹ್ನ 12 ಗಂಟೆಗೆ

■ **ಹೆಚ್.ವಿ.ರಾಜೀವ್ ಸ್ನೇಹ ಬಳಗ :** ತುಳಸಿ ಹಬ್ಬದ ಅಂಗವಾಗಿ 600 ಶ್ರೀ ಕೃಷ್ಣ ತುಳಸಿ ಮತ್ತು ಬೆಟ್ಟದನಲ್ಲಿಕಾಯಿ ಗಿಡ ಉಚಿತ ವಿತರಣೆ, ಸ್ಥಳ: ನಾಗರಿಕ ವೇದಿಕೆ, ಶ್ರೀ ಪ್ರಸನ್ನ ಶಿವಲಿಂಗೇಶ್ವರ ಸ್ವಾಮಿ ದೇವಸ್ಥಾನ, ವಿಶ್ವಮಾನವ ಜೋಡಿ ರಸ್ತೆ, ಕುವೆಂಪುನಗರ, ಸಂಜೆ 5.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10–ಚಿಂತನ, ಡಾ.ನಾ.ದಾಮೋದರ್ ಶೆಟ್ಟಿ, 6.15–ಗೀತಾರಾಧನ, 6.35 ಮತ್ತು ಸಂಜೆ 6.10: ಅಂಚೆ –ಅಂಕನ–ಆಕಾಶವಾಣಿ ಅಂಕಣ,ಪ್ರಸ್ತುತಿ: ಡಾ.ಅಮ್ಮಸಂದ್ರ ಸುರೇಶ ಹಾಗೂ ಎಂ.ಎನ್.ವಿಜಯಲಕ್ಷ್ಮಿ, ಪ್ರಾಯೋಜಕರು: ಭಾರತೀಯ ಅಂಚೆ, ಮೈಸೂರು ವಿಭಾಗ, 6.40–ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಪಿ.ಸುರಭಿ, ವ್ಯಾಖ್ಯಾನ–ಡಾ.ಲತಾ, ಮೈಸೂರು, 6.50–ರೈತರಿಗೆ ಸಲಹೆ, 7.15– “ಭರವಸೆ ಹೊನಲು–ವೈದ್ಯರ ಕಿವಿಮಾತು”–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಟ್ರಸ್ಟ್‌ವೆಲ್ ಆಸ್ಪತ್ರೆ, ಜೆ.ಸಿ.ರಸ್ತೆ, ಬೆಂಗಳೂರು, 8.30–ಕನ್ನಡ ಚಿತ್ರಗೀತೆಗಳು, 9.00–ನೆನಪಿನಂಗಳ (ಧ್ವನಿ ಭಂಡಾರದಿಂದ): ಕನ್ನಡ ಸಾಹಿತ್ಯ ಕ್ಷೇತ್ರದ ಹಿರಿಯ ವಿದ್ವಾಂಸರಾದ ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ ಅವರೊಂದಿಗೆ ಡಾ.ಬಿ.ವಿ.ವಸಂತಕುಮಾರ್ ನಡೆಸಿದ್ದ ಸಂವಾದದ ಎರಡನೇ ಭಾಗ. 10.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಶ್ರೀವತ್ಸಲಂ. ಜೆ.ಮೆನನ್–ಹಾಡುಗಾರಿಕೆ, 11.00–ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನೇರ ಫೋನ್ ಇನ್ ಕಾರ್ಯಕ್ರಮ–ಗೇಮ್ ಶೋ, ಪ್ರಸ್ತುತಿ: ದಿಗ್ವಿಜಯ್. ಬಿ ಮತ್ತು ಕೀರ್ತನ. ವಿ, 12.05–ವನಿತಾ ವಿಹಾರ–1. ಮಾದೇವಿ ಕೋಂ ವೆಂಕಟರಮಣ... ಕಥೆ–ಬರೆದು ಪ್ರಸ್ತುತಪಡಿಸುತ್ತಾರೆ –ರೇಣುಕಾ ರಮಾನಂದ. 2. ಸ್ವರಚಿತ ಕವನ ವಾಚನ–ಎ.ಎಂ.ಜಯಶ್ರೀ ಅವರಿಂದ. ಕಾರ್ಯಕ್ರಮ ಪ್ರಸ್ತುತಿ–ಮಂಜುಳಾ ಪುರಾಣಿಕ. 12.35–ದೇವರನಾಮ–ಅಂಜನಾ ಡಿ.ಕುಂಬ್ಳೆ, 12.45–ನಮ್ಮ ಆರೋಗ್ಯ: ವಿಶ್ವ ಮಧುಮೇಹ ದಿನಾಚರಣೆಯ ಸಂದರ್ಭದಲ್ಲಿ 'ಮಧುಮೇಹ ನಿರ್ವಹಣೆಯಲ್ಲಿ ಆಧುನಿಕ ತಂತ್ರಜ್ಞಾನದ ಬಳಕೆ' ಕುರಿತು ಮಧುಮೇಹ ತಜ್ಞರಾದ ಡಾ.ರೇಣುಕಾಪ್ರಸಾದ್ ಎ.ಆರ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 1.00–ಚಿತ್ರಗೀತೆಗಳು, 1.20–ಭಾವಗೀತೆಗಳು, 2.40–ಚಿತ್ರಗೀತೆಗಳು, 3.00–ಕರ್ನಾಟಕ ಶಾಸ್ತ್ರೀಯ ಸಂಗೀತ: ಪಲ್ಲಡಂ. ಎಸ್.ವೆಂಕಟ ರಮಣರಾವ್–ಹಾರ್ಮೋನಿಯಂ, 4.00–ಮಹಿಳಾರಂಗ–“ನಾನು ನನ್ನ ಕಂಪನಿ” ಮನೆಯಲ್ಲಿಯೇ ಆರೋಗ್ಯಕರ ಪಾನೀಯ ಮಿಶ್ರಣವನ್ನು ತಯಾರಿಸುವ ಪ್ರಿಯಾಂಕ ಪುನೀತ್ ಅವರೊಂದಿಗೆ ಮಾತುಕತೆ. ಪ್ರಸ್ತುತಿ: ಸಹನ, 4.45–ಹಿಂದಿ ಪಾಠ–ಡಾ.ಮಾಧವಿ ಭಂಡಾರಿ, 6.50–ಕೃಷಿರಂಗ: ಸಮಗ್ರ ಸಾವಯವ ಕೃಷಿ ಈ ಕುರಿತು ಚಿಕ್ಕನಾಯಕನಹಳ್ಳಿ ತಾಲೂಕು ಹುಳಿಯಾರ್ ಹೋಬಳಿ ಕಂಪನಹಳ್ಳಿಯ ಜಿ.ಪುಟ್ಟರಾಜು ಅವರೊಂದಿಗೆ ಸಂದರ್ಶನ, ಸಂದರ್ಶಕರು: ಎನ್.ಕೇಶವ ಮೂರ್ತಿ, 7.45–ಕನ್ನಡ ಚಿತ್ರಗೀತೆಗಳು, 8.00–ಯುವವಾಣಿ: ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಯುವಜನತೆ ಮತ್ತು ಕನ್ನಡದ ಬೆಳವಣಿಗೆ' ಕುರಿತು ಮಾತುಕತೆ ಕೇಳುವಿರಿ. ಭಾಗವಹಿಸುತ್ತಾರೆ: ಸೌಹಾರ್ದ, ದರ್ಶನ್, ಗಿರೀಶ್, ಮತ್ತು ಯಶಸ್ವಿನಿ ನಡೆಸಿಕೊಡು ತ್ತಾರೆ: ಬಿ.ದಿಗ್ವಿಜಯ್, 9.30–ಕರ್ನಾಟಕ ಶಾಸ್ತ್ರೀಯ ಸಂಗೀತ: ಬಳ್ಳಾರಿ ಎಂ.ವೆಂಕಟೇಶಚಾರ್–ಹಾಡುಗಾರಿಕೆ, 10.00–ರೂಪಕ–“ವೀಣೆಯ ಬೆಡಗು ನಾದದ ಸೊಬಗು”–ಸಂಗೀತ ರೂಪಕ, ಪ್ರಖ್ಯಾತ ವೀಣಾ ಕಲಾವಿದರಾದ ಚಿಟ್ಟಿಬಾಬು ಅವರ ಪರಿಚಯ. ಪ್ರಸ್ತುತಿ: ಮೈಸೂರು ಎಸ್.ರಾಜಲಕ್ಷ್ಮೀ, 10.30 –ಸವಿನೆನಪು

■ **ರಂಗಾಯಣ :** ರಂಗಭೀಷ್ಮ ಬಿ.ವಿ.ಕಾರಂತ ಕಾಲೇಜು ರಂಗೋತ್ಸವ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಚಿತ್ರ ಕಲಾವಿದ ಬಾದಲ್ ನಂಜುಂಡಸ್ವಾಮಿ, ಮುಖ್ಯ ಅತಿಥಿಗಳು: ಕಿರುತೆರೆ ಕಲಾವಿದೆ ಶ್ರೀಮತಿ ಸುಷ್ಮಾ ನಾಣಯ್ಯ, ರಂಗ ಸಮಾಜದ ಸದಸ್ಯರಾದ ಡಾ.ರಾಜಪ್ಪ ದಳವಾಯಿ, ಹೆಚ್.ಎಸ್.ಸುರೇಶ್ ಬಾಬು, ರಂಗಾಯಣ ನಿರ್ದೇಶಕ ಸತೀಶ್ ತಿಪಟೂರು, ಎಸ್‌ಬಿಆರ್‌ಆರ್ ಮಹಾಜನ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳಿಂದ ವಸಂತ ಮಾಮಿನೀ ಸ್ವಪ್ನ ಚಮತ್ಕಾರ ನಾಟಕ, ಸ್ಥಳ: ಭೂಮಿಗೀತ ರಂಗಮಂದಿರ, ಸಂಜೆ 5.30ಕ್ಕೆ.

■ **ಶ್ರೀ ಹೊಸಮಠ ಶ್ರೀ ಸಂಗದೇಶ್ವರ ದೇವಸ್ಥಾನ:** ಕಾರ್ತಿಕ ಮಾಸದ ಅಂಗವಾಗಿ ವಿಶೇಷ ಪೂಜಾ ಮಹೋತ್ಸವ, ಧಾರ್ಮಿಕ ಉಪನ್ಯಾಸಗಳು, ಉಪನ್ಯಾಸ: ವಚನ ಸಾಹಿತ್ಯದಲ್ಲಿ ಜೀವನ ಮೌಲ್ಯಗಳು ವಿಷಯ ಕುರಿತು, ಶ್ರೀಮತಿ ಹೆಚ್.ಎಸ್.ಅಂಬಿಕಾ ಅವರಿಂದ ಉಪನ್ಯಾಸ, ಸಾನ್ನಿಧ್ಯ: ಶ್ರೀ ನೀಲಕಂಠ ಸ್ವಾಮಿ ಮಠದ ನಿ.ಪ್ರ.ಸ್ವ.ವಿದ್ವಾನ್ ಸಿದ್ದಮಲ್ಲ ಸ್ವಾಮಿಗಳು, ಸ್ಥಳ: ಶ್ರೀ ನಟರಾಜ ಸಭಾ ಭವನ, ಉಪನ್ಯಾಸ: ಸಂಜೆ 7 ಗಂಟೆಗೆ. ಮಹಾ ಪ್ರಸಾದ ರಾತ್ರಿ 8 ಗಂಟೆಗೆ, ಉತ್ಸವ ರಾತ್ರಿ 7.30ಕ್ಕೆ

■ **ನೂಪುರ ಕಲಾವಿದರ ಸಾಂಸ್ಕೃತಿಕ ಟ್ರಸ್ಟ್, ಕನ್ನಡ–ಸಂಸ್ಕೃತಿ ಇಲಾಖೆ :** ನೃತ್ಯ ನಾಟಕೋತ್ಸವ–2024, ಸಂಜೆ 6 ಗಂಟೆಗೆ ಚಿಂತನ ರಾಮಾಯಣ, ಸಂಜೆ 7 ಗಂಟೆಗೆ ಶ್ರೀ ಸುಧಾಮ ಚರಿತೆ ಕುರಿತು ನೃತ್ಯ ನಾಟಕೋತ್ಸವ, ಸ್ಥಳ: ಗಾನಭಾರತೀ ರಮಾ ಗೋವಿಂದ್ ಕಲಾ ವೇದಿಕೆ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

■ **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ (ಶ್ರೀ ಸುತ್ತೂರು ಕ್ಷೇತ್ರ, ಮೈಸೂರು ಜಿಲ್ಲೆ):** ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ ಶ್ರೀ ಮಹದೇಶ್ವರರ ಸನ್ನಿಧಿ, ಶ್ರೀ ವೀರಭದ್ರೇಶ್ವರ ಮತ್ತು ಶ್ರೀ ಸೋಮೇಶ್ವರ ದೇವಸ್ಥಾನಗಳ ಕಾರ್ತಿಕ ಮಾಸದ ವಿಶೇಷ ಪೂಜಾ ಕಾರ್ಯಕ್ರಮಗಳು, ಸ್ಥಳ: ಮಠದ ಆವರಣ, ಸಂಜೆ

ಮೈಸೂರು ಮಿತ್ರ

ಸೋಮವಾರ 11 ನವೆಂಬರ್ 2024

ಮೈಸೂರು ಸಂಗೀತ ಸುಗಂಧ-2024ರ ಸಮಾರೋಪ

ರಾಮಾಯಣದ ಆಯ್ದ ಭಾಗಗಳನ್ನು ಕರ್ನಾಟಕ ಸಂಗೀತಕ್ಕೆ ತರಲು ಚಿಂತನೆ


ಕೇಂದ್ರ ಸಚಿವ ಸುರೇಶ್ ಗೋಪಿ ಮಾಹಿತಿ

ಮೈಸೂರು, ನ.10(ಎಸ್‌ಬಿಡಿ)– ಶ್ರೇಷ್ಠ ರಾಮಾಯಣ ಸಾಹಿತ್ಯದ ಆಯ್ದ ಭಾಗವನ್ನು ಕರ್ನಾಟಕ ಶಾಸ್ತ್ರೀಯ ಸಂಗೀತ ರೂಪಕ್ಕೆ ತರುವ ಚಿಂತನೆ ಇದೆ ಎಂದು ಕೇಂದ್ರ ಪೆಟ್ರೋಲಿಯಂ, ನೈಸರ್ಗಿಕ ಅನಿಲ ಹಾಗೂ ಪ್ರವಾಸೋದ್ಯಮ ರಾಜ್ಯ ಸಚಿವ ಸುರೇಶ್ ಗೋಪಿ ಹೇಳಿದರು.

ಕೇಂದ್ರ ಪ್ರವಾಸೋದ್ಯಮ ಸಚಿವಾಲಯ ಹಾಗೂ ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ ಮೈಸೂರಿನ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಘಟಿಕೋತ್ಸವ ಭವನದಲ್ಲಿ ಆಯೋಜಿಸಿದ್ದ ಮೂರು ದಿನಗಳ ಕರ್ನಾಟಕ ಶಾಸ್ತ್ರೀಯ ಸಂಗೀತದ ದಾಸ ಪರಂಪರೆಯ ಸಂಗೀತೋತ್ಸವ 'ಮೈಸೂರು ಸಂಗೀತ ಸುಗಂಧ–2024'ರ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಪಿಬರೆ ರಾಮರಸಂ...(ರಾಮನ ಹೆಸರಿನ ಸಾರವನ್ನು ಸವಿಯಿರಿ)' ಹಾಡಿನ ಸಂಯೋಜನೆ ಎಷ್ಟು ಮನೋಜ್ಞವಾಗಿದೆ. ಕೇಳುವವರೆಲ್ಲ ಭಕ್ತಿ ಸಾಗರದಲ್ಲಿ ಮಿಂದು ತಾವೂ ಹಾಡುವಂತೆ ಸದಾಶಿವ ಬ್ರಹ್ಮೇಂದ್ರ ಅವರು ಅದ್ಭುತವಾಗಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಹೀಗೆ ರಾಮಾಯಣದಲ್ಲಿನ ಶ್ರೀರಾಮನ ಪಾತ್ರ, ರಾಮರಾಜ್ಯ ಪರಿಕಲ್ಪನೆಯ ಪ್ರಮುಖ ಅಂಶಗಳಿಗೆ ರಾಗ ಸಂಯೋಜನೆ ಮಾಡಿ, ಕರ್ನಾಟಕ ಶಾಸ್ತ್ರೀಯ ಸಂಗೀತ ರೂಪ ನೀಡಲಾಗುವುದು ಎಂದು ತಿಳಿಸಿದರು.

ನಾಲ್ವಡಿ ಸ್ಮರಣೆ: ಮೈಸೂರು ಐತಿಹಾಸಿಕವಾಗಿ ಕರ್ನಾಟಕ ಸಂಗೀತದ ಪ್ರಮುಖ ಕೇಂದ್ರವಾಗಿದೆ. ಇಲ್ಲಿನ ಕಲಾಜಗತ್ತು ಎಲ್ಲರನ್ನೂ ತನ್ಮಯಗೊಳಿಸುವಂತಿದೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಅನುಗ್ರಹದಿಂದ ಸಾಂಸ್ಕೃತಿಕ ಸಂಪ್ರದಾಯ ಬೆಳೆದು ಬಂದಿದೆ. ಒಡೆಯರ್ ಅವರು ಸಂಗೀತ ಕ್ಷೇತ್ರಕ್ಕೂ ಅಪಾರವಾದ ಕೊಡುಗೆ ನೀಡಿದ್ದಾರೆ. ಜಯಚಾಮರಾಜ ಒಡೆಯರ್ ಅವರು ಸ್ವತಃ ಮಹಾನ್ ವಾಗ್ಗೇಯಕಾರರಾಗಿದ್ದರು.



ಮೈಸೂರಿನ ಕರಾಮುವಿ ಘಟಿಕೋತ್ಸವ ಭವನದಲ್ಲಿ ಭಾನುವಾರ 'ಮೈಸೂರು ಸಂಗೀತ ಸುಗಂಧ' ಸಂಗೀತೋತ್ಸವದ ಸಮಾರೋಪ ಸಮಾರಂಭದಲ್ಲಿ ಕೇಂದ್ರ ಪ್ರವಾಸೋದ್ಯಮ ರಾಜ್ಯ ಸಚಿವ ಸುರೇಶ್ ಗೋಪಿ ಮಾತನಾಡಿದರು.

ಸ್ವಚ್ಛ, ಸುಂದರ ಮನಸ್ಸುಗಳಿರುವ ಈ ನೆಲದಲ್ಲಿ ಅನೇಕ ಸಂಗೀತ ದಿಗ್ಗಜರು ಹುಟ್ಟಿ ಬಂದಿದ್ದಾರೆ. ಮೈಸೂರು ದಕ್ಷಿಣ ಭಾರತದ ಸಾಂಸ್ಕೃತಿಕ ಲೋಕಕ್ಕೆ ಮಹತ್ವದ ಕೊಡುಗೆ ನೀಡಿದೆ ಎಂದು ಬಣ್ಣಿಸಿರು.

ಪ್ರಧಾನಿ ಆಶಯ: ರಾಷ್ಟ್ರದಲ್ಲಿ ಕಲಾ ಏಕತೆ ಸಾಧಿಸುವುದು ಪ್ರಧಾನಿ ಮೋದಿ ಅವರ ಆಶಯವಾಗಿದೆ. ಈ ನಿಟ್ಟಿನಲ್ಲಿ ನಗರಗಳನ್ನು ಕಲಾತ್ಮಕವಾಗಿ ಸಂಘಟಿಸುವ ದೂರದೃಷ್ಟಿಯೊಂದಿಗೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ನಿರ್ಧಾರದಂತೆ ಆಯೋಜಿಸಿದ್ದ 'ಮೈಸೂರು ಸಂಗೀತ ಸುಗಂಧ' ಕಾರ್ಯಕ್ರಮ ಎಲ್ಲರ ಸಹಕಾರದೊಂದಿಗೆ ಯಶಸ್ವಿಯಾಗಿದೆ. ತಮಿಳುನಾಡಿನ ತಿರುವೈಯಾರು ಉತ್ಸವ ಇದಕ್ಕೆ ಪ್ರೇರಣೆಯಾಗಿದೆ. ಈ ಮಾದರಿ ಕಾರ್ಯಕ್ರಮವನ್ನು ಮುಂದಿನ ವರ್ಷ ಕೇರಳದಲ್ಲಿ ಆಯೋಜಿಸಲು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಸೂಚಿಸಿದ್ದಾರೆ ಎಂದು ತಿಳಿಸಿದರು.

ಯುವ ಜನತೆಗೆ ಕರೆ: ಪ್ರವಾಸೋದ್ಯಮ ಸಚಿವಾಲಯ, ಸಂಸ್ಕೃತಿ ಸಚಿವಾಲಯ, ಸಂಗೀತ ಅಕಾಡೆಮಿ ಸೇರಿದಂತೆ ವಿವಿಧ ಇಲಾಖೆಗಳು ಸೇರಿ ಆಯೋಜಿಸಿರುವ ಈ ಕಾರ್ಯಕ್ರಮದಿಂದ ಕರ್ನಾಟಕ ಸಂಗೀತದ ಪ್ರಮುಖ ಭಾಗವಾದ ದಾಸರ ಪರಂಪರೆಗೆ ಮತ್ತಷ್ಟು ಜನಪ್ರಿಯತೆ ಸಿಗಲಿದೆ. ಮೂರು ದಿನಗಳ ಕಾಲ ಅನೇಕ ಪ್ರಸಿದ್ಧ ಕಲಾವಿದರು ಸಂಗೀತ ಸುಧೆ ಹರಿಸಿದ್ದಾರೆ. ವಿಚಾರವಂತರು ಹಲವು ಅಂಶಗಳನ್ನು ಹಂಚಿಕೊಂಡಿದ್ದಾರೆ. ಪ್ರಸಿದ್ಧ ಮತ್ತು ಉದಯೋನ್ಮುಖ ಪ್ರತಿಭೆಗಳನ್ನು ಪರಿಚಯಿಸುವುದರ ಜೊತೆಗೆ ಹೊಸ ಪ್ರೇಕ್ಷಕರನ್ನು ಸೆಳೆದಿರುವುದು ಶ್ಲಾಘನೀಯ. ಯುವ ಜನತೆ ಇಂತಹ ಸತ್ಕಾರ್ಯಗಳಲ್ಲಿ ಹೆಚ್ಚೆಚ್ಚು ಭಾಗ ವಹಿಸಬೇಕು ಎಂದು ಅವರು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಸಚಿವಾಲಯದ ಪ್ರಾದೇಶಿಕ ನಿರ್ದೇಶಕ ಡಿ.ವೆಂಕಟೇಶನ್, ಪ್ರಧಾನ ನಿರ್ದೇಶಕಿ ಮುಗ್ಧಾ ಸಿನ್ಹಾ, ರಾಜ್ಯ ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಸವಿತಾ ಮತ್ತಿತರರು ಉಪಸ್ಥಿತರಿದ್ದರು.

ಪರಂಪರೆ ರಕ್ಷಣೆ ಪ್ರತಿಯೊಬ್ಬರ ಜವಾಬ್ದಾರಿ

ಮೈಸೂರು: ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ರಕ್ಷಿಸಿಕೊಳ್ಳುವುದು ಪ್ರತಿಯೊಬ್ಬರ ಜವಾಬ್ದಾರಿ ಎಂದು ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ ಪ್ರಧಾನ ನಿರ್ದೇಶಕಿ ಮುಗ್ಧಾ ಸಿನ್ಹಾ ಆಶಿಸಿದರು.

ಪ್ರತಿವರ್ಷವೂ ಮೈಸೂರಿನಲ್ಲಿ ಸಂಗೀತೋತ್ಸವ ಆಯೋಜಿಸುವ ಮೂಲಕ ಹಿಂದೂಸ್ಥಾನಿ ಹಾಗೂ ಕರ್ನಾಟಕ ಸಂಗೀತದ ಸಮನ್ವಯ ಪ್ರಯೋಗ ನಡೆಸುವ ಚಿಂತನೆ ಇದೆ. ಹಾಡು, ಸಂಗೀತದ ಮೂಲಕ ಜೀವಂತವಾಗಿರುವ 5 ಸಾವಿರ ವರ್ಷಗಳ ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಿಕೊಳ್ಳುವುದು ಎಲ್ಲರ ಜವಾಬ್ದಾರಿ. ಸಾಹಿತ್ಯ, ಸಂಗೀತದ ಮೂಲಕವೇ ದೇಶದ ನಾಗರಿಕತೆ ಹಾಗೂ ಇತಿಹಾಸವನ್ನು ಅರಿಯಲು ಸಾಧ್ಯ ಎಂದರು.

ಸಂಗೀತ ಕಲೆ ಪಾಶ್ಚಾತ್ಯ ದೇಶಗಳಲ್ಲಿ ವೈಯಕ್ತಿಕ ನೆಲೆಗಟ್ಟಿನಲ್ಲಿದೆ. ಆದರೆ ಭಾರತದಲ್ಲಿ ಸಂಗೀತ, ನಾಟಕ ಸೇರಿದಂತೆ ಯಾವುದೇ ಕಲೆ–ಸಂಸ್ಕೃತಿಯಾಗಲಿ ಸಾಮೂಹಿಕವಾಗಿ ಸೃಷ್ಟಿಯಾಗಿದೆ ಸತ್ಯವೇ ಸೌಂದರ್ಯ, ಪ್ರತಿಭೆ ಹಾಗೂ ಕಲೆಯಲ್ಲಿ ಸತ್ಯ ಹಾಗೂ ಸೌಂದರ್ಯವಿದೆ ಎನ್ನುವುದನ್ನು ಸತ್ಯಂ, ಶಿವಂ, ಸುಂದರಂ ಮೂಲಕ ಸಾರಿದ್ದಾರೆ. ಗುರು–ಶಿಷ್ಯ ಪರಂಪರೆ ಮೂಲಕ ಪೀಳಿಗೆಯಿಂದ ಪೀಳಿಗೆಗೆ ಜ್ಞಾನ ವರ್ಗಾವಣೆಯಾಗಿದೆ ಎಂದು ನುಡಿದರು.

ಯುವ ಉದ್ಯಮಿ ಸಂದೇಶ್‌ಗೆ ಹುಟ್ಟುಹಬ್ಬದ ಅಭಿನಂದನೆ



ಮೈಸೂರಿನ ಯುವ ಉದ್ಯಮಿ, ಚಲನಚಿತ್ರ ನಿರ್ಮಾಪಕ ಸಂದೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಸ್ನೇಹಿತರು ಹಾಗೂ ಅಭಿಮಾನಿಗಳು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಸಂದೇಶ್ ಅವರ ತಂದೆ, ಮಾಜಿ ಎಂಎಲ್‌ಸಿ ಸಂದೇಶ್ ನಾಗರಾಜ್ ಅವರನ್ನೂ ಸನ್ಮಾನಿಸಲಾಯಿತು. ಪತ್ರಿಕಾ ವಿತರಕರ ಸಂಘದ ಸುರೇಶ್, ಪೊಲೀಸ್ ಬಸವರಾಜ್, ಕ್ಯಾಂಟೀನ್ ರವಿಕುಮಾರ್, ಸಂದೇಶ, ರವಿ, ಶರತ್, ಸೀತಾಪುರ ದರ್ಶನ್, ಇಟ್ಟಿಗೆಗೂಡು ಪಾಪು ಮತ್ತಿತರರು ಸಂದೇಶ್ ಅವರಿಗೆ ಶುಭಕೋರಿದರು.



ಯುವ ಉದ್ಯಮಿ ಸಂದೇಶ್ ಅವರಿಗೆ ಮಂಡ್ಯ ಜಿಲ್ಲಾ ಪಂಚಾಯ್ತಿ ಮಾಜಿ ಉಪಾಧ್ಯಕ್ಷ ಅಂಬರೀಶ್ ಹಾಗೂ ಸ್ನೇಹಿತರು ಹುಟ್ಟುಹಬ್ಬದ ಶುಭಾಶಯ ಕೋರಿದರು.



ಯುವ ರಾಜಕಾರಣಿ, ಉದ್ಯಮಿ ಸಂದೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸಂದೇಶ್ ಹಾಗೂ ಶ್ರೀಮತಿ ರಶ್ಮಿ ಸಂದೇಶ್ ದಂಪತಿಯನ್ನು ಕ್ಯಾಂಟೀನ್ ರವಿಕುಮಾರ್, ಸಂದೇಶ, ರವಿಕುಮಾರ್ ಹಾಗೂ ದರ್ಶನ್ ಅಭಿನಂದಿಸಿ, ಶುಭಕೋರಿದರು.

ನಿಖಿಲ್ ಪರ ಸಂದೇಶ್ ಸ್ವಾಮಿ ಪ್ರಚಾರ



ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಯ ಎನ್‌ಡಿಎ ಅಭ್ಯರ್ಥಿ ನಿಖಿಲ್ ಕುಮಾರಸ್ವಾಮಿ ಪರ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರೊಂದಿಗೆ ಮೈಸೂರಿನ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಮತ್ತಿತರ ಮುಖಂಡರು ಶಾನುಭೋಗನಹಳ್ಳಿಯಲ್ಲಿ ಮತಯಾಚಿಸಿದರು. ಈ ವೇಳೆ ಕುಮಾರಸ್ವಾಮಿ ಅವರು ಮಾಧ್ಯಮಗಳೊಂದಿಗೆ ಮಾತನಾಡಿದರು.

ಚನ್ನಪಟ್ಟಣ ಉಪಚುನಾವಣೆ: ಇಂದು ಬಹಿರಂಗ ಪ್ರಚಾರ ಅಂತ್ಯ, ಮಾಧ್ಯಮಗಳಲ್ಲಿ ಸುದ್ದಿ ಪ್ರಸಾರಕ್ಕೆ ನಿರ್ಬಂಧ

ರಾಮನಗರ, ನ.10– ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ನ.13 ರಂದು ಮತದಾನ ನಡೆಯಲಿರುವ ಹಿನ್ನೆಲೆಯಲ್ಲಿ ನ.11ರ ಸಂಜೆ 5.30ಕ್ಕೆ ಬಹಿರಂಗ ಪ್ರಚಾರ ಅಂತ್ಯವಾಗಲಿದೆ.


ನ.11 ರ ಸಂಜೆ 5.30 ಗಂಟೆಯಿಂದ ನ.20 ಸಂಜೆ 6.30 ಗಂಟೆಯವರೆಗೆ ಚುನಾವಣೆಗೆ ಸಂಬಂಧಿಸಿದಂತೆ ಮತದಾರರ ಮೇಲೆ ಪ್ರಭಾವ ಬೀರುವ ರೀತಿ ಚರ್ಚೆ, ಸಂವಾದ, ಸಂದರ್ಶನ, ವಿಶ್ಲೇಷಣೆ, ಚುನಾವಣೋತ್ತರ ಸಮೀಕ್ಷೆ, ಹೀಗೆ ಯಾವುದೇ ಜಾಹೀರಾತು ಹಾಗೂ ಸುದ್ದಿಯನ್ನು ವಿದ್ಯುನ್ಮಾನ ವಾಹಿನಿ, ಕೇಬಲ್ ಟಿ.ವಿ., ರೇಡಿಯೋ, ಸಾಮಾಜಿಕ ಜಾಲತಾಣ ಹಾಗೂ ಡಿಜಿಟಲ್ ಮಾಧ್ಯಮಗಳಲ್ಲಿ ಪ್ರಸಾರ ಮಾಡುವುದಾಗಲಿ ಅಥವಾ ಬಿತ್ತರಿಸುವುದನ್ನು ನಿರ್ಬಂಧಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ತಿಳಿಸಿದರು.

ಒಂದು ವೇಳೆ ನಿಯಮ ಉಲ್ಲಂಘಿಸಿ ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವ ಸುದ್ದಿ ಬಿತ್ತರಿಸಿದಲ್ಲಿ ಅಂತಹವರ ವಿರುದ್ಧ ಪ್ರಜಾ ಪ್ರಾತಿನಿಧ್ಯ ಕಾಯ್ದೆ–1951ರ ಕಲಂ 126ರ ಅನ್ವಯ 2 ವರ್ಷಗಳ ಶಿಕ್ಷೆ ಅಥವಾ ದಂಡ, ಇಲ್ಲವೆ ಶಿಕ್ಷೆ ಮತ್ತು ದಂಡ ಎರಡನ್ನೂ ವಿಧಿಸಲಾಗುವುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಮತದಾನ ಪೂರ್ವ 48 ಗಂಟೆ ಅವಧಿಯಲ್ಲಿ ಮಾಧ್ಯಮಗಳು, ವಿದ್ಯುನ್ಮಾನ ವಾಹಿನಿ, ಕೇಬಲ್ ಟಿವಿ, ರೇಡಿಯೋ, ಸಾಮಾಜಿಕ ಜಾಲತಾಣ ಹಾಗೂ ಡಿಜಿಟಲ್ ಮಾಧ್ಯಮ ಸಂಸ್ಥೆಗಳು ಬಿತ್ತರಿಸುವ ಚುನಾವಣಾ ಸುದ್ದಿಯಲ್ಲಿ ಯಾವುದೇ ಅಭ್ಯರ್ಥಿ ಅಥವಾ ರಾಜಕೀಯ ಪಕ್ಷದ ಪರವಾಗಿರುವ ಮತ್ತು ಚುನಾವಣಾ ಫಲಿತಾಂಶದ ಮೇಲೆ ಪ್ರಭಾವ ಬೀರುವಂತಹ ಪ್ಯಾನಲಿಸ್ಟ್ ಅಭಿಪ್ರಾಯಗಳು, ಮನವಿಗಳು ಇಲ್ಲದಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇದಲ್ಲದೆ ಯಾವುದೇ ಅಭಿಪ್ರಾಯ ಸಂಗ್ರಹದ ಫಲಿತಾಂಶ ಪ್ರಕಟ, ವಿಶ್ಲೇಷಣೆ, ಪ್ರದರ್ಶನ ಮಾಡುವುದನ್ನು ಸಹ ನಿರ್ಬಂಧಿಸಲಾಗಿದೆ ಎಂದು ಹೇಳಿದರು.

ಎಕ್ಸಿಟ್ ಪೋಲ್ ನಿಷೇಧ: ಮತದಾನದ ಪೂರ್ವ 48 ಗಂಟೆ ಮತ್ತು ಮತದಾನದ ಸಮಯ ಮುಗಿದ ನಂತರದ ಅರ್ಧ ಗಂಟೆವರೆಗೂ ಅಂದರೆ ನ.20ರ ಸಂಜೆ 6.30 ಗಂಟೆಯವರೆಗೆ ಯಾವುದೇ ಸುದ್ದಿ ವಾಹಿನಿ, ಕೇಬಲ್ ಟಿ.ವಿ. ಸೇರಿದಂತೆ ಇನ್ನಿತರ ಡಿಜಿಟಲ್ ಮಾಧ್ಯಮಗಳು ಎಕ್ಸಿಟ್ ಪೋಲ್ ಪ್ರಸಾರ ಮಾಡುವುದನ್ನು ನಿಷೇಧಿಸಲಾಗಿದೆ. ಹೀಗಾಗಿ ಎಲ್ಲಾ ಮಾಧ್ಯಮ ಸಂಸ್ಥೆಗಳು ಚುನಾವಣಾ ಆಯೋಗವು ಕಾಲ ಕಾಲಕ್ಕೆ ಹೊರಡಿಸುವ ಎಲ್ಲಾ ಮಾರ್ಗದರ್ಶನಗಳನ್ನು ಪಾಲಿಸಬೇಕು ಎಂದು ತಿಳಿಸಿದ್ದಾರೆ.

ದಕ್ಷಿಣಕನ್ನಡ ನದಿಯಲ್ಲಿ ಪುರಾತನ ಶಿವಲಿಂಗ ಪತ್ತೆ



ಮೈಸೂರು, ನ.10(ಎಸ್‌ಬಿಡಿ)– ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲೂಕು, ಪಡ್ಪು–ಆನೆಕಲ್‌ನ ಕರೋಪಾಡಿ ಗ್ರಾಮದ ಶ್ರೀ ಜಲದುರ್ಗ ಪರಮೇಶ್ವರಿ ದೇವಿ ದೇವಸ್ಥಾನದ ಎದುರಿನ ನದಿಯಲ್ಲಿ ಪುರಾತನ ಶಿವಲಿಂಗ ಪತ್ತೆಯಾಗಿದೆ ಎಂದು ಮೂಲತಃ ದಕ್ಷಿಣ ಕನ್ನಡದವರೇ ಆದ ಮೈಸೂರಿನ ಹಿರಿಯ ವಕೀಲ ಒ.ಶ್ಯಾಮ್‌ಭಟ್ ತಿಳಿಸಿದ್ದಾರೆ.

ಪಡ್ಪು–ಆನೆಕಲ್ ಪ್ರದೇಶದಲ್ಲಿ ನನಗೆ 2013ರಲ್ಲಿ ಜಲದುರ್ಗಾದೇವಿ ದೇವಸ್ಥಾನದ ಕುರುಹುಗಳು ಸಿಕ್ಕಿದ್ದವು. ನಂತರದಲ್ಲಿ ಅಲ್ಲೊಂದು ಬೃಹತ್ ಸುಂದರ ದೇವಾಲಯ ನಿರ್ಮಾಣವಾಗಿದೆ. ಇಲ್ಲಿಗೆ ನಿನ್ನೆ ತಮಿಳುನಾಡಿನ ನಂದಿಸಿದ್ದರ್ ಪೀಠದ ಪ್ರಧಾನ ಸ್ವಾಮೀಜಿ ಆಗಮಿಸಿದ್ದರು. ಅಗಸ್ತ್ಯ ಋಷಿಗಳ ಪ್ರೇರಣೆಯಿಂದ ಬಂದಿರುವುದಾಗಿ ಹೇಳಿದ ಅವರು, ಇದ್ದಕ್ಕಿದ್ದಂತೆ ದೇವಸ್ಥಾನದ ಎದುರಿರುವ ಆನೆಕಲ್ ಹೊಳೆ(ಕಾಳಿಯಾರ್ ನದಿ)ಗೆ ಇಳಿದರು. ಜೊತೆಗೆ ನನ್ನನ್ನೂ ಕರೆದೊಯ್ದರು. ಆ ವೇಳೆ ಸ್ವಾಮೀಜಿ ಅವರಿಗೆ ಐದಾರು ಕೆಜಿ ತೂಕದ ಸುಂದರವಾದ ಶಿವಲಿಂಗ ಸಿಕ್ಕಿತು. ಇದು ಗೋರಕನಾಥ ಹಾಗೂ ಮಚ್ಚೇಂದ್ರನಾಥ ಯತಿಗಳು ಪೂಜಿಸಿದ್ದ ಪುರಾತನ ಶಿವಲಿಂಗ ಎಂದರು. ಅದನ್ನು ಜಲದುರ್ಗಾದೇವಿ ದೇವಸ್ಥಾನದಲ್ಲಿಡಲಾಗಿದ್ದು, ಮುಂದಿನ ದಿನಗಳಲ್ಲಿ ಪ್ರತ್ಯೇಕ ದೇವಾಲಯ ನಿರ್ಮಾಣ ಮಾಡಬೇಕಿದೆ ಎಂದು ಶ್ಯಾಮ್ ಭಟ್ ಹೇಳಿದರು.

ನಾನೂ ಅಲ್ಲಿನ ಪಕ್ಕದ ಗ್ರಾಮದವನೇ ಆಗಿರುವುದರಿಂದ ಬಾಲ್ಯವನ್ನು ಅಲ್ಲೇ ಕಳೆದಿದ್ದೇನೆ. ಅಲ್ಲಿ ನಾಥ ಪಂಥದವರು ನೆಲೆ ಇದ್ದಿದ್ದಕ್ಕೆ ಸಾಕಷ್ಟು ಕುರುಹುಗಳಿವೆ. ಮಂಗಳೂರಿನ ಪ್ರಸಿದ್ಧ ಕದ್ರಿ ಬೆಟ್ಟಕ್ಕೆ ಮಹಾರಾಷ್ಟ್ರದಿಂದ ದಂಡಿಯಾತ್ರೆ ಬರುತ್ತಾರೆ. ಮಂಗಳಾದೇವಿ ದೇವಸ್ಥಾನವೂ ನಾಥ ಸಂಪ್ರದಾಯದವರದೇ ಆಗಿದೆ. ಹೀಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಾಥ ಸಂಪ್ರದಾಯದ ಸಾಕಷ್ಟು ಪ್ರಾಚೀನ ಕುರುಹುಗಳಿವೆ. ಅದಕ್ಕೆ ಪೂರಕವಾಗಿ ಆನೆಕಲ್ ಹೊಳೆಯಲ್ಲಿ ನಾಥ ಸಂಪ್ರದಾಯಕ್ಕೆ ಸಂಬಂಧಿಸಿದ ಅದ್ಭುತವಾದ ಶಿವಲಿಂಗ ಪತ್ತೆಯಾಗಿದೆ. ಜಲದುರ್ಗಾದೇವಿ ದೇವಸ್ಥಾನದಲ್ಲಿ ದೇವಿಯೊಂದಿಗೆ ಅಗಸ್ತ್ಯ ಮತ್ತು ಲೋಪಮುದ್ರ ಪೂಜೆಯೂ ನಡೆಯುತ್ತಿದೆ ಎಂದು ತಿಳಿಸಿದರು.



ಶ್ರೀ ಜಲದುರ್ಗ ಪರಮೇಶ್ವರಿ ದೇವಿ ದೇವಸ್ಥಾನದ ಎದುರಿನ ನದಿಯಲ್ಲಿ ಪತ್ತೆಯಾದ ಪುರಾತನ ಶಿವಲಿಂಗವನ್ನು ಹಿರಿಯ ವಕೀಲ ಒ.ಶ್ಯಾಮ್ ಭಟ್ ಅವರ ಕರದಲ್ಲಿ ಕಾಣಬಹುದು. ತಮಿಳುನಾಡಿನ ನಂದಿಸಿದ್ದರ್ ಪೀಠದ ಶ್ರೀಗಳಿದ್ದಾರೆ.

ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದಲ್ಲಿ ಸಾರ್ವಜನಿಕ ಕುಂದುಕೊರತೆ ಉಪ ಸಮಿತಿ ಕೇಂದ್ರ ಉದ್ಘಾಟನೆ



ಮೈಸೂರು, ನ10(ಎಸ್‌ಪಿಎನ್)– ಮೈಸೂರು ದೊಡ್ಡಕೆರೆ ಮೈದಾನದಲ್ಲಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದಿಂದ ರೇಡಿಯೊ ಕೊಠಡಿ ಬಳಿ ಭಾನುವಾರ ಸಾರ್ವಜನಿಕ ಕುಂದುಕೊರತೆ ಉಪ ಸಮಿತಿ ಕೇಂದ್ರವನ್ನು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಉದ್ಘಾಟಿಸಿದರು.


ನಂತರ ಮಾತನಾಡಿ, ದಸರಾ ವಸ್ತು ಪ್ರದರ್ಶನದಲ್ಲಿ ಹಲವರು ತಮ್ಮ ಮಕ್ಕಳನ್ನು ಕಳೆದುಕೊಂಡು ಹುಡುಕಾಡುವುದು, ದಾರಿಗಳ ಗೊಂದಲ, ಕುಡಿಯುವ ನೀರು ಹಾಗೂ ಶೌಚಾಲಯಗಳ ಮಾಹಿತಿಗೆ ಓಡಾಡುವುದನ್ನು ನೋಡಿದ್ದೇವೆ. ಅಂತವರಿಗೆ ಸೂಕ್ತ ಸಲಹೆ, ಸಹಕಾರ ನೀಡಲು ಸಮಿತಿಯ ಸದಸ್ಯರು ಅಲ್ಲಲ್ಲಿ ಕೌಂಟರ್ ನಿರ್ಮಿಸಿಕೊಂಡು ಕಾರ್ಯನಿರ್ವಹಿಸುತ್ತಾರೆ. ಪ್ರಾರ್ಥನೆ, ಮನವಿ ಅಗತ್ಯವಿದ್ದರೆ ರೇಡಿಯೊ ರೂಮ್‌ಗೆ ಕರೆ ತರುತ್ತಾರೆ. ಸುಮಾರು 25 ಮಂದಿ ಸಮಿತಿಯಲ್ಲಿ ಕಾರ್ಯನಿರ್ವಹಿಸುತ್ತಾರೆ' ಎಂದು ಮಾಹಿತಿ ನೀಡಿದರು.

ಅಲ್ಲದೇ ವಾರದಲ್ಲಿ ಒಮ್ಮೆ ವಿವಿಧ ಕ್ಷೇತ್ರಕ್ಕೆ ಸಂಬಂಧಿಸಿದ ಗಣ್ಯ ವ್ಯಕ್ತಿಗಳನ್ನು ಕರೆಸಿ ಪ್ರಾಧಿಕಾರದ ಆವರಣವನ್ನು, ಇಲ್ಲಿನ ಕಾರ್ಯವೈಖರಿಯನ್ನು ತೋರಿಸುವ ಯೋಜನೆಯನ್ನು ಸಮಿತಿ ಕೈಗೊಳ್ಳುವುದಾಗಿ ತಿಳಿಸಿದೆ. ಅವರ ಸಲಹೆ, ಸೂಚನೆಗಳನ್ನು ಪಡೆದು ಪ್ರಾಧಿಕಾರದ ಆವರಣವನ್ನು ಹೆಚ್ಚು ಜನಸ್ನೇಹಿಯಾಗಿಸುವ ಉದ್ದೇಶವಿದೆ' ಎಂದರು.

ಈ ವೇಳೆ ಸಮಿತಿ ಅಧ್ಯಕ್ಷ ಜೆ.ಪ್ರಸನ್ನಕುಮಾರ್, ಕಾರ್ಯಾಧ್ಯಕ್ಷ ಕೈಸರ್ ಅಹಮದ್, ಉಪಾಧ್ಯಕ್ಷರಾದ ಡೈರಿ ವೆಂಕಟೇಶ್, ಕೆ.ಶಂಕರ್‌ಮೂರ್ತಿ, ಮಂಜು ದರ್ಶನ್, ಸುಂದರ್ ಡಿಸೋಜಾ, ಗೋಪಿ, ಶಿವು, ನಟರಾಜ್ ಹಾಗೂ ಸದಸ್ಯ ಕಾರ್ಯದರ್ಶಿ ಎಂ.ಎಸ್.ವೆಂಕಟೇಶ್ ಪಾಲ್ಗೊಂಡಿದ್ದರು.


ಇಂದಿನಿಂದ ಅಡ್ಡಂಡ ಸಿ.ಕಾರ್ಯಪ್ಪ ಅವರ 'ಸತ್ಯವನ್ನೇ ಹೇಳುತ್ತೇನೆ' ನಾಟಕ ಮರು ಪ್ರದರ್ಶನ


ಮೈಸೂರು,ನ.10(ಪಿಎಂ)– ಸಾರ್ವಜನಿಕರ ಬೇಡಿಕೆ ಮೇರೆಗೆ ರಂಗಭೂಮಿ ಟ್ರಸ್ಟ್ ಕೊಡಗು ಪ್ರಸ್ತುತಿಯ 'ಸತ್ಯವನ್ನೇ ಹೇಳುತ್ತೇನೆ' ಕನ್ನಡ ನಾಟಕ ನ.11ರಿಂದ ಮೂರು ದಿನಗಳ ಕಾಲ ಮರು ಪ್ರದರ್ಶನವಾಗುತ್ತಿದೆ. ಮೈಸೂರು ರಂಗಾಯಣದ ಮಾಜಿ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಅವರು ರಚಿಸಿ, ನಿರ್ದೇಶಿಸಿರುವ ನಾಟಕ ಇದಾಗಿದ್ದು, ನ.11, 12 ಮತ್ತು 13ರಂದು ಕಲಾಮಂದಿರ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಪ್ರತಿದಿನ ಸಂಜೆ 6.30ಕ್ಕೆ ನಾಟಕ ಮರು ಪ್ರದರ್ಶನಗೊಳ್ಳಲಿದೆ. ಈ ನಾಟಕ ಕಳೆದ ತಿಂಗಳು ಇದೇ ರಂಗಮಂದಿರದಲ್ಲಿ ನಾಲ್ಕು ದಿನಗಳ ಕಾಲ ಕಿಕ್ಕಿರಿದು ತುಂಬಿದ್ದ ಸಭಾಂಗಣದಲ್ಲಿ ಭರ್ತಿ ಪ್ರದರ್ಶನ ಕಂಡಿತ್ತು.





ಅಡ್ಡಂಡ ಸಿ.ಕಾರ್ಯಪ್ಪ

ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿರುವ ಕಲಾವಿದರು: ಅಡ್ಡಂಡ ಸಿ.ಕಾರ್ಯಪ್ಪ (ರೈತ ನ್ಯಾಯಾಧೀಶರ ಪಾತ್ರ), ಅನಿತಾ ಕಾರ್ಯಪ್ಪ (ವಕೀಲೆ ಭಾರತಿ), ಎಸ್.ಶಿವಮೂರ್ತಿ (ಮಹಾತ್ಮ ಗಾಂಧಿ), ಸುನೀಲ್ ಪಟಾಕಿ (ಸುಭಾಷ್ ಚಂದ್ರ ಬೋಸ್), ಪವನ್ ದೇಶಪಾಂಡೆ (ಡಾ.ಅಂಬೇಡ್ಕರ್), ಚೇತನ್ ಕಾಟೇನಹಳ್ಳಿ (ಸರ್ದಾರ್ ವಲ್ಲಭ ಭಾಯಿ ಪಟೇಲ್), ವಿ.ಸಿ.ಚಿದಾರ್ಜುನ್ (ಜವಹರಲಾಲ್ ನೆಹರು), ಎಸ್.ವೈಭವ್ ನಾಗ್ (ವೀರ ಸಾವರ್ಕರ್) ಮತ್ತು ಹೆಚ್.ಎಸ್.ಕಿರಣ್ (ಗುಮಾಸ್ತ) ಅವರು ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಟಿಕೆಟ್ ದರ 200 ರೂ. ಆಗಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.ಸಂ. 94484–22343 ಅನ್ನು ಸಂಪರ್ಕಿಸಬಹುದು.


ಅನಿತಾ


ಶಿವಮೂರ್ತಿ


ಸುನೀಲ್ ಪಟಾಕಿ


ಪವನ್


ಚೇತನ್


ಚಿದಾರ್ಜುನ್


ವೈಭವ್ ನಾಗ್


ಕಿರಣ್

ಶಾಲಾ-ಕಾಲೇಜಿನಲ್ಲಿ ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನಕ್ಕೆ ಚಾಲನೆ

ಧನಾತ್ಮಕ ಚಿಂತನೆ ಮಾನಸಿಕ ಆರೋಗ್ಯದ ಪ್ರಮುಖ ಅಂಶ

ನಿಮ್ಹಾನ್ಸ್ ಪ್ರಾಧ್ಯಾಪಕ ಡಾ.ಇ.ಅರವಿಂದ್ ರಾಜ್

ಮೈಸೂರು,ನ.10(ಪಿಎಂ)– ಮನುಷ್ಯನ ಪರಿಪೂರ್ಣ ಆರೋಗ್ಯಕ್ಕೆ ಮಾನಸಿಕ ಆರೋಗ್ಯವೂ ಬಹುಮುಖ್ಯ. ಧನಾತ್ಮಕ ಚಿಂತನೆ ಮಾನಸಿಕ ಆರೋಗ್ಯದ ಪ್ರಮುಖ ಅಂಶವಾಗಿದೆ ಎಂದು ಬೆಂಗಳೂರು ನಿಮ್ಹಾನ್ಸ್‌ನ ಮನೋವೈದ್ಯಕೀಯ ಸಮಾಜ ಕಾರ್ಯ ವಿಭಾಗದ ಹೆಚ್ಚುವರಿ ಪ್ರಾಧ್ಯಾಪಕ ಡಾ.ಇ.ಅರವಿಂದ್ ರಾಜ್ ಹೇಳಿದರು.

ಮೈಸೂರಿನ ಮೇಟಗಳ್ಳಿಯ ಕೆಆರ್‌ಎಸ್ ರಸ್ತೆಯಲ್ಲಿರುವ ಸೇಪಿಯೆಂಟ್ ಕಾಲೇಜು ಸಭಾಂಗಣದಲ್ಲಿ ಕಾಲೇಜು ಮತ್ತು ಮೈಂಡ್ ಅಂಡ್ ಮ್ಯಾಟರ್ ಸಂಘಟನೆ ಹಾಗೂ ಬೆಂಗಳೂರು ನಿಮ್ಹಾನ್ಸ್‌ನ ಸಮುದಾಯ ಮಾನಸಿಕ ಆರೋಗ್ಯ ಘಟಕದ ಮನೋವೈದ್ಯಕೀಯ ಸಮಾಜ ಕಾರ್ಯ ವಿಭಾಗದ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿರುವ ವಾರ್ಷಿಕ ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ಭಾನುವಾರ ಅವರು ಮಾತನಾಡಿದರು.



ಮೈಸೂರಿನ ಸೇಪಿಯೆಂಟ್ ಕಾಲೇಜು ಸಭಾಂಗಣದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಮಾನಸಿಕ ಆರೋಗ್ಯ ಜಾಗೃತಿ ಅಭಿಯಾನದ ಉದ್ಘಾಟನಾ ಸಮಾರಂಭದಲ್ಲಿ ನಿಮ್ಹಾನ್ಸ್‌ನ ಪ್ರಾಧ್ಯಾಪಕ ಡಾ.ಇ.ಅರವಿಂದ್ ರಾಜ್ ಮಾತನಾಡಿದರು.

ದುರದೃಷ್ಟವಶಾತ್ ಬಹುತೇಕರು ಮಾನಸಿಕ ಆರೋಗ್ಯದ ಪರಿಕಲ್ಪನೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಸಾಮಾನ್ಯವಾಗಿ ಆರೋಗ್ಯವೆಂದರೆ ದೈಹಿಕ ವಿಚಾರವನ್ನಷ್ಟೇ ಕೇಂದ್ರೀಕರಿಸಿ ಮಾತನಾಡುತ್ತೇವೆ. ಆದರೆ ಮಾನಸಿಕ ಆರೋಗ್ಯವಿಲ್ಲದೇ ಪರಿಪೂರ್ಣ ಆರೋಗ್ಯವಿಲ್ಲ. ಮಾನಸಿಕ ಅಸ್ವಸ್ಥತೆ ಹೊಂದಿಲ್ಲದ ಕಾರಣಕ್ಕೆ ಮಾನಸಿಕ ಆರೋಗ್ಯವಿದೆ ಎಂದುಕೊಳ್ಳಲು ಸಾಧ್ಯವಿಲ್ಲ. ರೋಗನಿರ್ಣಯ ಮಾಡಬಹುದಾದ ಮಾನಸಿಕ ಅಸ್ವಸ್ಥತೆಯನ್ನು ಹೊಂದಿರದ ಅನೇಕರ ಮಾನಸಿಕ ಆರೋಗ್ಯವೂ ಬಹುತೇಕರಲ್ಲಿ ಉತ್ತಮವಾಗಿ ಇಲ್ಲದಿರುವುದೂ ಇದೆ. ಅಂತಹವರನ್ನು ವೈದ್ಯಕೀಯ ಪರೀಕ್ಷೆ ಹಾಗೂ ಸಮಾಲೋಚನೆಗೆ ಒಳಪಡಿಸಿದರೆ ಅದು ತಿಳಿದು ಬರುತ್ತದೆ ಎಂದು ತಿಳಿಸಿದರು.

ಮಾನಸಿಕ ಆರೋಗ್ಯದ ಅರ್ಥವೇನು ಎಂದು ತಿಳಿದುಕೊಳ್ಳುವುದು ಮುಖ್ಯ. ಮಾನಸಿಕ ಆರೋಗ್ಯವು ಕೆಲ ಅಂಶಗಳನ್ನು ಒಳಗೊಂಡಿದೆ. ನಮ್ಮ ಸಾಮರ್ಥ್ಯವನ್ನು ಎಷ್ಟು ಅರಿತುಕೊಂಡಿದ್ದೇವೆ ಎಂಬುದೂ ಒಂದು ಅಂಶವಾಗಿದೆ. ಅಂತೆಯೇ ದಿನನಿತ್ಯದ ಒತ್ತಡಗಳನ್ನು ಧನಾತ್ಮಕವಾಗಿ ನಿಭಾಯಿಸುವುದೂ ಮಾನಸಿಕ ಆರೋಗ್ಯ ಅಂಶವೇ ಆಗಿದೆ. ಧನಾತ್ಮಕ ಭಾವನೆ ಮತ್ತು ಉತ್ಸಾಹದಿಂದ ಯಾವುದೇ ಚಟುವಟಿಕೆಗಳಲ್ಲಿ ತೊಡಗುವುದೂ ಮಾನಸಿಕ ಆರೋಗ್ಯವಾಗಿದೆ ಎಂದು ವಿವರಿಸಿದರು.

ಅಭಿಯಾನ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದ ಬಿ.ವಾಗೀಶ್, 2022ರ ಆಗಸ್ಟ್‌ನಲ್ಲಿ ಶಾಲಾ–ಕಾಲೇಜುಗಳಲ್ಲಿ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಅಭಿಯಾನ ಕೈಗೆತ್ತಿಕೊಳ್ಳಲಾಯಿತು. ಇದೀಗ 2024ರಲ್ಲಿ ನಿಮ್ಹಾನ್ಸ್ ಸಹಯೋಗದಲ್ಲಿ ಕೊಡಗು, ಮೈಸೂರು ಮತ್ತು ಹಾಸನ ಜಿಲ್ಲೆಗಳಲ್ಲಿ ಶಾಲಾ ಕಾಲೇಜುಗಳಲ್ಲಿ ಜಾಗೃತಿ ಅಭಿಯಾನ ನಡೆಸಲಿದ್ದೇವೆ. ನ.16ರವರೆಗೆ ನಿಮ್ಹಾನ್ಸ್ ಮೂಲಕ ತರಬೇತಿ ಪಡೆದಿರುವ ಸೇಪಿಯಂಟ್ ಸೇರಿದಂತೆ ಇನ್ನಿತರ ಕಾಲೇಜು ವಿದ್ಯಾರ್ಥಿಗಳು ಅಭಿಯಾನದಲ್ಲಿ ಜಾಗೃತಿ ಮೂಡಿಸಲಿದ್ದಾರೆ ಎಂದು ತಿಳಿಸಿದರು.

ಪತ್ರಕರ್ತೆ ರಶ್ಮಿ ಕೋಟಿ, ಸೇಪಿಯೆಂಟ್ ಕಾಲೇಜು ನಿರ್ದೇಶಕಿ ಯೆಶ್ಮಿಕ್ ಪೊನ್ನಪ್ಪ ದಲ್ಜೀತ್, ಡೀನ್ ಡಾ.ಸುಜಾತಾ ಬೋಪಣ್ಣ, ಮೈಂಡ್ ಅಂಡ್ ಮ್ಯಾಟರ್ ಸಂಘಟನೆ ಟ್ರಸ್ಟಿ ದೀಪಿಕಾ ಅಪ್ಪಯ್ಯ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಎರಡು ಜಿರಳೆಗಳು ಐಸಿಯು ಬೆಡ್‌ನಲ್ಲಿ ಅಕ್ಕ–ಪಕ್ಕ ಮಲಗಿದ್ದವು

ಮೊದಲನೆ ಜಿರಳೆ : ಏನು HIT Spray ನಾ ಅಥವಾ ಚಪ್ಪಲಿ ಏಟಾ?

ಎರಡನೆ ಜಿರಳೆ : ಎರಡೂ ಅಲ್ಲ.... ಈ ಹುಡುಗಿಯರು ಇದ್ದರಲ್ಲಾ
ನನ್ನ ನೋಡಿ ಭಯಂಕರ ಕಿರುಚಾಟ
ಕೇಳಿ ಹಾರ್ಟ್ ಅಟ್ಯಾಕ್ ಆಯ್ತು!

ಮೈಸೂರು ಮಿತ್ರ

ಸೋಮವಾರ, 11 ನವೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಸುಖದಲ್ಲಿ ಜೊತೆ ಇದ್ದವ ಬಾಂಧವ...
ಕಷ್ಟದಲ್ಲಿ ಜೊತೆಯಾದವ ಆಪತ್ಬಾಂಧವ

ವೇದ ಸುಳ್ಳಾದರೂ { ಸೊಸೆಗೆ ಮನೆವಾಸ
ಗಾದೆ ಸುಳ್ಳಾಗದು { ಅತ್ತೆಗೆ ಪರವಾಸ

ನಿಮ್ಮ ಪತ್ರಗಳು

■ ಅಮೆರಿಕದ ನೂತನ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಅಭಿನಂದನೆಗಳು

ಮಾನ್ಯರೆ,



ಸಾಕಷ್ಟು ಕುತೂಹಲ ಕೆರಳಿಸಿದ್ದ ಅಮೆರಿಕಾದ ಅಧ್ಯಕ್ಷೀಯ ಚುನಾವಣಾ ಫಲಿತಾಂಶ ಹೊರಬಿದ್ದಿದ್ದು, ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ನೂತನ ಅಧ್ಯಕ್ಷರಾಗಿ (2ನೇ ಬಾರಿಗೆ) ಆಯ್ಕೆಯಾಗಿದ್ದಾರೆ. ಈ ರೀತಿಯಾಗಿರುವುದು ಅಮೆರಿಕಾದ ರಾಜಕೀಯ ಇತಿಹಾಸದಲ್ಲಿ ಎರಡನೇ ಬಾರಿ. ಟ್ರಂಪ್ ಅವರು ಒಮ್ಮೆ ಅಧ್ಯಕ್ಷರಾಗಿ ಗೆದ್ದು, ಮತ್ತೊಮ್ಮೆ ಸೋತಿದ್ದರು.

ಈಗ ಮತ್ತೇ ಗೆದ್ದು ಶ್ವೇತಭವನ ಪ್ರವೇಶಿಸಲಿದ್ದಾರೆ. ಇವರ ವಿರುದ್ಧ ಸ್ಪರ್ಧಿಸಿದ್ದ ಭಾರತೀಯ ಮೂಲದ ಕಮಲಾ ಹ್ಯಾರೀಸ್ ಪರಾಭವಗೊಂಡಿದ್ದಾರೆ. ಕಮಲಾ ಹ್ಯಾರಿಸ್ ಗೆಲ್ಲುವ ನಿರೀಕ್ಷೆಯಲ್ಲಿದ್ದರು. ಅಮೆರಿಕಾದ ಮಾಜಿ ಉಪಾಧ್ಯಕ್ಷೆಯಾಗಿಯೂ ಕಾರ್ಯನಿರ್ವಹಿಸಿರುವ ಕಮಲಾ ಹ್ಯಾರಿಸ್ ಬಿರುಸಿನ ಪ್ರಚಾರ ನಡೆಸಿ, ಟ್ರಂಪ್ ಅವರಿಗೆ ಪ್ರಬಲ ಪ್ರತಿಸ್ಪರ್ಧಿಯಾಗಿದ್ದರು.

ಇಡೀ ವಿಶ್ವವನ್ನೇ ಕಾಡಿದ್ದ ಕೊರೊನಾ ನಿರ್ವಹಣೆಯಲ್ಲಿ ಟ್ರಂಪ್ ವಿಫಲರಾಗಿದ್ದು, ಕೋವಿಡ್ ಸೋಂಕಿನ ಹರಡುವಿಕೆಯನ್ನು ತಡೆಗಟ್ಟಲು ಅವರು ಸೂಚಿಸಿದ್ದ ಪರಿಹಾರ ಹಾಸ್ಯಾಸ್ಪದವಾಗಿತ್ತು. ಅವರ ವಿರುದ್ಧ ಹಲವಾರು ಪ್ರಕರಣಗಳು ದಾಖಲಾಗಿವೆ ಎಂದು ಹೇಳಲಾಗಿದ್ದರೂ ಅಮೆರಿಕಾದ ಪ್ರಬುದ್ಧ ಮತದಾರರು ಅವರನ್ನೇ ಆಯ್ಕೆಮಾಡುವುದರ ಮೂಲಕ ಅಚ್ಚರಿ ಮೂಡಿಸಿದ್ದಾರೆ. ಅದೇನೇ ಇರಲಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರ ತೀರ್ಪೇ ಅಂತಿಮ. ಹೀಗಾಗಿ, ಡೊನಾಲ್ಡ್ ಟ್ರಂಪ್ ಅವರ ವಿಜಯವನ್ನು ನಾವು ಕೂಡ ಸ್ವಾಗತಿಸೋಣ.

ವಿಶ್ವದ ಭೂಪಟದಲ್ಲಿ ಇಂದಿಗೂ ಸಹ, ಅಮೆರಿಕಾ ಸೂಪರ್ ಪವರ್ ಎನ್ನಿಸಿದೆ. ಅಮೆರಿಕಾದ ವಿದೇಶಾಂಗ ನೀತಿಗಳು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿವಿಧ ದೇಶಗಳ ಮೇಲೆ ತನ್ನದೇ ಆದ ಪರಿಣಾಮ ಬೀರುತ್ತದೆ. ಕಳೆದ ಎರಡು ವರ್ಷಗಳಿಂದ ಯುಕ್ರೇನ್ ಮತ್ತು ರಷ್ಯಾದ ನಡುವೆ ಯುದ್ಧ ನಡೆಯುತ್ತಿದ್ದರೆ, ಪಶ್ಚಿಮ ಏಷಿಯಾದಲ್ಲಿ ಸಹ ಇಸ್ರೇಲ್ ಮತ್ತು ಹಮಾಸ್ ನಡುವೆ ಪ್ರಾರಂಭವಾದ ಯುದ್ಧ, ಲೆಬನಾನ್, ಇರಾನ್ ಮುಂತಾದ ಅಕ್ಕಪಕ್ಕದ ರಾಷ್ಟ್ರಗಳಿಗೂ ಹಬ್ಬಿ ಮುಂದೆ ವಿಶ್ವ ಯುದ್ಧಕ್ಕೆ ಕಾರಣವಾಗಬಹುದು. ಅಮೆರಿಕಾದ ನೂತನ ಅಧ್ಯಕ್ಷರ ಜವಾಬ್ದಾರಿ ಈಗ ಹೆಚ್ಚಿದ್ದು, ತನ್ನ ಮಿತ್ರ ಪರಸ್ಪರ ಕಾದಾಡುತ್ತಿರುವ ಇಸ್ರೇಲ್ ಮತ್ತು ಇರಾನ್ ಹಾಗೂ ರಷ್ಯಾ ಮತ್ತು ರಷ್ಯಾದ ನಡುವೆ ನಡೆಯುತ್ತಿರುವ ಭೀಕರ ಯುದ್ಧಗಳನ್ನು ಕೊನೆಗಾಣಿಸಲು ಅವರು ಪ್ರಾಮಾಣಿಕವಾಗಿ ಪ್ರಯತ್ನಿಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ವಿವೇಕಾನಂದನಗರ, ಮೈಸೂರು.

■ ಹಳೆಯ ಡಿಸಿ ಕಚೇರಿ ಕಟ್ಟಡದ ನಿರ್ಲಕ್ಷ್ಯ

ಮಾನ್ಯರೆ,

ನಮ್ಮ ಮೈಸೂರು ನಗರದ ಹಳೆಯ ಡಿಸಿ ಕಚೇರಿ ಕಟ್ಟಡದ ಸ್ಥಿತಿಯನ್ನು ಗಮನಿಸಲು ನಾನು ಈ ಪತ್ರ ಬರೆಯುತ್ತಿದ್ದೇನೆ. ಈ ಕಟ್ಟಡವು ಬಹುಮುಖ್ಯವಾದ ಇತಿಹಾಸವನ್ನು ಹೊಂದಿದ್ದು, ನಮ್ಮ ಭೂತಕಾಲದ ಸ್ಮಾರಕವಾಗಿದೆ. ಆದರೆ ಇದೀಗ ಇದು ನಿರ್ಲಕ್ಷ್ಯಕ್ಕೆ ಒಳಗಾಗಿದ್ದು, ಹಾಳಾಗುತ್ತಿರುವ ದೃಶ್ಯಗಳನ್ನು ನಾವು ನೋಡುತ್ತಿದ್ದೇವೆ.



ಹಳೆಯ ಡಿಸಿ ಕಚೇರಿ ಕಟ್ಟಡವು ವರ್ಷಗಳ ಹಿಂದೆ ನಮ್ಮ ಇತಿಹಾಸದ ಪ್ರಮುಖ ಘಟನಾಕ್ರಮಗಳಿಗೆ ಸಾಕ್ಷಿಯಾಗಿತ್ತು. ಇದು ವಿಶಿಷ್ಟವಾದ ಶಿಲ್ಪಕಲೆ ಮತ್ತು ಸಂಸ್ಕೃತಿ ಸಂಕೇತವಾಗಿದೆ. ಆದರೆ ಇಂದು, ಇದರಲ್ಲಿ ಬಿರುಕುಗಳು, ಕುಸಿಯುತ್ತಿರುವ ಗೋಡೆಗಳು ಮತ್ತು ಜೀರ್ಣಗೊಂಡ ಭಾಗಗಳು ಸ್ಪಷ್ಟವಾಗಿ ಕಾಣುತ್ತಿವೆ, ಇದರಿಂದ ಕಟ್ಟಡವು ಅಪಾಯದಲ್ಲಿ ಸಿಲುಕಿದೆ. ಈಗಲೇ ಕ್ರಮ ಕೈಗೊಳ್ಳುವುದು ಮುಖ್ಯವಾಗಿದೆ. ಕಟ್ಟಡವನ್ನು ಸರಿಯಾಗಿ ದುರಸ್ತಿ ಮಾಡಿ ಕಾಪಾಡುವುದು ಅವಶ್ಯಕ. ಇದನ್ನು ಉಳಿಸುವುದು ನಮ್ಮ ಇತಿಹಾಸವನ್ನು ಉಳಿಸಿದಂತೆ, ನಮ್ಮ ಮುಂದಿನ ಪೀಳಿಗೆ ಗಳಿಗೂ ಈ ಶ್ರೇಣಿಯ ಎತ್ತರವನ್ನು ಕಾಪಾಡಲು ಸಹಾಯ ಮಾಡುತ್ತದೆ. ನಾನು ಈ ಪತ್ರದ ಮೂಲಕ ಸಂಬಂಧಿಸಿದ ಅಧಿಕಾರಿಗಳನ್ನು ವಿನಂತಿಸುತ್ತೇನೆ? ಈ ಐತಿಹಾಸಿಕ ಕಟ್ಟಡದ ಭದ್ರತೆಗಾಗಿ ತಕ್ಷಣ ಕ್ರಮ ತೆಗೆದುಕೊಳ್ಳಿ. ನಮ್ಮ ಇತಿಹಾಸವನ್ನು ಉಳಿಸಿ ಮತ್ತು ನಮ್ಮ ಸಂತತಿಗೆ ನಂಬಿಕೆಯ ಸಂಜೀವಿನಿಯನ್ನು ಕೊಡಿ.

–ಶಶಾಂಕ್ ಎಸ್.ಹೊಳ್ಳ, ಕಾನೂನು ವಿದ್ಯಾರ್ಥಿ, ಮೈಸೂರು

■ ರೈತರನ್ನು ನೆಮ್ಮದಿಯಿಂದ ಬದುಕಲು ಬಿಡಿ

ಮಾನ್ಯರೆ,

ಮೊನ್ನೆ, ನಮ್ಮ ಸ್ವಂತ ಊರಾದ ಮಂಡ್ಯ ಜಿಲ್ಲೆಯ ಬೂಕನಕೆರೆಗೆ ಹೋಗಿದ್ದೆ. ನಮ್ಮ ಜಮೀನಿನ ಹತ್ತಿರ ಬಂದ ಕೆಲವು ರೈತರು ನಾವು ನಮ್ಮ ತಾತ–ಮುತ್ತಾತನ ಕಾಲದಿಂದಲೂ ಸಾಗುವಳಿ ಮಾಡುತ್ತಿರುವ ಈ ಭೂಮಿಯಿಂದಲೇ ನಮ್ಮ ಬದುಕನ್ನು ಕಟ್ಟಿಕೊಂಡಿರುವ ನಮ್ಮ ಜಮೀನನ್ನು ಮುಸ್ಲಿಂ ಸಂಘದವರು ಕೇಳಿದರೆ ಬಿಟ್ಟುಕೊಡಬೇಕಂತೆ ನಿಜವೇ, ಎಂದು ಆತಂಕದಿಂದ ಕೇಳುತ್ತಾರೆ.

ರಾಜ್ಯದಲ್ಲಿ ಈಗ ಸದ್ದು ಮಾಡುತ್ತಿರುವ ವಕ್ಫ್ ಆಸ್ತಿ ವಿಚಾರ ರೈತರ ಗೊಂದಲಕ್ಕೆ ಕಾರಣವಾಗಿದೆ, ರಾಜ್ಯದಲ್ಲಿ ಮೊದಲು ವಿಜಯಪುರ ಮತ್ತು ಹುಬ್ಬಳ್ಳಿಯಲ್ಲಿ ಪ್ರಾರಂಭವಾದ ಈ ವಿಚಾರ ಈಗ ರಾಜ್ಯದ ಎಲ್ಲ ಜಿಲ್ಲೆಗಳ ರೈತರಲ್ಲೂ ಚರ್ಚಾ ವಿಷಯವಾಗಿದೆ, ಈ ಬಗ್ಗೆ ರೆವಿನ್ಯೂ ಇಲಾಖೆಯ ಅಧಿಕಾರಿಗಳಿಗೂ ಸ್ಪಷ್ಟ ಮಾಹಿತಿ ಇಲ್ಲ. ರಾಜ್ಯದ ಕೆಲವು ಮಠ–ಮಂದಿರಗಳು ಸರ್ಕಾರಿ ಬೀಳು ಜಮೀನು ಮತ್ತು ಸ್ಮಶಾನದ ಭೂಮಿಯ ಪಹಣಿಯಲ್ಲಿ ವಕ್ಫ್ ಆಸ್ತಿ"ಎಂದು ನಮೂದಿತವಾಗುತ್ತಿರುವುದು ಇಡೀ ರಾಜ್ಯದ ಜನತೆಯನ್ನು ಬೆಚ್ಚಿ ಬೀಳಿಸುವ ಸಂಗತಿ,

ಪಾಂಡವಪುರ ಎಸಿ ಕೋರ್ಟ್‌ನಿಂದ ಆದೇಶವಾದ, ನಮ್ಮ ಜಮೀನಿನ ಪಹಣಿ ನಮ್ಮ ತಂದೆ ಹೆಸರಿಗೆ ಬರಲು ಸುಮಾರು ಒಂದು ವರ್ಷ ಕಾಲ ಹಿಡಿಯಿತು.ಆದರೆ ಈಗ ಕೆಲವು ರೈತರ ಪಹಣಿ ರಾತ್ರೋರಾತ್ರಿ ಬದಲಾವಣೆ ಆಗಲು. ಹೇಗೆ ಸಾಧ್ಯ? ರೈತರ ಜಮೀನಿನ ಪಹಣಿ ಏಕಾಏಕಿ ಬದಲಾವಣೆ ಆಗುತ್ತಿರುವುದು ಏಕೆ? ಈ ವಿವಾದಕ್ಕೆ ಕಾರಣಗಳೇನು? ಸರ್ಕಾರ ಈ ಗೊಂದಲವನ್ನು ಮೊದಲು ನಿವಾರಿಸಿ, ರೈತರು ನೆಮ್ಮದಿಯಿಂದ ಬದುಕಲು ಬಿಡಬೇಕು. **–ಬೂಕನಕೆರೆ ವಿಜೇಂದ್ರ. ಕುವೆಂಪುನಗರ, ಮೈಸೂರು.**

ನಮ್ಮ ಮೈಸೂರಿನ ಅಸಾಮಾನ್ಯರು...



ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಹಿಡಿದು ಯದುವಂಶದ ಕೊನೆಯ ಮಹಾರಾಜರಾದ ಜಯಚಾಮರಾಜ ಒಡೆಯರ್ ಆಡಳಿತದ ಅವಧಿಯವರೆಗೆ ಅನೇಕ ಶ್ರೇಷ್ಠ ಮಹನೀಯರು ಮೈಸೂರು ರಾಜ್ಯದಲ್ಲಿ ಗಣನೀಯ ಸೇವೆ ಸಲ್ಲಿಸಿದ್ದಾರೆ. ಅಂತಹ ಕೆಲವರ ಹೆಸರುಗಳನ್ನು ಮೈಸೂರು ಚರಿತ್ರೆಗೆ ಸಂಬಂಧಪಟ್ಟ ಇತಿಹಾಸದ ಪುಸ್ತಕಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಕಾಣುತ್ತೇವೆ. ಆಡಳಿತದ ಪ್ರಮುಖ ಹುದ್ದೆಯಲ್ಲಿದ್ದು, ಗಣನೀಯ ಸೇವೆ ಸಲ್ಲಿಸಿದ್ದ ಕೆಲವರ ಹೆಸರುಗಳು ಅವುಗಳಲ್ಲಿ ಕಂಡು ಬಂದರೂ, ಅವರಂತೆಯೇ ಅಪೂರ್ವ ಸೇವೆ ಸಲ್ಲಿಸಿರುವ ಇತರ ನೂರಾರು ಮಂದಿ ಎಲ್ಲಿಯೂ ಪ್ರಸ್ತಾಪಗೊಳ್ಳದೆ ಎಲೆಮರೆಕಾಯಿಯಾಗಿ ಉಳಿದು ಹೋಗಿದ್ದಾರೆ. ನೆನಪಿನ ಅಂಗಳದಿಂದ ಜಾರಿ ಹೋಗಿದ್ದಾರೆ. ಹಾಗೆ ಸೇವೆ ಸಲ್ಲಿಸಿದರಲ್ಲಿ ಹಲವಾರು ಮಂದಿ ಅಂದಿಗೆ ಖ್ಯಾತನಾಮರಾಗಿದ್ದರೂ ಇಂದು ಅವರ ಬಗ್ಗೆ ನಮಗೆ ಹೆಚ್ಚು ತಿಳಿಯದೆ ಹೋಗಿದೆ. ನೆನಪಿನಿಂದ ಅಳಿಸಿಹೋಗಿದ್ದಾರೆ. ಕೆಲವರ ಸೇವೆಯನ್ನಾದರೂ ಇಲ್ಲಿ ಗುರುತಿಸುವ ಪ್ರಯತ್ನ ನನ್ನದು. ಇಂತಹ ಪ್ರಯತ್ನ ಬಹಳ ಹಿಂದೆಯೇ ಪ್ರಾರಂಭಿಸುವ ಉದ್ದೇಶ ಹೊಂದಿದ್ದರೂ, ಅದು ಈಗ ಸಾಧ್ಯವಾಗುತ್ತಿದೆ. ನೆನಪಿನಂಗಳದಿಂದ ಮರೆಯಾದ ಮಹನೀಯರ ಪರಿಚಯ ಒಂದು ಮಾಲಿಕೆಯಾಗಿ ಪ್ರಕಟಗೊಳ್ಳಲಿದೆ. ಅವು 'ಮೈಸೂರು ಮಿತ್ರ' ಓದುಗರಿಗೆ ಮೆಚ್ಚುಗೆಯಾದರೆ, ಅದೇ ನನಗೆ ಬರೆದ ತೃಪ್ತಿ.



43. ರಾಜಸೇವಾಸಕ್ತ ಸಿ.ನರಸಿಂಹಯ್ಯ



ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಅಂದಿಗೆ ಬಡತನವೇ ಜಾಸ್ತಿ. ಕುಟುಂಬಗಳು ಬಡತನದಲ್ಲಿ ಬದುಕು ಸಾಗಿಸಬೇಕಾಗುತ್ತಿತ್ತು. ಉದ್ಯೋಗ ಗಳಿಸಿ ಹಣ ಸಂಪಾದಿಸಿದರೂ ಬಹಳಷ್ಟು ಮಂದಿ ತಮ್ಮ ಬದುಕಿಗೆ ಎಷ್ಟು ಬೇಕೋ ಅಷ್ಟನ್ನು ಮಾತ್ರ ಇಟ್ಟುಕೊಂಡು ಮಿಕ್ಕ ಹಣದಲ್ಲಿ ಇತರರಿಗೆ ನೆರವಾಗುತ್ತಿದ್ದರು. ಅದರಲ್ಲಿಯೂ ಬಡ ವಿದ್ಯಾರ್ಥಿಗಳಿಗೆ ನೆರವಾಗಿ ಅವರ ಭವಿಷ್ಯಕ್ಕೆ ಸಹಾಯ ಮಾಡುತ್ತಿದ್ದರು. ಅಂದಿಗೆ ಇಂತಹವರು ಬಹಳಷ್ಟು ಮಂದಿ. ತಾವು ಉಪಕಾರ ಮಾಡುತ್ತಿದ್ದೇವೆ ಎಂಬ ಸ್ವಾರ್ಥವನ್ನು ನೆನಪಿಗೆ ತಂದುಕೊಳ್ಳದೆ ಬಡವರಿಗೆ ತಮ್ಮ ಕೈಲಾದಷ್ಟು ನೆರವಾಗುತ್ತಿದ್ದರು. ಆದರ್ಶದ ಬದುಕು ಬಾಳುತ್ತಿದ್ದರು. ಆದರ್ಶಪುರುಷರಾಗಿದ್ದರು. ಅಂತಹವರಲ್ಲಿ ಸಿ.ನರಸಿಂಹಯ್ಯನವರು ಒಬ್ಬರು. ಮೈಸೂರನ್ನು ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡು ಹಲವು ದಿಕ್ಕುಗಳಲ್ಲಿ ಶ್ರಮಿಸಿದರು. ಅದನ್ನು ಕಂಡು ಮೆಚ್ಚಿದ ನಾಡರಸ ಅವರಿಗೆ 'ರಾಜಸೇವಾಸಕ್ತ' ಬಿರುದನ್ನು ನೀಡಿ ಪ್ರೋತ್ಸಾಹಿಸಿದ್ದರು.

ನರಸಿಂಹಯ್ಯನವರು ಮೈಸೂರಿನಲ್ಲಿ ಖ್ಯಾತ ವಕೀಲರಾಗಿದ್ದರು. ಜೊತೆಗೆ ಸಮಾಜದ ಸೇವೆ ಮಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ದುಡಿದರು. ಪ್ರಜಾಪ್ರತಿನಿಧಿ ಸಭೆ ಸದಸ್ಯರಾಗಿದ್ದರು. ನಗರಾಭಿವೃದ್ಧಿ ಯೋಜನೆಗಳಲ್ಲೂ ಭಾಗಿಯಾಗಿದ್ದರು. ಸಾಹಿತ್ಯ–ಸಂಗೀತದ ಒಲವನ್ನೂ ಬೆಳೆಸಿಕೊಂಡಿದ್ದರು. ರಂಗಕಲಾವಿದರೂ ಆಗಿದ್ದರು. ಅನ್ನದಾನದ ಕೊಡುಗೈ ದಾನಿಯಾಗಿದ್ದರು. ಮೈಸೂರಿನ ಪ್ರಗತಿಗೆ ತಮ್ಮ ಅಳಿಲು ಸೇವೆ ಮಾಡಿದರು. ಆದರೆ ಎಲೆಮರೆಕಾಯಿಯಾಗಿ ಉಳಿದರು.

ಹೆಗ್ಗಡದೇವನಕೋಟೆ ತಾಲೂಕಿಗೆ ಸೇರಿದ ಕ್ಯಾತನಹಳ್ಳಿ ನರಸಿಂಹಯ್ಯನವರ ಪೂರ್ವಿಕರ ಸ್ಥಳ. ಅದು ಸರಗೂರಿನ ಸಮೀಪ ಒಂದು ಹಳ್ಳಿ. ಅಲ್ಲಿನ ದೇವಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳಿಗೆ ನರಸಿಂಹಯ್ಯನವರು ಜನಿಸಿದರು. ತಂದೆ–ತಾಯಿಯನ್ನು ಬೇಗನೇ ಕಳೆದುಕೊಂಡ ಅವರು ವಿದ್ಯಾಭ್ಯಾಸಕ್ಕಾಗಿ ಮೈಸೂರಿಗೆ ಬಂದರು. ಇಲ್ಲಿ ಅವರು ತಮ್ಮ ಅಕ್ಕ ಮತ್ತು ಭಾವನ ಆಶ್ರಯದಲ್ಲಿದ್ದು ಓದನ್ನು ಮುಂದುವರಿಸಿದರು. ಅವರು ಕಾಲವಾದ ನಂತರ ಆಸರೆ ಇಲ್ಲದೆ ವಾರಾನ್ನ, ಬೀದಿ ದೀಪದ ಕೆಳಗೆ ಓದು. ಹೀಗೆ ಜೀವನ ನಡೆಸಿ ವೆಸ್ಲಿಯನ್ ಪ್ರೌಢಶಾಲೆಯಲ್ಲಿ ಮೆಟ್ರಿಕ್ ಪರೀಕ್ಷೆ ಮುಗಿಸಿದರು. ವಿದ್ಯಾರ್ಥಿವೇತನಗಳನ್ನು ಪಡೆದು ಮಹಾರಾಜ ಕಾಲೇಜಿನಲ್ಲಿ ಬಿ.ಎ. ಪದವಿ ಪಡೆದರು. ಮುಂದೆ ಬಿ.ಎಲ್. ಪದವಿ ಪಡೆದುಕೊಳ್ಳಲು ಮದರಾಸಿಗೆ ತೆರಳಿದರು. ಅಲ್ಲಿ ಒಬ್ಬ ಚೆಟ್ಟಿಯಾರ್ ಮನೆಯಲ್ಲಿ ಆಶ್ರಯ ಸಿಕ್ಕಿತು. ಅಲ್ಲಿದ್ದಾಗ ಒಬ್ಬ ವಿದ್ಯಾರ್ಥಿಗೆ ಕನ್ನಡ ಪಾಠ ಹೇಳಿಕೊಡುತ್ತಾ ಒಂದಷ್ಟು ಹಣ ಸಂಪಾದಿಸಿದರು. ಜೊತೆಗೆ ಮುತ್ತುಗದ ಎಲೆಗಳಿಂದ ಊಟದ ಎಲೆಗಳನ್ನು ಹೊಲಿದು ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಂಡರು. ಬಂದ ಹಣದಲ್ಲಿ ಊಟದ ವ್ಯವಸ್ಥೆ ಮಾಡಿಕೊಂಡರು.

ಮದ್ರಾಸಿನಲ್ಲಿ ಕಷ್ಟದ ಬದುಕು ನಿರ್ವಹಿಸಿ ಓದು ಮುಗಿಸಿ 1903ರಲ್ಲಿ ಮೈಸೂರಿಗೆ ಹಿಂತಿರುಗಿದರು. ಮೈಸೂರಿಗೆ ಬಂದ ಮೇಲೆ ತಮಗೆ ಪೂರ್ವಿಕರ ಆಸ್ತಿ ಇದ್ದು ಅದು ಅನ್ಯರ ಪಾಲಾಗಿದೆ ಎಂದು ತಿಳಿಯಿತು. ನರಸಿಂಹಯ್ಯನವರು ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ತಮ್ಮ ಆಸ್ತಿ ಪಡೆದುಕೊಂಡರು. ಆದರೆ ಆಸ್ತಿಯನ್ನು ಗಳಿಸಿ ಜೀವನ ನಿರ್ವಹಿಸುವುದಕ್ಕೆ ಮಾತ್ರ ತಮ್ಮ ಬದುಕನ್ನು ಸೀಮಿತಗೊಳಿಸದೆ ಬಡತನ, ಕಷ್ಟಗಳ ನೋವುಂಡಿದ್ದ ಅವರು ಬಡ ವಿದ್ಯಾರ್ಥಿಗಳಿಗೆ ಸಾಧ್ಯವಾದಷ್ಟು ನೆರವು ನೀಡಲು ಪ್ರಾರಂಭಿಸಿದರು. ಕಾಲೇಜಿನಲ್ಲಿ ಸೀಟು ಪಡೆಯಲು ಅಥವಾ ಉದ್ಯೋಗ ಪಡೆದುಕೊಳ್ಳಲು ನೆರವಾದರು. ಶಿಕ್ಷಣ ಸಂಸ್ಥೆಗಳಿಗೆ ನೆರವು ನೀಡಿದರು. ಅವರ ಮನೆ ಒಂದು ಅನಾಥಾಲಯದಂತಾಗಿತ್ತು. ಓದುವ ವಿದ್ಯಾರ್ಥಿಗಳಿಗೆ, ಹೊರಗಿನಿಂದ ಬಂದ ವಿದ್ಯಾರ್ಥಿಗಳಿಗೆ, ಬಡಜನರಿಗೆ ಸದಾ ಅದು ತೆರೆದಿತ್ತು.

ನರಸಿಂಹಯ್ಯನವರು ಮೈಸೂರಿನಲ್ಲಿ ವಕೀಲ ವೃತ್ತಿಯನ್ನು ಪ್ರಾರಂಭಿಸಿ ಹೈಕೋರ್ಟಿನಲ್ಲಿ ವಕೀಲರಾಗಿ ನೋಂದಾಯಿಸಿಕೊಂಡರು. ತಮ್ಮ ಜಾಣ್ಮೆಯಿಂದ ಯಶಸ್ವೀ ವಕೀಲರಾದರು. ಮದರಾಸಿನಲ್ಲಿ ಅವರಿಗೆ ಆಶ್ರಯ ನೀಡಿದ್ದ ಚೆಟ್ಟಿಯಾರ್ ಅವರೇ ನರಸಿಂಹಯ್ಯನವರ ಕಕ್ಷಿದಾರರಾದದ್ದು ಇವರ ಜನಪ್ರಿಯತೆ ತೋರುತ್ತದೆ. ನರಸಿಂಹಯ್ಯನವರು 1925ರಿಂದ 1936ರವರೆಗೆ ಸುಮಾರು ಹನ್ನೆರಡು ವರ್ಷಗಳ ಕಾಲ ಮೈಸೂರಿನ ವಕೀಲರ ಸಂಘದ ಅಧ್ಯಕ್ಷರಾಗಿದ್ದರು. 1935ರಲ್ಲಿ ಅವರ ಭಾವಚಿತ್ರವನ್ನು ಸಂಘದಲ್ಲಿ ಅನಾವರಣ ಮಾಡಿದಾಗ ಅದು ವಕೀಲರೊಬ್ಬರಿಗೆ ಸಂದ ಮೊಟ್ಟ ಮೊದಲ ಗೌರವವಾಗಿತ್ತು. ಅವರ ಮಾರ್ಗದರ್ಶನದಲ್ಲಿ ಸುಮಾರು 25ಕ್ಕೂ ಹೆಚ್ಚು ಕಿರಿಯ ವಕೀಲರು ತರಬೇತಿ ಪಡೆದು ಹೆಸರು ಮಾಡಿದರು.

ಲಕ್ಷ್ಮೀಪುರಂ ಬಡಾವಣೆಯಲ್ಲಿ ನೆಲೆಸಿದ್ದ ನರಸಿಂಹಯ್ಯನವರ ಕುಟುಂಬ ನಗರದ ಶ್ರೀಮಂತ ಕುಟುಂಬಗಳಲ್ಲಿ ಒಂದಾಗಿತ್ತು. ವಿಶಾಲವಾಗಿದ್ದ ಅವರ ಬಂಗಲೆಯಲ್ಲಿ ಪ್ರತಿನಿತ್ಯ ಇಪ್ಪತ್ತೈದು ಮಂದಿಗೆ ಕಡಿಮೆ ಇಲ್ಲದಂತೆ ಊಟದ ವ್ಯವಸ್ಥೆಯಿತ್ತು. ಹಾಲು, ಮೊಸರಿಗೆ ತೊಂದರೆಯಾಗಬಾರದೆಂದು ಮನೆಯಲ್ಲಿ ಹಸು, ಎಮ್ಮೆಗಳನ್ನು ಸಾಕಿದ್ದರು. ಬಂಗಲೆಯಲ್ಲಿ ಹಲವಾರು ಕೊಠಡಿಗಳಿದ್ದು ಅವರ ಬಂಧುವರ್ಗದ ಕೆಲವರು ಆ ಮನೆಯಲ್ಲಿಯೇ ಇದ್ದುಬಿಟ್ಟಿದ್ದರು. ಜೊತೆಗೆ ಬಡಮಕ್ಕಳಿಗೆ, ನೆಲೆಯಿಲ್ಲದವರಿಗೆ ಅಲ್ಲಿ ಆಶ್ರಯ ಒದಗಿಸಲಾಗಿತ್ತು. ಅವರಲ್ಲಿ ಮಡಿ ಹೆಂಗಸರೂ ಇದ್ದರು. ಯಾವುದೇ ತಾರತಮ್ಯ ತೋರದೆ ಎಲ್ಲರಿಗೂ ಒಂದೇ ರೀತಿಯ ಊಟ ನೀಡಲಾಗುತ್ತಿತ್ತು. ಯಾರಾದರೂ ಕಷ್ಟ ಹೇಳಿಕೊಂಡು ಬಂದರೆ ಅವರಿಗೆ ನರಸಿಂಹಯ್ಯ ಅವರು ನೆರವೂ ನೀಡುತ್ತಿದ್ದರು.

ವಕೀಲ ವೃತ್ತಿಯಲ್ಲದೆ ನರಸಿಂಹಯ್ಯನವರು ಮೈಸೂರಿನ ಗಣ್ಯವ್ಯಕ್ತಿಗಳಾಗಿದ್ದ ಧರ್ಮರತ್ನಾಕರ ನಂದಿಬಸಪ್ಪನವರ ಆಯಿಲ್ ಮತ್ತು ರೈಸ್ ಮಿಲ್ಲಿನ ಪಾಲುದಾರರಾಗಿದ್ದರು. ವ್ಯಾವಹಾರಿಕ ಬದುಕಿನ ನಿಸ್ಸಾರತೆಯನ್ನು ದೂರಮಾಡಿಕೊಳ್ಳಲು ತಮಗೆ ಚಿಕ್ಕಂದಿನಿಂದ ಆಸಕ್ತಿಯಿದ್ದ ಸಂಗೀತ ಮತ್ತು ನಾಟಕಗಳತ್ತ ಅವರು ಮತ್ತೆ ಮುಖ ಮಾಡಿದರು. ಅರಮನೆಯ ಸಂಗೀತಶಾಲೆಯಲ್ಲಿ ಹಲವು ವರ್ಷಗಳು ಕರ್ನಾಟಕ ಸಂಗೀತ ಗಾಯನ ಮತ್ತು ವೀಣೆ ನುಡಿಸುವುದನ್ನು ಕಲಿತರು. 'ಮೈಸೂರು ಶೈಲಿ'ಯ ವೀಣಾವಾದನದಲ್ಲಿ ಹೆಚ್ಚಿನ ಆಸಕ್ತಿ ತೋರಿ ಅದರ ಅಧ್ಯಯನವನ್ನು ಮಾಡಿದರು. ಈ ಸಂಬಂಧ ಅವರು ಬರೆದಿಟ್ಟಿದ್ದ ಹಸ್ತಪ್ರತಿಯೊಂದು ಇದ್ದು ಅದರಲ್ಲಿ ಅವರು ಮುಮ್ಮಡಿ ಕೃಷ್ಣರಾಜ ಒಡೆಯರ ಆಸ್ಥಾನದ ಕೆಲವು ಹಿರಿಯ ಸಂಗೀತ ವಿದ್ವಾಂಸರ ಬಗ್ಗೆ ಬರೆದಿಟ್ಟಿದ್ದಾರೆ.. ಸಾಹಿತ್ಯದಲ್ಲೂ ಆಸಕ್ತಿ ಇದ್ದ ಅವರು 'ಲಂಚಶತಕ' ಎಂಬ ಚೌಪದಿಗಳ ಪುಸ್ತಕವೊಂದನ್ನು ಹೊರತಂದಿದ್ದರು. ಅವರ ಇನ್ನೊಂದು ಹವ್ಯಾಸ ಕುದುರೆ ಸವಾರಿಯಾಗಿತ್ತು. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ ವಿಶ್ವಾಸ ಗಳಿಸಿ ಅವರೊಂದಿಗೆ ಟೆನಿಸ್ ಆಡುತ್ತಿದ್ದರು.

ಅರಮನೆಯಲ್ಲಿ ಒಂದು ನಾಟಕಶಾಲೆಯಿತ್ತು. ನರಸಿಂಹಯ್ಯನವರಿಗೆ ನಾಟಕಗಳಲ್ಲಿ ಒಲವಿದ್ದನ್ನು ಕಂಡು ಮಹಾರಾಜರು ಅದರ ನೇತೃತ್ವವನ್ನು ಇವರಿಗೆ ವಹಿಸಿದ್ದರು. ಇವರು ಅದರ ಚಟುವಟಿಕೆಗಳ ವ್ಯವಸ್ಥೆಯನ್ನು ಮಾಡುವುದರ ಜೊತೆಗೆ, ಅದರ ಕಲಾವಿದರನ್ನು ಬೇರೆ ಬೇರೆ ಊರುಗಳಿಗೆ ಕರೆದುಕೊಂಡು ಹೋಗಬೇಕಾಗುತ್ತಿತ್ತು. ಹಾಗೆ ಒಮ್ಮೆ ಮದರಾಸಿಗೆ ಕರೆದುಕೊಂಡು ಹೋಗಿದ್ದಾಗ ಮೈಸೂರಿನ ತಂಡವು ಪ್ರದರ್ಶಿಸಿದ ನಾಟಕ ಮದ್ರಾಸಿನ ನಾಟಕ ಕ್ಷೇತ್ರದಲ್ಲಿ ಒಂದು ಸ್ಮರಣೀಯವಾದ ಪರಿಣಾಮವನ್ನು ಉಂಟು ಮಾಡಿತು. ನಾಟಕದ ವೀಕ್ಷಣೆಗೆ ಬಂದಿದ್ದವರು ಹಾಗೂ ಅಲ್ಲಿನ ಕಲಾವಿದರ ಮನಸ್ಸನ್ನು ಗೆದ್ದಿತು. ಮಹಾರಾಜರ ಕಲಾಭಿಮಾನಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪಿಸಿರುವುದರ ಜೊತೆಗೆ ನರಸಿಂಹಯ್ಯನವರು ಮಹಾರಾಜರ ಆಡಳಿತಕ್ಕೆ ಸಂಬಂಧಪಟ್ಟಂತೆ ಇಂತಹ ಕೆಲವು ಅಂಶಗಳನ್ನು ದಾಖಲಿಸಿಟ್ಟಿದ್ದಾರೆ.

ಸಿ.ನರಸಿಂಹಯ್ಯನವರು ಸರ್ಕಾರದ ಮಟ್ಟದಲ್ಲಿ ಮತ್ತು ಖಾಸಗಿ ವಲಯದಲ್ಲಿ ಹಲವಾರು ಗಣ್ಯರೊಂದಿಗೆ ಆತ್ಮೀಯ ಸಂಪರ್ಕ ಹೊಂದಿದ್ದರು. ಇದಕ್ಕೆ ಸಂಬಂಧಪಟ್ಟಂತೆ ಕಾಗದಪತ್ರಗಳ ಜೊತೆಗೆ ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ಕೈಬರಹದ ಪುಸ್ತಕವೊಂದನ್ನೂ ಬರೆದಿಟ್ಟಿದ್ದಾರೆ. ಇವರು ಬಿಟ್ಟು ಹೋಗಿರುವ ಸಂಗ್ರಹದಲ್ಲಿ ರಾಷ್ಟ್ರಪತಿಗಳಾಗಿದ್ದ ಡಾ.ಎಸ್.ರಾಧಾಕೃಷ್ಣನ್, ಮುಖ್ಯಮಂತ್ರಿಗಳಾಗಿದ್ದ ಕೆ.ಸಿ.ರೆಡ್ಡಿ, ದಿವಾನರುಗಳಾಗಿದ್ದ ಸರ್ ಎಂ.ವಿಶ್ವೇಶ್ವರಯ್ಯ ಹಾಗೂ ಸರ್. ಮಿರ್ಜಾ ಇಸ್ಮಾಯಿಲ್ ಅವರ ಪತ್ರಗಳೂ ಇವೆ. ನರಸಿಂಹಯ್ಯನವರನ್ನು ಕುರಿತಂತೆ ಲೇಖಕಿ ನಂ.ನಾಗಲಕ್ಷ್ಮಿ ಅವರು ಇದೇ ಮೊದಲ ಬಾರಿಗೆ ಒಂದು ಕಿರು ಹೊತ್ತಿಗೆಯನ್ನು ಈಚೆಗೆ ಬರೆದಿದ್ದಾರೆ.

ರಾಷ್ಟ್ರೀಯ ಅಥ್ಲೆಟಿಕ್ಸ್‌ನಲ್ಲಿ ಮಮತಾಗೆ ಚಿನ್ನದ ಗರಿ



ಮೈಸೂರು,ನ.10–ಶ್ರೀ ವಾಣಿ ವಿಲಾಸ ಅರಸು ಬಾಲಿಕಾ ಪದವಿ ಪೂರ್ವ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಮಮತಾ, ವಿದ್ಯಾಭಾರತೀ ಅಖಿಲ ಭಾರತೀಯ ಶಿಕ್ಷಾ ಸಂಸ್ಥಾನದಲ್ಲಿ ಅ.23ರಿಂದ 27ರವರೆಗೆ ಮಧ್ಯಪ್ರದೇಶದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಅಥ್ಲೆಟಿಕ್ಸ್ ಕ್ರೀಡಾಕೂಟದ 100 ಮೀ. ಓಟದಲ್ಲಿ ಪ್ರಥಮ ಮತ್ತು 400 ಮೀ. ರಿಲೇ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ. ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್‌ನ ಮಹಾಪೋಷಕಿ, ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್, ಸಂಸದ ಯದುವೀರ್ ಒಡೆಯರ್, ಸಂಸ್ಥೆಯ ಸದಸ್ಯರು, ಪ್ರಾಂಶುಪಾಲರು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು, ಮಮತಾ ಸಾಧನೆಯನ್ನು ಅಭಿನಂದಿಸಿದ್ದಾರೆ.

ಸಾಲ ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ

ಮೈಸೂರು: ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮದ ವತಿಯಿಂದ 2024–25 ನೇ ಸಾಲಿನ ಅರಿವು ಶೈಕ್ಷಣಿಕ ಸಾಲ ಯೋಜನೆಯಡಿ ಸಾಲ ಸೌಲಭ್ಯವನ್ನು ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳಿಗೆ ಯೋಜನೆಯಡಿ ಸಿ.ಇ.ಟಿ/ಎನ್. ಇ.ಇ.ಟಿ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ವೃತ್ತಿಪರ ಕೋರ್ಸ್ ಹಾಗೂ ಪಿಹೆಚ್.ಡಿನಲ್ಲಿ ವ್ಯಾಸಂಗ ಮಾಡುವ ಆರ್ಯ ವೈಶ್ಯ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.1.00.000 ಗಳ ಸಾಲವನ್ನು ಶೇ.2ರ ಬಡ್ಡಿ ದರದಲ್ಲಿ ಶೈಕ್ಷಣಿಕ ಸಾಲ ನೀಡಲಾಗುವುದು, ಅರ್ಜಿದಾರರು 18 ವರ್ಷ ಮೇಲ್ಪಟ್ಟು 35 ವರ್ಷದ ಒಳಗಿನವರಾಗಿರಬೇಕು, ಅರ್ಜಿದಾರರ ಕುಟುಂಬದ ವಾರ್ಷಿಕ ವರಮಾನ ಗ್ರಾಮಾಂತರ ಮತ್ತು ನಗರ ಪ್ರದೇಶದವರಿಗೆ ರೂ. 6,00,000 ಗಳ ಮಿತಿಯೊಳಗಿರಬೇಕು. ಆಸಕ್ತರು www.kacdc. karnataka.gov.in ಮೂಲಕ ಡಿ.15ರೊಳಗೆ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಸಹಾಯವಾಣಿ 9448451111 ಅನ್ನು ಸಂಪರ್ಕಿಸಬಹುದು.

ಮೈಸೂರಿನ ಇಲವಾಲದ ಸರ್ಕಾರಿ ಭೂಮಿ ವಕ್ಫ್ ಆಸ್ತಿಯೆಂದು ಘೋಷಣೆ

ಮೈಸೂರು, ನ.10(ಬಿಎಲ್‌ಯು)– ತಿ.ನರಸೀಪುರದ ರಂಗಸಮುದ್ರ ಗ್ರಾಮದ ಸ್ಮಶಾನವನ್ನು ವಕ್ಫ್ ಆಸ್ತಿ ಎಂದು ಉಲ್ಲೇಖಿಸಿರುವ ಪ್ರಕರಣದ ನಂತರ ಮೈಸೂರಿನ ಇಲವಾಲದಲ್ಲಿ ಕೂಡ ಸರ್ಕಾರಿ ಭೂಮಿಯನ್ನು ಮುಸಲ್ಮಾನರ ಈದ್ಗಾ ಸುನ್ನಿ ವಕ್ಫ್ ಆಸ್ತಿ ಎಂದು ಘೋಷಣೆ ಮಾಡಿರುವ ಮತ್ತೊಂದು ಪ್ರಕರಣ ಬೆಳಕಿಗೆ ಬಂದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿನಿಧಿಸುವ ವರುಣ ಕ್ಷೇತ್ರದ ಸ್ಮಶಾನ ಭೂಮಿಯನ್ನು ವಕ್ಫ್ ಆಸ್ತಿ ಎಂದು ಘೋಷಿಸಿರುವ ವಿಚಾರ ತೀವ್ರ ವಿವಾದ ಆಗಿರುವ ಬೆನ್ನಲ್ಲೆ ಇದೇ ರೀತಿಯ ಒಂದೊಂದು ಪ್ರಕರಣಗಳು ಬೆಳಕಿಗೆ ಬರುತ್ತಿವೆ.

ಮೈಸೂರು ತಾಲೂಕು ಇಲವಾಲ ಗ್ರಾಮದ ಸರ್ವೆ ನಂಬರ್ 54ರಲ್ಲಿರುವ 34 ಗುಂಟೆ ಭೂಮಿ ಪಹಣಿಯಲ್ಲಿ 2020ರವರೆಗೆ ಸರ್ಕಾರಿ ಎಂಬ ಉಲ್ಲೇಖವಿದೆ. ಆದರೆ, 2022ರಿಂದ ಸರ್ಕಾರಿ ಆಸ್ತಿ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಿಸಲಾಗಿದೆ. ಹೀಗೆ ವಕ್ಫ್ ಆಸ್ತಿ ಎಂದು ತಿದ್ದುಪಡಿಯಾಗಿರುವ ಒಂದೊಂದೇ ಪ್ರಕರಣಗಳು ಈಗ ಬೆಳಕಿಗೆ ಬರುತ್ತಿವೆ.

ಮುಸ್ಲಿಂರಿಂದಲ್ಲ, ರಾಜಕಾರಣಿಗಳಿಂದ ಸಾಂಸ್ಕೃತಿಕ ದಾಳಿ

ನೈಪುಣ್ಯ ವಿದ್ಯಾಸಂಸ್ಥೆಯ ಮುಖ್ಯಸ್ಥ ರಘು ಆರ್.ಕೌಟಿಲ್ಯ ಅಭಿಪ್ರಾಯ

ಮೈಸೂರು, ನ.10(ಜಿಎ)–ನಾಡಿನಲ್ಲಿ ಸಾಂಸ್ಕೃತಿಕ ದಾಳಿಯನ್ನು ಮುಸ್ಲಿಂರು ಮಾಡಲಿಲ್ಲ. ನಮ್ಮ ರಾಜಕಾರಣಿಗಳು ಮಾಡಿದ್ದಾರೆ ಎಂದು ನೈಪುಣ್ಯ ವಿದ್ಯಾಸಂಸ್ಥೆಯ ಸಂಸ್ಥಾಪಕ ರಘು ಆರ್.ಕೌಟಿಲ್ಯ ಅಭಿಪ್ರಾಯಪಟ್ಟರು.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುವರ್ಣ ಸಂಭ್ರಮ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಅವರ ಅಭಿನಂದನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ನಾಡು, ನುಡಿಗಾಗಿ ಹೋರಾಡಿದ ಪರಂಪರೆಯನ್ನು ಹೊಂದಿದ್ದು, ಸಾಕಷ್ಟು ಹೋರಾಟಗಳು ಆರಂಭವಾಗಿದ್ದು ಮೈಸೂರಲ್ಲಿ. ಈ ಹಿಂದಿನ ಒಂದು ತಲೆವಾರು ಭಾಷೆ, ಗಡಿ, ನಾಡು, ನುಡಿ, ಜಲದ ವಿಷಯಗಳಲ್ಲಿ ಧ್ವನಿ ಎತ್ತುತ್ತಿದ್ದರು. ಆದರೆ, ಇಂದಿನ ದಿನಗಳಲ್ಲಿ ಯಾರೂ ಕಾಣಿಸುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.



ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ನಮನ ಕಲಾ ಮಂಟಪದಲ್ಲಿ ಹೊಯ್ಸಳ ಕನ್ನಡ ಸಂಘ ಮತ್ತು ಸವಿಗನ್ನಡ ಪತ್ರಿಕಾ ಬಳಗ ಆಯೋಜಿಸಿದ್ದ ಸುವರ್ಣ ಸಂಭ್ರಮ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಿವೃತ್ತ ಶಿಕ್ಷಕರಾದ ಎ.ಸಂಗಪ್ಪ, ಹೆಚ್.ವಿ.ಮುರುಳಿಧರ್, ವೆಂಕಟರಮಣ ಕಲಗಾರ್, ಸಾಮಾಜಿಕ ಹೋರಾಟಗಾರ ತೇಜಸ್ವಿ ನಾಗಲಿಂಗಸ್ವಾಮಿ, ವೇದ ವಿದ್ವಾಂಸ ರಾಜಶೇಖರ್ ಅವರನ್ನು ಅಭಿನಂದಿಸಲಾಯಿತು.

ಹಿರಿಯ ಕನ್ನಡ ಹೋರಾಟಗಾರರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿ, ಕನ್ನಡಕ್ಕಾಗಿ ಹೋರಾಟ ಮಾಡಿದ್ದಾರೆ. ಆದರೆ, ಇಂದು ಭಾಷಾ ಚಳುವಳಿಗಿಂತ ಜಾತಿ ಹೋರಾಟಕ್ಕೆ ಜನರು ಹರಿದು ಬರುತ್ತಿದ್ದಾರೆ ಎಂದು ವಿಷಾದಿಸಿದರು.

ಕನ್ನಡಿಗರ ಅಸ್ಮಿತೆಗಾಗಿ ನಡೆದ ಗೋಕಾಕ್ ಚಳುವಳಿ ಇಲ್ಲದಿದ್ದ ಕನ್ನಡ ಸ್ಥಿತಿ ನೆನಪಿಸಿಕೊಳ್ಳಬೇಕು. ಕರ್ನಾಟಕವು ಆಂಧ್ರಪ್ರದೇಶದ ಒಂದು ಭಾಗವಾಗುತ್ತಿತ್ತು. ಇದರ ಬಗ್ಗೆ ನಮ್ಮ ಮುಂದಿನ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಆದರೆ, ನಾವು ಮೈಸೂರು ಅರಸರು, ಕರ್ನಾಟಕದ ಗತ ವೈಭವ ತಿಳಿಸುವ ಬದಲು ಘಜಿನಿ ಮೊಹಮ್ಮದ್, ಕುತುಬ್‌ಮೀನಾರ್, ಖಿಲ್ಜಿ, ಟಿಪ್ಪು ಸುಲ್ತಾನ್ ಇತಿಹಾಸವನ್ನು ತಿಳಿದುಕೊಂಡಿದ್ದೇವೆ. ಈ ಸಾಂಸ್ಕೃತಿಕ ದಾಳಿಗೆ ಮುಸ್ಲಿಂಮರು ಕಾರಣರಲ್ಲ. ನಮ್ಮ ರಾಜಕಾರಣಿಗಳೇ ಕಾರಣ ಎಂದರು.

ಕಾರ್ಯಕ್ರಮದಲ್ಲಿ ಸುವರ್ಣ ಸಂಭ್ರಮ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಮೈಸೂರು ಜಿಲ್ಲಾ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ನಿವೃತ್ತ ಶಿಕ್ಷಕರಾದ ಎ.ಸಂಗಪ್ಪ, ಹೆಚ್.ವಿ.ಮುರುಳೀಧರ್, ವೆಂಕಟರಮಣ ಕಲಗಾರ್, ಸಾಮಾಜಿಕ ಹೋರಾಟಗಾರ ತೇಜಸ್ವಿ ನಾಗಲಿಂಗ ಸ್ವಾಮಿ, ವೇದ ವಿದ್ವಾಂಸ ರಾಜಶೇಖರ್ ಅವರನ್ನು ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ವಂಗೀಪುರ ನಂಬೀಮಠದ ಪೀಠಾಧ್ಯಕ್ಷ ಇಳೈ ಆಳ್ವಾರ್ ಸ್ವಾಮೀಜಿ, ಹಿರಿಯ ಲೇಖಕಿ ಡಾ ಸುಧಾ ರಮೇಶ್, ಮಹಾಕವಯತ್ರಿ ಡಾ.ಲತಾ ರಾಜಶೇಖರ್, ಹಿರಿಯ ವೈದ್ಯ ಡಾ.ಹೆಚ್.ಬಿ. ರಾಜಶೇಖರ್, ಸಮಾಜ ಸೇವಕ ಡಾ.ಕೆ. ರಘುರಾಮ್ ವಾಜಪೇಯಿ, ಸಾಹಿತ್ಯ ಲೋಕದ ಅಧ್ಯಕ್ಷ ಡಾ.ವೈ.ಡಿ.ರಾಜಣ್ಣ, ಸವಿಗನ್ನಡ ಪತ್ರಿಕೆ ಸಂಪಾದಕ ರಂಗನಾಥ್ ಇನ್ನಿತರರು ಉಪಸ್ಥಿತರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಒಂದನೇ ಪುಟದಿಂದ

ಕೀಲಾರ ಜಯರಾಂ ಆಣೆ ಮಾಡಲಿ

ಎಂದು ಸವಾಲು ಹಾಕಿದರು. ಆಡಳಿತರೂಢ ಕಾಂಗ್ರೆಸ್‌ನಲ್ಲಿ ಎಲ್ಲವೂ ಸರಿ ಇಲ್ಲ. ಹೊಡೆದಾಟ ಆರಂಭವಾಗಿದ್ದು, ಒಬ್ಬ ಮಂತ್ರಿಯ ಮೇಲೆ ಹಲ್ಲೆಗೆ ಮುಂದಾಗುವುದು ಎಷ್ಟು ಸರಿ? ಜಯರಾಂ ಈ ಹಿಂದೆ ಜೆಡಿಎಸ್‌ನಲ್ಲೇ ಇದ್ದು, ಪಕ್ಷ ಕಟ್ಟಿದವರು. ಇಂತಹ ನಡವಳಿಕೆ ನಡೆಯಬಾರದಿತ್ತು. ಇದು ನಮ್ಮ ಜಿಲ್ಲೆಗೆ ಅವಮಾನವಾಗಿದ್ದು, ಇದರ ಬಗ್ಗೆ ಇನ್ನಷ್ಟು ಸತ್ಯಾಸತ್ಯತೆ ಹೊರಬರಬೇಕೆಂದರು.

ಸುದ್ದಿಗೋಷ್ಠಿಯಲ್ಲಿ ವಿಧಾನಪರಿಷತ್ ಮಾಜಿ ಸದಸ್ಯ ಕೆ.ಟಿ.ಶ್ರೀಕಂಠೇಗೌಡ, ಮುಖಂಡರಾದ ಅಮರಾವತಿ ಚಂದ್ರಶೇಖರ್, ಯೋಗೇಶ್, ಪ್ರಕಾಶ್ ಇದ್ದರು.

ಹೆಚ್.ಡಿ.ಕುಮಾರಸ್ವಾಮಿ ಹೇಳಿಕೆ ಊಹಾಪೋಹ

ಗೆಲ್ಲಿಸಿದ ಚನ್ನಪಟ್ಟಣದ ಜನರ ಕೈ ಬಿಟ್ಟರು. ಇಂತಹವರಿಂದ ಏನನ್ನು ನಿರೀಕ್ಷೆ ಮಾಡಲು ಸಾಧ್ಯ. ನಾನು ಈ ಹಿಂದೆ ಕುಮಾರಸ್ವಾಮಿ ಜೊತೆ ಇದ್ದೆ, ಅವರು ಚುನಾವಣೆ ಅಂದರೆ ಹೇಗೆ ಕಲೆಕ್ಷನ್ ಮಾಡುತ್ತಾರೆ ಎಂಬುದು ಗೊತ್ತು. ಅವರ ಹಾಗೆ ರಾಜಕಾರಣಿಗಳ ಬಗ್ಗೆ ಲಘುವಾಗಿ ಮಾತನಾಡುವುದು ನನಗೆ ಗೊತ್ತಿಲ್ಲ, ಅವರಂತೆ ಪೆನ್‌ಡ್ರೈವ್ ಇಟ್ಟಿಲ್ಲ, ಆದರೆ ಅವರ ಬಗ್ಗೆ ಮಾಹಿತಿ ಇದೇ ಬೇಕಾದರೆ ಕೊಡುವೆ ಎಂದರು.

ಕುಮಾರಸ್ವಾಮಿ ವಿರುದ್ಧ ಹರಿಹಾಯ್ದ ಕೀಲಾರ ಜಯರಾಮ್: ಕೃಷಿ ಸಚಿವ ಚಲುವರಾಯಸ್ವಾಮಿಯವರು ಮೈಸೂರಿನಲ್ಲಿ ನಿಶ್ಚಿತಾರ್ಥ ಕಾರ್ಯಕ್ರಮವೊಂದರಲ್ಲಿ ಭೇಟಿಯಾಗಿದ್ದೆವು. ಆದರೆ ಅಲ್ಲಿ ಹಣಕಾಸಿನ ವಿಚಾರವಾಗಲಿ, ವರ್ಗಾವಣೆ ವಿಚಾರವಾಗಲಿ ಚರ್ಚೆ ಮಾಡಿಲ್ಲ ಎಂದು ಕೀಲಾರ ಜಯರಾಮ್ ಸ್ಪಷ್ಟಪಡಿಸಿದ್ದಾರೆ. ಈ ಸಂಬಂಧ ಮಾಧ್ಯಮಗಳ ಜೊತೆ ಮಾತನಾಡಿರುವ ಅವರು, 40 ವರ್ಷಗಳಿಂದ ಸಚಿವ ಚಲುವರಾಯಸ್ವಾಮಿ ಜೊತೆ ಒಡನಾಡಿಯಾಗಿದ್ದೇನೆ. ಕುಮಾರಸ್ವಾಮಿ ತಮ್ಮ ರಾಜಕೀಯ ಬೆಳೆ ಬೇಯಿಸಿಕೊಳ್ಳಲು ಇಲ್ಲಸಲ್ಲದ ಹೇಳಿಕೆ ನೀಡುತಿದ್ದಾರೆ ಎಂದರು. ಚಲುವರಾಯಸ್ವಾಮಿ ಅವರಿಂದ ನನಗೆ ಯಾವುದೇ ರೀತಿ ಅನ್ಯಾಯವಾಗಿಲ್ಲ, ವರ್ಗಾವಣೆ ಮಾಡಿಸಲು ನನ್ನ ಮಕ್ಕಳಾರು ಕೃಷಿ ಇಲಾಖೆ ಅಥವಾ ಬೇರೆ ಇಲಾಖೆಗಳಲ್ಲಿ ಹುದ್ದೆ ಹೊಂದಿಲ್ಲ. ಮತ್ತು ಯಾವುದೇ ಹಣಕಾಸಿನ ವ್ಯವಹಾರವೂ ಇಲ್ಲವೆಂದಿರುವ ಅವರು ರಾಜಕೀಯವಾಗಿ ಕುಮಾರಸ್ವಾಮಿ ಟಿಕೆಟ್ ನೀಡದೆ ನನಗೆ ಮೋಸ ಮೋಸ ಮಾಡಿದ್ದಾರೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ವಿರುದ್ಧ ಹರಿಹಾಯ್ದರು.

ಗೆದ್ದರೆ ಸಿಎಂ ಸ್ಥಾನಕ್ಕೆ ರಾಜಿನಾಮೆ ಕೊಡುತ್ತೀರಾ?

ನೀಡುತ್ತೀರಾ? ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಸವಾಲು ಹಾಕಿದ್ದಾರೆ. ಶಿಗ್ಗಾಂವಿ ಸವಣೂರು ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಪರವಾಗಿ ಭಾನುವಾರ ಹುಲಗೂರು, ತಡಸ್ ಗ್ರಾಮಗಳಲ್ಲಿ ರೋಡ್ ಶೋ ನಡೆಸಿ ಚುನಾವಣಾ ಪ್ರಚಾರ ಮಾಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಶಿಗ್ಗಾಂವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ ಬೊಮ್ಮಾಯಿ 50,000 ಮತಗಳ ಅಂತರದಿಂದ ಗೆಲ್ಲುವುದನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಸೂರ್ಯ ಚಂದ್ರ ಇರುವುದು ಎಷ್ಟು ಸತ್ಯವವೋ ಭರತ್ ಬೊಮ್ಮಾಯಿ ಗೆಲುವು ಅಷ್ಟೇ ಸತ್ಯ ಎಂದು ಹೇಳಿದರು. ಈ ಉಪ ಚುನಾವಣೆಯಲ್ಲಿ ಬಿಜೆಪಿ ಮೂರು ಕ್ಷೇತ್ರದಲ್ಲಿ ಗೆಲ್ಲಲಿದೆ. ಮೂರು ಕ್ಷೇತ್ರ ಗೆದ್ದರೆ ಸಿದ್ದರಾಮಯ್ಯ ಸಿಎಂ ಸ್ಥಾನಕ್ಕೆ ರಾಜಿನಾಮೆ ಕೊಡ್ತಿರಾ ಎಂದು ಸವಾಲು ಹಾಕಿದರು. ಮೂರು ಕ್ಷೇತ್ರದಲ್ಲಿ ಬಿಜೆಪಿ ಗಾಳಿ ಬೀಸುತ್ತಿದೆ. ಎಲ್ಲ ಕಡೆ ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ಗಾಳಿ ಬೀಸುತ್ತಿದೆ ಎಂದು ಹೇಳಿದರು.

ನಾನು ಮುಖ್ಯಮಂತ್ರಿಯಾಗಿದ್ದಾಗ ರೈತರಿಗೆ ಕೇಂದ್ರದ ಕಿಸಾನ್ ಸಮ್ಮಾನ ಯೋಜನೆ ಜೊತೆಯಲ್ಲಿ ನಾನು 4000 ರೂ. ಕೊಡುತ್ತಿದ್ದೆ. ಅದನ್ನು ಯಾಕೆ ನಿಲ್ಲಿಸಿದ್ದೀರಿ ಹೇಳಿ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಒಂದೂವರೆ ವರ್ಷವಾಯಿತು. ಇದುವರೆಗೂ ಒಂದು ಕಿಲೋ ಮೀಟರ್ ರಸ್ತೆ ಮಾಡಿದ್ದೀರಾ, ಒಂದೇ ಒಂದು ಗುಂಡಿ ಮುಚ್ಚಿಲ್ಲ. ನಿಮ್ಮ ರಾಜಕೀಯ ದೊಂಬರಾಟ ಉಪ ಚುನಾವಣೆ ಮುಗಿದ ಮೇಲೆ ಕೊನೆಯಾಗಲಿದೆ ಎಂದು ಹೇಳಿದರು.

ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ

ಮಾರ್ಗಸೂಚಿ ಅನುಸರಿಸುವಂತೆ ರಾಜ್ಯ ಪೊಲೀಸ್ ಐಜಿಪಿ ಕಲಾ ಕೃಷ್ಣಸ್ವಾಮಿ ಆದೇಶಿಸಿದ್ದಾರೆ.

ಮಾರ್ಗಸೂಚಿಯಲ್ಲಿರುವ ಅಂಶಗಳೇನು?: ನಗರ ಕಮಿಷನರೇಟ್ ಹಾಗೂ ಜಿಲ್ಲಾ ಘಟಕಗಳಲ್ಲಿ ಸರ್ಕಾರಿ ಅಭಿಯೋಜಕರು ಒಳಗೊಂಡ ಖುಲಾಸೆಯಾದ ಅಪರಾಧ ಪ್ರಕರಣಗಳ ಪರಾಮರ್ಶೆ ಸಮಿತಿ ರಚಿಸಲಾಗಿದೆ. ತನಿಖಾ ಪ್ರಕ್ರಿಯೆಯಲ್ಲಿ ಲೋಪ, ಅಭಿಯೋಜನೆಗೆ ಪೂರಕ ಸಾಕ್ಷ್ಯ ನುಡಿಯದಿರುವುದು, ಸಾಕ್ಷಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸದಿರುವುದು ಪ್ರಕರಣಗಳ ವಜಾಕ್ಕೆ ಕಾರಣವಾಗುತ್ತಿದೆ. ಇದರಿಂದ ಆರೋಪಿಗಳು ಲಾಭ ಪಡೆಯುತ್ತಿದ್ದಾರೆ. ಹೀಗಾಗಿ ಪ್ರಕರಣಗಳಲ್ಲಿ ತನಿಖೆ ಕೈಗೊಂಡ ತನಿಖಾಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ಸೂಚಿಸಲಾಗಿದೆ.

ತನಿಖಾಧಿಕಾರಿಗಳಿಂದ ಸಮಜಾಯಿಷಿ ವಿವರ ಪಡೆದು ಪರಿಶೀಲಿಸಿ ತನಿಖೆಯಲ್ಲಿ ಕರ್ತವ್ಯ ಲೋಪವೆಸಗಿರುವುದು ದೃಢಪಟ್ಟಲ್ಲಿ ಇಲಾಖಾ ತನಿಖೆ ವಿಚಾರಣೆಗಾಗಿ ಶಿಫಾರಸು ಮಾಡಬೇಕೆಂದು ಆಯಾ ವಲಯದ ಜಿಲ್ಲಾ ಪೊಲೀಸ್ ಅಧೀಕ್ಷಕರು ಹಾಗೂ ಆಯುಕ್ತರಿಗೆ ನಿರ್ದೇಶಿಸಿಲಾಗಿದೆ. ಡಿವೈಎಸ್‌ಪಿ ಹಾಗೂ ಇನ್ಸ್‌ಪೆಕ್ಟರ್ ವಿರುದ್ಧ ಶಿಸ್ತುಕ್ರಮ ಜರುಗಿಸುವ ಪ್ರಕರಣ ಕಂಡು ಬಂದರೆ ಪೂರ್ಣ ಪ್ರಮಾಣದ ದಾಖಲಾತಿ ಪ್ರಧಾನ ಕಚೇರಿಗೆ ಬಗ್ಗೆ ಕಳುಹಿಸುವಂತೆ ಸೂಚಿಸಲಾಗಿದೆ. ಸಮಿತಿಯ ಶಿಫಾರಸ್ಸಿನಂತೆ ಪೊಲೀಸ್ ಇನ್ಸ್‌ಪೆಕ್ಟರ್‌ಗಿಂತ ಕೆಳಹಂತದ ಹುದ್ದೆಗಳ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮಕ್ಕಾಗಿ ಇಲಾಖಾ ವಿಚಾರಣೆಗಳಲ್ಲಿ ನಿವೃತ್ತ ನ್ಯಾಯಾಧೀಶರನ್ನು ವಿಚಾರಣಾಧಿಕಾರಿಗಳನ್ನಾಗಿ ನೇಮಿಸುವಂತೆ ಹೇಳಲಾಗಿದೆ.

ತಹಸೀಲ್ದಾರ್ ಮುದ್ರಾಂಕ ಶುಲ್ಕ ಪಾವತಿ

ಸಾಕ್ಷಿ ಬೇಕೇ ಎಂದು ಪ್ರಶ್ನಿಸಿದ್ದಾರೆ. **ಸಿಎಂ ಸ್ಪಷ್ಟನೆ:** ನನ್ನ ಪತ್ನಿ ಪಾರ್ವತಿ ನಿವೇಶನ ಕ್ರಯ ಪತ್ರ ನೋಂದಣಿ ಮಾಡಿಸಿಕೊಳ್ಳಲು ವಿಶೇಷ ತಹಶೀಲ್ದಾರ್ ಚೆಕ್ ಮೂಲಕ ಹಣ ಪಾವತಿ ಮಾಡಿಲ್ಲವಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರಶ್ನಿಸಿದ್ದಾರೆ. ತಮ್ಮ ಮೇಲಿನ ಆರೋಪಕ್ಕೆ ಹುಬ್ಬಳ್ಳಿಯಲ್ಲಿ ಪ್ರತಿಕ್ರಿಯೆ ನೀಡಿದ ಸಿದ್ದರಾಮಯ್ಯ, ನನ್ನ ಮೇಲೆ ಸುಳ್ಳು ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ನನ್ನ ಬಾವಮೈದ ದಾನವಾಗಿ ಭೂಮಿ ನೀಡಿದ್ದ. ಆ ಭೂಮಿಯ ನಿವೇಶನಗಳ ಕ್ರಯ ಪತ್ರದ ನೋಂದಣಿ ನನ್ನ ಪತ್ನಿ ಪಾರ್ವತಿ ಹೆಸರಿಗೆ ಆಗಿದೆ ಎಂದರು. ವಿಶೇಷ ತಹಶೀಲ್ದಾರ್ ಚೆಕ್ ಮೂಲಕ ಹಣ ಪಾವತಿ ಮಾಡಿಲ್ಲವಲ್ಲ ಎಂದು ಸ್ಪಷ್ಟನೆ ನೀಡಿದ ಸಿದ್ದರಾಮಯ್ಯ, ಸಬ್ ರಿಜಿಸ್ಟ್ರಾರ್, ತಹಶೀಲ್ದಾರ್, ಅಸಿಸ್ಟೆಂಟ್ ಕಮಿಷನರ್ ನೋಂದಣಿ ಶುಲ್ಕ ಪಾವತಿಸಲು ಸಾಧ್ಯವೇ? ಎಂದು ಪ್ರಶ್ನಿಸಿದ್ದಾರೆ.

ಡಿಸೆಂಬರ್‌ವರೆಗೆ ಮಾತ್ರ ಸಿಎಂ ಆಗಿರ್ತಾರೆ

ಜಾರ್ಜ್ ಹಾಗೂ ಬೈರತಿ ಸುರೇಶ್‌ರನ್ನು ಕೇಳಿ. ನೀವು ಸಾವಿರಾರು ಕೋಟಿ ಹಗರಣ ಎಂದು ಹೇಳಿದ್ದೀರಿ. ಈಗ 14 ಕೋಟಿ ಅಂತಿದ್ದೀರಾ. ನಿಮ್ಮ 14 ಸೈಟ್ ಬಗ್ಗೆ ನೋಡಿ. ಈ ಬಗ್ಗೆ ನಿರ್ಣಯ ಕೈಗೊಳ್ಳುವಷ್ಟರಲ್ಲಿ ನಿಮ್ಮ ಸಚಿವ ಸಂಪುಟವೇ ಇರುವುದಿಲ್ಲ. ಸಿದ್ದರಾಮಯ್ಯ ತಮ್ಮ ತಪ್ಪು ಮುಚ್ಚಿಕೊಳ್ಳಲು ಈ ರೀತಿ ಮಾಡುತ್ತಿದ್ದಾರೆ ಎಂದು ಹರಿಹಾಯ್ದರು. ಚನ್ನಪಟ್ಟಣ ಚುನಾವಣೆ ವಿಚಾರವಾಗಿ ಮಾತನಾಡಿ, ಚನ್ನಪಟ್ಟಣ ಜನ ಕೃತಜ್ಞತೆಗೆ ಮತ್ತೊಂದು ಹೆಸರು. ಭಗೀರಥ ಯಾರು ಅದು ಇದು ಅಂತಾ ನಾನು ಹೇಳಲ್ಲ. ಜನ ದೇವೇಗೌಡರನ್ನು ನೆನಪು ಮಾಡಿಕೊಳ್ಳುತ್ತಾರೆ. ದೇವೇಗೌಡರ ದೂರದೃಷ್ಟಿ ಕಾರಣದಿಂದ ಹದಿನಾಲ್ಕು ಕ್ಷೇತ್ರಗಳನ್ನು ಗೆದ್ದಿದ್ದೇವೆ. ಇನ್ನೆರಡು ದಿನಗಳಲ್ಲಿ ಇಲ್ಲಿ ಚಿತ್ರಣ ಬದಲಾಗಲಿದೆ. ಜೆಡಿಎಸ್ ಭದ್ರಕೋಟೆ ಚನ್ನಪಟ್ಟಣ. ಜನರನ್ನು ಪದೇ ಪದೇ ಯೋಗೇಶ್ವರ್ ಯಾಮಾರಿಸಲು ಆಗಲ್ಲ. ನಾಲ್ಕು ವರ್ಷ ಸುಮ್ಮನೆ ಕೂರುವಂತೆ ಮಾಡುತ್ತಾರೆ. ನಿಖಿಲ್ ಕುಮಾರಸ್ವಾಮಿ ಹೆಚ್ಚು ಮತಗಳಿಂದ ಗೆಲ್ಲುತ್ತಾರೆ. ಈ ಸರ್ಕಾರಕ್ಕೆ ಎಚ್ಚರಿಕೆ ಗಂಟೆ ಕೊಡಬೇಕು ಎಂದು ಜನ ಅರಿತಿದ್ದಾರೆ. ಆ ಕೆಲಸವನ್ನು ಚನ್ನಪಟ್ಟಣದ ಜನ ಮಾಡುತ್ತಾರೆ ಎಂದು ವಾಗ್ದಾಳಿ ನಡೆಸಿದರು.

ಮೂರು ಪ್ರಯಾಣಿಕರ ತಂಗುದಾಣ

ಎಂದು ಊಯಿಸಬಹುದಿತ್ತು. ಆದರೆ ಮೈಸೂರಿನ ಬಹಳಷ್ಟು ಬಡಾವಣೆಗಳಲ್ಲಿ ಒಂದೇ ಸ್ಥಳದಲ್ಲಿ ಒಂದರಿಂದ ಮೂರು ಪ್ರಯಾಣಿಕರ ತಂಗುದಾಣ ನಿರ್ಮಿಸಿ ಪ್ರಮಾದ ಎಸಗಲಾಗಿದೆ. ಪ್ರಯಾಣಿಕರ ತಂಗುದಾಣದಲ್ಲಿ ಜಾಹಿರಾತು ಪ್ರದರ್ಶಿಸಲು ನಗರ ಪಾಲಿಕೆ ಗುತ್ತಿಗೆ ನೀಡಿದೆ. ಗುತ್ತಿಗೆ ಪಡೆದ ಸಂಸ್ಥೆ ತಂಗುದಾಣದ ನಿರ್ವಹಣೆ ಮಾಡಬೇಕೆಂಬ ನಿಯಮವಿದೆ. ಆದರೆ ಪ್ರಯಾಣಿಕರ ತಂಗುದಾಣದಲ್ಲಿ ಯಾವ ಸಂಸ್ಥೆಯೂ ನಿರ್ವಹಣೆ ಮಾಡದೆ ಅಲ್ಲಿ ಅಶುಚಿತ್ವದ ವಾತಾವರಣವಿದೆ. ಮೈಸೂರಿನ ಪ್ರಯಾಣಿಕರ ತಂಗುದಾಣದಲ್ಲಿ ಜಾಹಿರಾತು ಫಲಕ ಅಳವಡಿಸಿರುವ ಗುತ್ತಿಗೆ ಪಡೆದ ಸಂಸ್ಥೆಗಳು ನಿರ್ವಹಣೆ ಮಾಡುತ್ತಿಲ್ಲ. ಜಾಹಿರಾತಿನಿಂದ ಲಾಭ ಮಾತ್ರ ಮಾಡುತ್ತಿದ್ದಾರೆ. ಈ ವಿಚಾರ ನಗರ ಪಾಲಿಕೆಯಲ್ಲಿ ಅಧಿಕಾರ ನಡೆಸಿರುವ ಯಾವ ಅಧಿಕಾರಿಯ ಕಣ್ಣಿಗೂ ಕಾಣಿಸದಿರುವುದು ದುರಂತದ ಸಂಗತಿ. ಇನ್ನು ಎಲ್ಲಾ ಪ್ರಯಾಣಿಕರ ತಂಗುದಾಣಗಳಲ್ಲಿಯೂ ಸ್ಥಳೀಯ ಶಾಸಕರ ಭಾವಚಿತ್ರಗಳನ್ನು ಕೂಡ ಪ್ರದರ್ಶಿಸಲಾಗಿದೆ. ಶಾಸಕರು ಕೂಡ ಇತ್ತ ಗಮನ ಹರಿಸದಿರುವುದು ಬೇಸರದ ಸಂಗತಿಯಾಗಿದೆ. ಈಗಲಾದರೂ ಅಗತ್ಯ ಇರುವ ಕಡೆ ಒಂದು ಪ್ರಯಾಣಿಕರ ಬಸ್ ತಂಗುದಾಣ ನಿರ್ಮಾಣ ಮಾಡಬೇಕು. ಇದು ಬಿಟ್ಟು, ಒಂದೇ ಸ್ಥಳದಲ್ಲಿ ಮೂರು ಬಸ್ ತಂಗುದಾಣ ನಿರ್ಮಿಸಿ ಜನರ ತೆರಿಗೆ ಹಣವನ್ನು ವ್ಯರ್ಥ ಮಾಡುವುದನ್ನು ನಿಲ್ಲಿಸಬೇಕು.

ದೇಶದ 51ನೇ ಸಿಜೆಐ ಆಗಿ ನ್ಯಾಯಮೂರ್ತಿ ಸಂಜೀವ್ ಖನ್ನಾ ಇಂದು ಪ್ರಮಾಣ ವಚನ

ನವದೆಹಲಿ, ನ. 10– ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಸೋಮವಾರ ಭಾರತದ ಮುಂದಿನ ಮುಖ್ಯ ನ್ಯಾಯ ಮೂರ್ತಿಯಾಗಿ (ಸಿಜೆಐ) ಪ್ರಮಾಣ ವಚನ ಸ್ವೀಕರಿಸಲಿದ್ದಾರೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಖನ್ನಾ ಅವರಿಗೆ ಪ್ರಮಾಣ ವಚನ ಬೋಧಿಸಲಿದ್ದಾರೆ.

ನ್ಯಾಯಮೂರ್ತಿ ಖನ್ನಾ ಅವರು 51ನೇ ಸಿಜೆಐ ಆಗಿದ್ದು, ಸುಮಾರು 6 ತಿಂಗಳ ಅಧಿಕಾರಾವಧಿಯನ್ನು ಹೊಂದಿರುತ್ತಾರೆ.

ನವೆಂಬರ್ 11 ರಿಂದ ಜಾರಿಗೆ ಬರುವಂತೆ ಸುಪ್ರೀಂಕೋರ್ಟ್‌ನ ಮುಖ್ಯ ನ್ಯಾಯ ಮೂರ್ತಿಯಾಗಿ ಸಂಜೀವ್ ಖನ್ನಾ ಅವರನ್ನು ನೇಮಿಸಲು ರಾಷ್ಟ್ರಪತಿಗಳು ಸಂತೋಷಪಟ್ಟಿದ್ದಾರೆ ಎಂದು ಕೇಂದ್ರ



ಕಾನೂನು ಮತ್ತು ನ್ಯಾಯ ಸಚಿವಾಲಯ ಹೊರಡಿಸಿದ ಅಧಿಸೂಚನೆಯಲ್ಲಿ ತಿಳಿಸಲಾಗಿದೆ.

ನ್ಯಾಯಮೂರ್ತಿ ಸಂಜೀವ್ ಖನ್ನಾ ಅವರು ಸುಪ್ರೀಂ ಕೋರ್ಟ್ ಕಾನೂನು ಸೇವಾ ಸಮಿತಿಯ ಅಧ್ಯಕ್ಷ ಹುದ್ದೆ ಹೊಂದಿದ್ದು, ಪ್ರಸ್ತುತ ರಾಷ್ಟ್ರೀಯ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯ ನಿರ್ವಾಹಕ ಅಧ್ಯಕ್ಷರಾಗಿದ್ದಾರೆ ಮತ್ತು ಭೋಪಾಲ್‌ನ ರಾಷ್ಟ್ರೀಯ ನ್ಯಾಯಾಂಗ ಅಕಾಡೆಮಿಯ ಆಡಳಿತ ಸಲಹೆಗಾರರ ಸದಸ್ಯರಾಗಿದ್ದಾರೆ. ಈ ಹಿಂದೆ ಜನವರಿ 2019 ರವರೆಗೆ ದೆಹಲಿ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿ ಹೈಕೋರ್ಟ್ ನ್ಯಾಯಾಧೀಶರಾಗಿ ದೆಹಲಿ ಜುಡಿಶಿಯಲ್ ಅಕಾಡೆಮಿ, ಜಿಲ್ಲಾ ನ್ಯಾಯಾಲಯದ ಮಧ್ಯಸ್ಥಿಕೆ ಕೇಂದ್ರಗಳ ಅಧ್ಯಕ್ಷ, ನ್ಯಾಯಾಧೀಶ ಹುದ್ದೆಯನ್ನು ಹೊಂದಿದ್ದರು.

ಶ್ರೀರಂಗಪಟ್ಟಣದಲ್ಲಿ ಟಿಪ್ಪು ಜಯಂತಿ ಆಚರಣೆ

ದಿನವಿಡೀ ಜಾರಿಯಲ್ಲಿದ್ದ ನಿಷೇಧಾಜ್ಞೆ, ಪ್ರಾರ್ಥನೆಗಷ್ಟೇ ಸೀಮಿತವಾದ ಜಯಂತಿ

●ಟಿಪ್ಪು ಸಮಾಧಿಗೆ ಶಾಸಕ ತನ್ವೀರ್ ಸೇಠ್ ಭೇಟಿ, ಪ್ರಾರ್ಥನೆ ಸಲ್ಲಿಕೆ



ಟಿಪ್ಪು ಸುಲ್ತಾನ್ ಜಯಂತಿ ಅಂಗವಾಗಿ ಭಾನುವಾರ ಮಾಜಿ ಸಚಿವರು ಹಾಗೂ ಟಿಪ್ಪು ವಕ್ಫ್ ಎಸ್ಟೇಟ್ ಅಧ್ಯಕ್ಷ ತನ್ವೀರ್ ಸೇಠ್ ಟಿಪ್ಪು ಸಮಾಧಿಗೆ ಭೇಟಿ ನೀಡಿ, ಪ್ರಾರ್ಥನೆ ಸಲ್ಲಿಸಿದರು.

ಶ್ರೀರಂಗಪಟ್ಟಣ/ಮಂಡ್ಯ,ನ.10– ಟಿಪ್ಪು ಸುಲ್ತಾನ್ ಜಯಂತಿಯು ಶ್ರೀರಂಗಪಟ್ಟಣದಲ್ಲಿ ಭಾನುವಾರ ಕೇವಲ ಪ್ರಾರ್ಥನೆಗಷ್ಟೇ ಸೀಮಿತವಾಯಿತು. ಇಡೀ ದಿನ ಪಟ್ಟಣದಾದ್ಯಂತ ನಿಷೇಧಾಜ್ಞೆ ಜಾರಿಯಲ್ಲಿದ್ದುದರಿಂದ ಯಾವುದೇ ರೀತಿಯ ಮೆರವಣಿಗೆ, ಘೋಷಣೆಗಳಿರಲಿಲ್ಲ.

ಕಳೆದ ಅವಧಿಯಲ್ಲಿ ಸಿದ್ದರಾಮಯ್ಯ ಮುಖ್ಯಮಂತ್ರಿಯಾಗಿದ್ದ ವೇಳೆ ರಾಜ್ಯದಲ್ಲಿ ಆಚರಣೆಗೆ ತಂದಿದ್ದ ಟಿಪ್ಪು ಜಯಂತಿ ಕಾರ್ಯಕ್ರಮದಲ್ಲಿ ರಾಜ್ಯದ ಹಲವೆಡೆ ಘರ್ಷಣೆ ಸಂಭವಿಸಿತ್ತು. ಜೊತೆಗೆ ಮಡಿಕೇರಿಯಲ್ಲಿ ಸಂಘರ್ಷದಿಂದ ವ್ಯಕ್ತಿಯೊಬ್ಬ ಮೃತಪಟ್ಟಿದ್ದ. ಇದರಿಂದ ಎಚ್ಚೆತ್ತ ಸರ್ಕಾರ ಇತ್ತೀಚಿನ ವರ್ಷಗಳಲ್ಲಿ ಸರ್ಕಾರದ ವತಿಯಿಂದ ಟಿಪ್ಪು ಜಯಂತಿ ಆಚರಣೆ ನಡೆಸುವುದನ್ನು ನಿರ್ಬಂಧಿಸಿತ್ತು.

ಎಲ್ಲಕ್ಕಿಂತ ಹೆಚ್ಚಾಗಿ ಟಿಪ್ಪು ಆಳ್ವಿಕೆ ನಡೆಸಿದ ಶ್ರೀರಂಗಪಟ್ಟಣದಲ್ಲಿ ಆತನ ಸಮಾಧಿ ಇರುವುದರಿಂದ ಮಂಡ್ಯ, ಮೈಸೂರು ಸೇರಿದಂತೆ ನಾನಾ ಭಾಗಗಳಿಂದ ಟಿಪ್ಪು ಜಯಂತಿಯಂದು ಸಾವಿರಾರು ಮಂದಿ ಭಾಗವಹಿಸುವುದು, ಮೆರವಣಿಗೆ ನಡೆಸುವುದು, ಘೋಷಣೆ ಕೂಗುವುದು, ಬಾವುಟಗಳ ಮೆರವಣಿಗೆ ನಡೆಸುವುದು ಮಾಡುತ್ತಿದ್ದರಿಂದ ಕೋಮು ಸೌಹಾರ್ದತೆ ಕಾಪಾಡುವ ದೃಷ್ಟಿಯಿಂದ ತಹಸೀಲ್ದಾರ್ ಪರಶುರಾಮ ಸತ್ತಿಗೇರಿ, ಬೆಳಿಗ್ಗೆ ಆರರಿಂದ ರಾತ್ರಿ 9ಗಂಟೆಯವರೆಗೆ ಶ್ರೀರಂಗಪಟ್ಟಣದಲ್ಲಿ 144ರನ್ವಯ ಸೆಕ್ಷನ್ ಜಾರಿಗೊಳಿಸಿ, ಆದೇಶ ಹೊರಡಿಸಿದ್ದರು.

ನಿಷೇಧಾಜ್ಞೆ ನಡುವೆಯೂ ವಿವಿಧ ಸಂಘಟನೆಗಳಿಂದ ಟಿಪ್ಪು ಜಯಂತಿ ನಡೆಸಲು ಮೈಸೂರು ಸೇರಿದಂತೆ ಹಲವೆಡೆಯಿಂದ ಜನ ಸೇರುವ ಸಾಧ್ಯತೆ ಇತ್ತು. ಈ ಹಿನ್ನೆಲೆಯಲ್ಲಿ ಮೈಸೂರು–ಶ್ರೀರಂಗಪಟ್ಟಣದ ಗಡಿ ಭಾಗವಾದ ನಗುವನಹಳ್ಳಿ ಬಳಿ ಬೆಂಗಳೂರು–ಮೈಸೂರು ರಸ್ತೆಗೆ ಬ್ಯಾರಿಕೇಡ್ ಅಳವಡಿಸಿ, ಬಿಗಿ ಪೊಲೀಸ್ ಬಂದೋ ಬಸ್ತ್ ಮಾಡಲಾಗಿತ್ತು.

ಸೂಕ್ಷ್ಮ ಪ್ರದೇಶವಾಗಿರುವ ಶ್ರೀರಂಗಪಟ್ಟಣದಲ್ಲಿ ಕಾರ್ಯಕ್ರಮಕ್ಕೆ ನಿರ್ಬಂಧ ಇದ್ದುದರಿಂದ ಜಾಮಿಯಾ ಮಸೀದಿ, ಟಿಪ್ಪು ಮಡಿದ ಸ್ಥಳ, ಟಿಪ್ಪು ಸಮಾಧಿ ಸ್ಥಳ ಸೇರಿ ಪಟ್ಟಣದಾದ್ಯಂತ ಪೊಲೀಸ್ ಸರ್ಪಗಾವಲು ಹಾಕಲಾಗಿತ್ತು ಮೆರವಣಿಗೆ, ಪ್ರತಿಭಟನೆ, ರ್ಯಾಲಿಗಳಿಗೆ ನಿರ್ಬಂಧವಿತ್ತು ಬ್ಯಾನರ್, ಬಂಟಿಂಗ್ಸ್, ಧ್ವನಿವರ್ಧಕ, ಪಟಾಕಿ, ಡಿಜೆ ಬಳಕೆಗೂ ನಿಷೇಧ ಹಾಕಲಾಗಿತ್ತು. ಘೋಷಣೆ ಕೂಗದಂತೆ, ಪ್ರಚೋದನಕಾರಿ ಚಿತ್ರವಿರುವ ಟೀ ಶರ್ಟ್ ಧರಿಸದಂತೆಯೂ ಆದೇಶ ಮಾಡಲಾಗಿತ್ತು.

ತನ್ವೀರ್ ಸೇಠ್ ಭೇಟಿ: ಟಿಪ್ಪು ಜಯಂತಿ ಸಂದರ್ಭದಲ್ಲಿ ಪ್ರತಿ ವರ್ಷ ಸಮಾಧಿ ಸ್ಥಳಕ್ಕೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸುವ ಶಾಸಕ ಹಾಗೂ ಟಿಪ್ಪು ವಕ್ಫ್ ಎಸ್ಟೇಟ್ ಅಧ್ಯಕ್ಷ ತನ್ವೀರ್ ಸೇಠ್ ಈ ವರ್ಷವೂ ಸಹ ಟಿಪ್ಪು ಸಮಾಧಿಗೆ ಭೇಟಿ ನೀಡಿ ವಿಶೇಷ ಪ್ರಾರ್ಥನೆ ಸಲ್ಲಿಸಿದರು.

ಶಾಸಕ ತನ್ವೀರ್ ಸೇಠ್ ಸಮಾಧಿ ಮುಂಭಾಗ ಧ್ವಜಾರೋಹಣ ಮಾಡಿ, ಟಿಪ್ಪು, ಹೈದರ್ ಆಲಿ ಸಮಾಧಿಗೆ ಚಾದರ ಹೊದಿಸಿ, ಸುಗಂಧ ದ್ರವ್ಯ ಹಾಕಿ, ಕೆಲ ನಿಮಿಷಗಳ ಕಾಲ ಸ್ಥಳದಲ್ಲೇ ನಿಂತು ಪ್ರಾರ್ಥನೆ ಸಲ್ಲಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಟಿಪ್ಪು ಸುಲ್ತಾನ್ ಜನ್ಮದಿನದ ಅಂಗವಾಗಿ ನಮ್ಮ ಸಂಸ್ಥೆಯಿಂದ ಹಲವು ವರ್ಷಗಳಿಂದ ಪ್ರಾರ್ಥನೆ ಸಲ್ಲಿಸಿಕೊಂಡು ಬರುತ್ತಿದ್ದೇವೆ ಪ್ರವಾದಿ ಮಹಮ್ಮದ್‌ರನ್ನು ಪೂಜಿಸುವ ನಾವುಗಳು ಟಿಪ್ಪು ಸುಲ್ತಾನ್ ಅವರ ಸಿದ್ಧಾಂತಗಳನ್ನು ಮುಂದಿಟ್ಟುಕೊಂಡು ಅವರನ್ನು ಗೌರವಿಸುತ್ತೇವೆ. ಈ ಹಿಂದಿನಿಂದಲೂ ಟಿಪ್ಪು ಸಮಾಧಿಗೆ ಗೌರವ ಸಲ್ಲಿಸುತ್ತಾ ಬಂದಿದ್ದು, ಸರ್ಕಾರ ಟಿಪ್ಪು ಜಯಂತಿ ಆಚರಿಸಿ ಬಳಿಕ ನಿಲ್ಲಿಸಿದೆ. ಆದರೆ ನಮ್ಮ ಆಚರಣೆ ಮುಂದುವರೆಯಲಿದೆ ಎಂದು ಸ್ಪಷ್ಟಪಡಿಸಿದರು.

ಸರ್ಕಾರ ಜಯಂತಿ ನಿಲ್ಲಿಸಿದ್ದರಿಂದ ನಮಗೆ ಯಾವ ಸಮಸ್ಯೆ ಇಲ್ಲ. ಟಿಪ್ಪುಗೆ ನಾವು ಕೊಡುವ ಗೌರವ ಕೊಡುತ್ತಾ ಬಂದಿದ್ದೇವೆ. ಟಿಪ್ಪು ಎಂದ ಕ್ಷಣ ಭಯದ ವಾತಾವರಣ ಸೃಷ್ಟಿಸುವ ಕೆಲಸ ಆಗುತ್ತಿದೆ. ವ್ಯವಸ್ಥೆ, ರಾಜಕಾರಣ ಈ ಭಯ ಸೃಷ್ಟಿ ಮಾಡಿದೆ. ಟಿಪ್ಪು ಮಾಡಿದ ಅನೇಕ ಆಧುನಿಕ ಸುಧಾರಣೆಗಳಿಗೆ ನಮ್ಮಲ್ಲಿ ದಾಖಲೆಗಳಿವೆ. ಅವುಗಳನ್ನು ಹೊಸ ಪೀಳಿಗೆಗೆ ತಿಳಿಸುವ ಕಾರ್ಯವಾಗಬೇಕು. ಉಳುವವನೇ ಭೂಮಿಯ ಒಡೆಯ, ಪಹಣಿ ಇವೆಲ್ಲವೂ ಟಿಪ್ಪು ಆಳ್ವಿಕೆಯಲ್ಲಿ ಬಂದಿದೆ ಎಂದು ಹೇಳಿದರು.

ವಕ್ಫ್ ವಿಚಾರ: ಜಮೀರ್ ವಿರುದ್ಧ ಪರೋಕ್ಷ ಕಿಡಿ

ವಕ್ಫ್ ಕಾಯ್ದೆ ರಾಜ್ಯ ಸರ್ಕಾರದ್ದಲ್ಲ. ಕೇಂದ್ರ ಸರ್ಕಾರದ ಕಾಯ್ದೆಯಾಗಿದೆ. ವಕ್ಫ್ ಎಂಬುದು ಪ್ರವಾದಿ ಮಹಮ್ಮದ್ ಅವರ ಕಾಲದಿಂದಲೂ ನಡೆದುಕೊಂಡು ಬಂದಿದೆ. ದೇವರ ಹೆಸರಲ್ಲಿ ಓರ್ವ ವ್ಯಕ್ತಿ ಜಾಗ ಕೊಟ್ಟಾಗ ಅದನ್ನು ಸಂರಕ್ಷಿಸಬೇಕಾಗಿರುವುದೇ ವಕ್ಫ್ ಎಂದು ಮಾಜಿ ಸಚಿವ ತನ್ವೀರ್ ಸೇಠ್ ತಿಳಿಸಿದರು. ವಕ್ಫ್ ಹೆಸರಲ್ಲಿ ಜನರಿಗೆ ಸಮಸ್ಯೆ ನೀಡುವುದು ತಪ್ಪು. ವಕ್ಫ್ ಮಂತ್ರಿಯಾಗಿ ನಾನು, ನಮ್ಮ ತಂದೆ ಅಜೀಜ್ ಸೇಠ್, ಖಮರುಲ್ಲಾ ಇಸ್ಲಾಂ ಸೇರಿದಂತೆ ಹಲವು ರಾಜಕೀಯ ನಾಯಕರು ಕೆಲಸ ಮಾಡಿದ್ದಾರೆ. ಯಾವ ಸಂದರ್ಭದಲ್ಲೂ ಸೃಷ್ಟಿಯಾಗದ ವಿವಾದ ಏಕೆ ಇದೀಗ ಶುರುವಾಗಿದೆ ಎಂದು ಪ್ರಶ್ನಿಸುವ ಮೂಲಕ ವಕ್ಫ್ ಸಚಿವ ಜಮೀರ್ ಅಹ್ಮದ್ ವಿರುದ್ಧ ಪರೋಕ್ಷವಾಗಿ ಕಿಡಿಕಾರಿದರು.

ಕಂಡಿದ್ದೆಲ್ಲ ನಮ್ಮ ವಕ್ಫ್ ಎಂದು ಹೇಳಲು ನಾವು ತಯಾರಿಲ್ಲ. ಕಂದಾಯ ಇಲಾಖೆಯಲ್ಲಿ ಸೂಕ್ತವಾಗಿ ವಕ್ಫ್ ಜಾಗವನ್ನು ಗುರುತಿಸಲಾಗಿದೆ. ಅವುಗಳು ಮಾತ್ರ ನಮ್ಮ ಜಾಗಗಳು. ಕಂಡಿದ್ದೆಲ್ಲ ನಮ್ಮದಲ್ಲ. ಇದಕ್ಕೆ ಉಪಚುನಾವಣೆ ಸಂದರ್ಭದಲ್ಲಿ ವಕ್ಫ್ ವಿವಾದಕ್ಕೆ ಮನ್ನಣೆ ಕೊಡಲಾಗಿದೆ. ಪ್ರತಿ ಜಾಗಕ್ಕೂ ಓರ್ವ ಮಾಲೀಕನಿದ್ದು, ಸುಖಾಸುಮ್ಮನೆ ಜಾಗವೊಂದನ್ನು ಅಕ್ರಮವಾಗಿ ಪಡೆಯಲು ಸಾಧ್ಯವಿಲ್ಲ ಎಂದರು.

ಚನ್ನಪಟ್ಟಣ ಉಪಚುನಾವಣೆ

ಮದ್ದೂರು, ಮಳವಳ್ಳಿಯಲ್ಲಿ ಮದ್ಯ ಮಾರಾಟ ನಿಷೇಧ

ಮಂಡ್ಯ,ನ.10– ಪಕ್ಕದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ನವೆಂಬರ್ 13ರಂದು ಉಪಚುನಾವಣೆಯ ಮತದಾನ ನಡೆಯುವ ಹಿನ್ನೆಲೆಯಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಅಕ್ಕಪಕ್ಕದ ತಾಲೂಕುಗಳಾದ ಮಂಡ್ಯ ಜಿಲ್ಲೆಯ ಮದ್ದೂರು ಹಾಗೂ ಮಳವಳ್ಳಿ ತಾಲೂಕಿನ ಐದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ಹಾಗೂ ಸಾಗಾಣಿಕೆಯನ್ನು ನಿಷೇಧಗೊಳಿಸಲಾಗಿದೆ. ನವೆಂಬರ್ 11ರ ಸಂಜೆ 5ಗಂಟೆಯಿಂದ ಮತದಾನ ನಡೆಯುವ ನವೆಂಬರ್ 13ರ ಮಧ್ಯರಾತ್ರಿ 12 ಗಂಟೆಯವರೆಗೆ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತಿರುವ ಮದ್ದೂರು ಹಾಗೂ ಮಳವಳ್ಳಿ ತಾಲೂಕಿನ ಸುತ್ತಮುತ್ತಲ ಐದು ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಮದ್ಯ ಮಾರಾಟ ಹಾಗೂ ಸಾಗಾಣಿಕೆಯನ್ನು ನಿರ್ಬಂಧಗೊಳಿಸಿ ಜಿಲ್ಲಾಧಿಕಾರಿ ಡಾ.ಕುಮಾರ ಆದೇಶ ಹೊರಡಿಸಿದ್ದಾರೆ.

ಬೀರುವಳ್ಳಿ ಡೇರಿಗೆ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ



ಕೆ.ಆರ್.ಪೇಟೆ ತಾಲೂಕಿನ ಬೀರುವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ಬಿ.ಎನ್.ಧನುಂಜಯ್, ಉಪಾಧ್ಯಕ್ಷರಾಗಿ ವಸಂತಮ್ಮ ಆಯ್ಕೆಯಾಗಿದ್ದು, ಇವರನ್ನು ಸಂಘದ ನಿರ್ದೇಶಕರು ಹಾಗೂ ಮುಖಂಡರು ಅಭಿನಂದಿಸಿದರು. ಈ ಸಂದರ್ಭದಲ್ಲಿ ವಸಂತಮ್ಮ, ನಿರ್ದೇಶಕರುಗಳಾದ ಬಿ.ಎಸ್.ಶಿವರಾಮೇಗೌಡ, ಬಿ.ಜೆ.ಶಶಿಧರ್, ಹೇಮಾದೇವರಾಜು, ಎ.ಬಿ.ವಿರೂಪಾಕ್ಷಪ್ಪ, ಬಲ್ಲೇಶ್.ಬಿ.ಎಲ್, ರುಕ್ಮಿಣಮ್ಮ, ದ್ಯಾವನಾಯಕ, ಸಾವಿತ್ರಮ್ಮ, ಸಂಘದ ಕಾರ್ಯದರ್ಶಿ ಬಿ.ಆರ್.ಯೋಗೇಶ್ ಇದ್ದರು.

ಹೊಳೆ ಆಂಜನೇಯ ಸ್ವಾಮಿಗೆ ಯೋಗೇಶ್ವರ್ ಪತ್ನಿ ವಿಶೇಷ ಪೂಜೆ



ಹೊಳೆ ಆಂಜನೇಯಸ್ವಾಮಿಗೆ ಪೂಜೆ ಸಲ್ಲಿಸುತ್ತಿರುವ ಯೋಗೇಶ್ವರ್ ಪತ್ನಿ.

ಮದ್ದೂರು,ನ.10– ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಸಿ.ಪಿ.ಯೋಗೇಶ್ವರ್ ಅವರ ಪತ್ನಿ ಶೀಲಾ ಯೋಗೇಶ್ವರ್ ಪಟ್ಟಣದ ಇತಿಹಾಸ ಪ್ರಸಿದ್ಧ ಹೊಳೆ ಆಂಜನೇಯಸ್ವಾಮಿ ದೇವಾಲಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಪತಿಯ ಗೆಲುವಿಗೆ ದೇವರ ಮೊರೆ ಹೋದರು.

ಭಾನುವಾರ ಬೆಳಿಗ್ಗೆಯೇ ದೇವಾಲಯಕ್ಕೆ ಆಗಮಿಸಿದ ಶೀಲಾ ಯೋಗೇಶ್ವರ್ ವಾಯುಸ್ತುತಿ ಪುನರ್‌ಚರಣಹೋಮ ಹಾಗೂ ಮನ್ಯುಸ್ತುತಿ ಅಭಿಷೇಕ ಸೇರಿದಂತೆ ಹೋಮ, ಹವನ, ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ಹಾಗೂ ತೀರ್ಥ ಪ್ರಸಾದ ಇನ್ನಿತರ ಪೂಜಾ ವಿಧಿ ವಿಧಾನಗಳನ್ನು ನೆರವೇರಿಸಿದರು.

ಬೆಂಗಳೂರಿನಿಂದ ಆಗಮಿಸಿದ ಹಿರಿಯ ಅರ್ಚಕರಾದ ಹೇರಿ ನಾಗರಾಜುರವರ ನೇತೃತ್ವದಲ್ಲಿ ನಡೆದ ಹೋಮ ಹವನಗಳು ಸುಮಾರು 9 ಗಂಟೆಯಿಂದ ಆರಂಭಗೊಂಡು ಮಧ್ಯಾಹ್ನ 1.30 ರವರೆವಿಗೂ ಹಲವು ಬಗೆಯ ವಿವಿಧ ಪೂಜಾ ವಿಧಿ ವಿಧಾನಗಳು ಶಾಸ್ತ್ರೋಕ್ತವಾಗಿ ಶೀಲಾರವರ ಸಮ್ಮುಖದಲ್ಲಿ ಜರುಗಿತು.

ಬಳಿಕ ಹೊಳೆ ಆಂಜನೇಯ ವಿಗ್ರಹ ಮೂರ್ತಿಗೆ ಅಭಿಷೇಕ, ಅಲಂಕಾರ, ಮಹಾಮಂಗಳಾರತಿ ತೀರ್ಥ ಪ್ರಸಾದ ವಿನಿಯೋಗ ನೆರವೇರಿತು.

ಬಳಿಕ ದೇವಾಲಯದ ಆವರಣದಲ್ಲಿ ಪ್ರಸಾದ ವಿನಿಯೋಗ ಸ್ವೀಕರಿಸಿ ತಮ್ಮ ಪತಿಯ ಗೆಲುವಿಗಾಗಿ ವಿಶೇಷ ಪೂಜಾ ಕಾರ್ಯಕ್ರಮಗಳನ್ನು ಕೈಗೊಂಡರು. ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಗೆಲುವಿಗೆ ಪತ್ನಿ ಶೀಲಾ ಯೋಗೇಶ್ವರ್ ಪಟ್ಟಣದ ಇತಿಹಾಸ ಪ್ರಸಿದ್ಧ ಹೊಳೆ ಆಂಜನೇಯಸ್ವಾಮಿ ದೇವಾಲಯದಲ್ಲಿ ಹೋಮ, ಹವನ ಹಾಗೂ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ಚೆಲುವನಾರಾಯಣಸ್ವಾಮಿಗೆ ವಸ್ತ್ರ ಸಮರ್ಪಣೆ



ಮೇಲುಕೋಟೆ ರಾಜಮುಡಿ ಉತ್ಸವದಂದು ತಮಿಳುನಾಡು ಸರ್ಕಾರದ ಪರವಾಗಿ ಕಾಂಚೀಪುರಂ ವಿಭಾಗದ ಧಾರ್ಮಿಕದತ್ತಿ ಇಲಾಖೆಯ ಜಂಟಿ ನಿರ್ದೇಶಕ ಕುಮಾರದೊರೈ ಹಾಜರಿದ್ದು, ಚೆಲುವನಾರಾಯಣಸ್ವಾಮಿಗೆ ವಿಶೇಷ ವಸ್ತ್ರಸಮರ್ಪಣೆ ಮಾಡಿದರು.

ಇಂದು ಕರ್ನಾಟಕ ಸಂಘದಿಂದ ರಾಜ್ಯೋತ್ಸವ ಪ್ರಶಸ್ತಿ ಪ್ರದಾನ

ಮಂಡ್ಯ: ಕರ್ನಾಟಕ ಸಂಘದ ವತಿಯಿಂದ ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ನ.11 ರಂದು ಸಂಜೆ 4 ಗಂಟೆಗೆ ನಗರದ ಸ್ವಾಮಿ ವಿವೇಕಾನಂದ ರಂಗಮಂದಿರದಲ್ಲಿ ಪ್ರದಾನ ಮಾಡಲಾಗುವುದು ಎಂದು ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ತಿಳಿಸಿದರು.

ಆದಿಚುಂಚನಗಿರಿ ಮಹಾಪೀಠದ ಪೀಠಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದು, ಕೊಮ್ಮೇರಹಳ್ಳಿಯ ವಿಶ್ವಮಾನವ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಕಾರ್ಯಕ್ರಮ ನಡೆಯಲಿದೆ.

ಕೆ.ಆರ್.ಸಾಗರ ಸರ್ಕಾರಿ ನೌಕರರ ಸಂಘದ ಚುನಾವಣೆ: ಒಂದು ನಾಮಪತ್ರ ತಿರಸ್ಕೃತ

ಶ್ರೀರಂಗಪಟ್ಟಣ, ನ.10– ತಾಲೂಕಿನ ಕೆಆರ್.ಸಾಗರ ಯೋಜನಾ ಘಟಕದ ಸರ್ಕಾರಿ ನೌಕರರ ಚುನಾವಣೆಯಲ್ಲಿ ನಾಮಪತ್ರಗಳ ಪರಿಶೀಲನೆ ವೇಳೆ ಒಂದು ನಾಮಪತ್ರ ತಿರಸ್ಕೃತಗೊಂಡಿದೆ. ಅಧ್ಯಕ್ಷ ಸ್ಥಾನಕ್ಕೆ ಹಾಗೂ ರಾಜ್ಯ ಪರಿಷತ್ ಸ್ಥಾನಗಳಿಗೆ ತಲಾ ಇಬ್ಬರು ಅಭ್ಯರ್ಥಿಗಳು ಉಳಿದಿದ್ದು ಚುನಾವಣೆ ನಡೆಯಲಿದೆ. ರಾಜ್ಯ ಪರಿಷತ್ ಸ್ಥಾನಕ್ಕೆ ಸ್ಪರ್ಧಿಸಿದ್ದ ಲೋಹಿತ್ ಅವರ ನಾಮಪತ್ರ ತಿರಸ್ಕೃತಗೊಂಡಿದೆ. ಖಜಾಂಚಿ ಸ್ಥಾನಕ್ಕೆ ಕರ್ನಾಟಕ ರಾಜ್ಯ ಸಂಶೋಧನ ಕೇಂದ್ರದ ಜಶ್ವಂತ್ ಮಾತ್ರ ನಾಮಪತ್ರ ಸಲ್ಲಿಸಿದ್ದು, ಅಧ್ಯಕ್ಷ ಸ್ಥಾನಕ್ಕೆ ಶಿವಪ್ಪ ಮತ್ತು ನಾಗೇಶ್ ಹಾಗೂ ರಾಜ್ಯ ಪರಿಷತ್ ಸ್ಥಾನಗಳಿಗೆ ವೆಂಕಟೇಶ್ ನಾಯ್ಡು ಹಾಗೂ ಕುಮಾರಸ್ವಾಮಿ ಕಣದಲ್ಲಿದ್ದು ಇದೇ ನ.11ರವರೆಗೆ ನಾಮಪತ್ರ ವಾಪಸ್ಸು ಪಡೆಯಲು ಅವಕಾಶವಿದೆ ಯಾರೂ ನಾಮಪತ್ರ ವಾಪಸ್ ಪಡೆಯದಿದ್ದರೆ ಎರಡು ಸ್ಥಾನಗಳಿಗೆ ನ.16ರಂದು ಚುನಾವಣೆ ನಡೆಯಲಿದೆ ಎಂದು ಚುನಾವಣಾ ಅಧಿಕಾರಿ ಅಶ್ವಪ್ಪ ತಿಳಿಸಿದರು.

ರಾಜ್ಯಮಟ್ಟದಲ್ಲಿ ಮಕ್ಕಳಿಗೆ ಗ್ರಾಹಕ ಕಾಯ್ದೆ ಕುರಿತು ಜಾಗೃತಿ ಮೂಡಿಸಬೇಕು

ಮೈಗ್ರಾಪ ಸಭೆಯಲ್ಲಿ ಸದಸ್ಯರ ಅಭಿಪ್ರಾಯ



'ರಾಷ್ಟ್ರೀಯ ಗ್ರಾಹಕರ ದಿನ' ಹಾಗೂ '1983ರ ಗ್ರಾಹಕರ ಸಂರಕ್ಷಣಾ ಕಾಯ್ದೆ' ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಂಬಂಧ ಮೈಗ್ರಾಪ ಸಭೆಯಲ್ಲಿ ಚರ್ಚೆ ನಡೆಯಿತು.



ಜೆಎಸ್‌ಎಸ್ ಲಾ ಕಾಲೇಜು ಹಾಗೂ ಪ್ರೌಢಶಾಲಾ ವಿದ್ಯಾರ್ಥಿಗಳು ಗ್ರಾಹಕ ಕಾಯ್ದೆ ಕುರಿತು ಫಲಕ ಪ್ರದರ್ಶಿಸಿದರು.

ಮೈಸೂರು, ನ.10(ಎಸ್‌ಪಿಎನ್)– ಒಂದರಿಂದ ಹದಿನೈದು ವಯಸ್ಸಿನ ಮಕ್ಕಳನ್ನು ಟಾರ್ಗೆಟ್ ಮಾಡಿಕೊಂಡು ಎಂಎನ್‌ಸಿ ಕಂಪನಿಗಳು ಹಲವಾರು ತಿಂಡಿ–ತಿನಿಸು, ಆಟಿಕೆ ಸೇರಿದಂತೆ ಇತರೆ ಸಾಮಾಗ್ರಿಗಳ ಮಾರಾಟ ಮಾಡುತ್ತಿದೆ. ಇದರಿಂದ ಮಾರುಕಟ್ಟೆಯಲ್ಲಿ ಮಕ್ಕಳಿಗೆ ಆಗುತ್ತಿರುವ ಮೋಸದ ಕುರಿತು ಜಾಗೃತಿ ಮೂಡಿಸುವಲ್ಲಿ ನ್ಯಾಯಾಂಗ ಮತ್ತು ಕಾರ್ಯಾಂಗ ಸಂಪೂರ್ಣ ವಿಫಲವಾಗಿವೆ ಎಂದು ಮೈಸೂರು ಗ್ರಾಹಕ ಪರಿಷತ್(ಮೈಗ್ರಾಪ) ಸದಸ್ಯರು ಭಾನುವಾರ ತೀವ್ರ ಬೇಸರ ಹೊರಹಾಕಿದರು.

ಮೈಸೂರಿನ ಯಾದವಗಿರಿ ವಿವೇಕಾನಂದ ರಸ್ತೆಯ ಮೈಗ್ರಾಪ ಕಚೇರಿಯಲ್ಲಿ ಅಧ್ಯಕ್ಷ ಶ್ರೀಶೈಲ ರಾಮಣ್ಣವರ್ ಅಧ್ಯಕ್ಷತೆಯಲ್ಲಿ ನಡೆದ 'ರಾಷ್ಟ್ರೀಯ ಗ್ರಾಹಕರ ದಿನ' ಹಾಗೂ '1983ರ ಗ್ರಾಹಕರ ಸಂರಕ್ಷಣಾ ಕಾಯ್ದೆ' ಕುರಿತು ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸುವ ಸಂಬಂಧ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಹಾಯಕ ನಿರ್ದೇಶಕ ಕೆ.ಸುರೇಶ್ ಹಾಗೂ ನಿವೃತ್ತ ಅಧಿಕಾರಿ ಶ್ರೀಕಾಂತ್ ಅವರೊಂದಿಗೆ ನಡೆದ ಸಂವಾದದಲ್ಲಿ ಸದಸ್ಯರು ತೀವ್ರ ಬೇಸರ ಹೊರಹಾಕಿದರು.

ನಿವೃತ್ತ ಶಿಕ್ಷಣಾಧಿಕಾರಿ ಶ್ರೀಕಾಂತ್ ಮಾತನಾಡಿ, ತಂತ್ರಜ್ಞಾನ ಮುಂದುವರೆದಂತೆ ಆನ್‌ಲೈನ್ ಶಾಪಿಂಗ್, ಆನ್‌ಲೈನ್ ಗೇಮಿಂಗ್ ಹಾಗಾ ಖಾಸಗಿ ಕಂಪನಿಗಳು ತಯಾರಿಸುವ ತಿಂಡಿ–ತಿನಿಸು, ಆಟಿಕೆಗಳು ಹಾಗೂ ಬಟ್ಟೆ ಖರೀದಿ ಸೇರಿದಂತೆ ಇತರೆ ಸಾಮಾಗ್ರಿಗಳ ಮಾರಾಟದಲ್ಲೂ ಮಕ್ಕಳಿಗೆ ಮೋಸವಾಗುತ್ತಿರುವುದು ಬೇಸರ ಸಂಗತಿ ಎಂದರು.

ಶಾಲಾ ಹಂತದಲ್ಲಿ ಜಾಗೃತಿಗೆ ಮನವಿ: ಮೈಗ್ರಾಪ ಸದಸ್ಯರೊಬ್ಬರು ಮಾತನಾಡಿ, ಮಕ್ಕಳನ್ನು ಟಾರ್ಗೆಟ್ ಮಾಡಿ, ಮಾರುಕಟ್ಟೆಯಲ್ಲಾಗುವ ಮೋಸವನ್ನು ತಡೆಗಟ್ಟುವ ಕುರಿತು ಶಾಲಾ–ಕಾಲೇಜುಗಳ ಗ್ರಾಹಕ ಕ್ಲಬ್ ಮೂಲಕ ಜಾಗೃತಿ ಮೂಡಿಸಬೇಕು ಎಂದರು.

ಶಾಲಾ ಹಂತದಲ್ಲಿ ರಾಷ್ಟ್ರೀಯ ಗ್ರಾಹಕ ಕಾಯ್ದೆ ಹಾಗೂ ಗ್ರಾಹಕರ ಚಳವಳಿ ಉತ್ತೇಜಿಸುವ ಕಾರ್ಯಕ್ರಮ ಹಮ್ಮಿಕೊಳ್ಳುವಂತೆ ಇಲಾಖೆಗೆ, ಸರ್ಕಾರದ ಸ್ಪಷ್ಟ ನಿರ್ದೇಶನವಿದ್ದರೂ ಈ ಕೆಲಸ ಆಗುತ್ತಿಲ್ಲ. ಈ ಕುರಿತು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಕೇವಲ ದಾಖಲಾತಿಗಾಗಿ ಗ್ರಾಹಕರ ಕ್ಲಬ್ ಸ್ಥಾಪಿಸಿ, ಒಂದು ದಿನಕ್ಕೆ ಸೀಮಿತವಾಗಿ ಆಚರಣೆ ಮಾಡಲಾಗುತ್ತಿದೆ ಎಂದು ಎಂಜಿಪಿಯ ಬಾಮಿ ವಿ.ಶೆಣೈ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಹಾಯಕ ನಿರ್ದೇಶಕ ಸುರೇಶ್, ಜಿಲ್ಲೆಯಲ್ಲಿ 233 ಸರ್ಕಾರಿ ಪ್ರೌಢಶಾಲೆಗಳಿವೆ. ಇದರಲ್ಲಿ ಕೆಲವೇ ಪ್ರೌಢಶಾಲೆಗಳಲ್ಲಿ ಗ್ರಾಹಕ ಕಾಯ್ದೆ, ಗ್ರಾಹಕರ ದಿನಾಚರಣೆ ಕುರಿತು ಡಿ.24ರಂದು ಆಚರಿಸಲಾಗುತ್ತಿದೆ. ಇತ್ತೀಚೆಗೆ ಮಕ್ಕಳನ್ನು ಟಾರ್ಗೆಟ್ ಮಾಡಿ ವ್ಯಾಪಾರಸ್ಥರು ಮಾಡುತ್ತಿರುವ ಮೋಸದ ಘಟನೆಗಳನ್ನು ಗಮನಿಸಿದರೆ, ಶಾಲಾ ಹಂತದಲ್ಲಿ ಗ್ರಾಹಕ ಕಾಯ್ದೆ ಕುರಿತು ಜಾಗೃತಿ ಮೂಡಿಸುವುದು ಅನಿವಾರ್ಯ. ಈ ಕುರಿತು ಡಿಡಿಪಿಐ ಗಮನಕ್ಕೆ ತರಲಾಗುವುದು ಎಂದು ಉತ್ತರಿಸಿದರು.

ಕಾನೂನು ವಿದ್ಯಾರ್ಥಿಗಳ ಸಹಯೋಗ ವಿರಲಿ: ಕಾನೂನು ವಿದ್ಯಾರ್ಥಿಗಳ ಸಹಯೋಗದೊಂದಿಗೆ ಪ್ರೌಢಶಾಲಾ ಹಂತದಲ್ಲಿ ಪ್ರಾಯೋಗಿಕ ಮಾದರಿಗಳನ್ನು ಪ್ರದರ್ಶಿಸುವ ಕಾರ್ಯಕ್ರಮ ರೂಪಿಸುವಂತೆ ಜೆಎಸ್‌ಎಸ್ ಕಾನೂನು ಕಾಲೇಜು ವಿದ್ಯಾರ್ಥಿಗಳು ಸಹಾಯಕ ನಿರ್ದೇಶಕ ಸುರೇಶ್ ಅವರಲ್ಲಿ ವಿನಂತಿಸಿದಾಗ, ಈ ಸಲಹೆ ಮೌಲ್ಯಯುತವಾಗಿದ್ದು, ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಮುಂದಿನ ನಿರ್ಧಾರ ತಿಳಿಸಲಾಗುವುದು ಎಂದರು.

ಈ ವೇಳೆ ನಿವೃತ್ತ ಅಧಿಕಾರಿ ಡಾ.ನಟರಾಜ್ ಅವರು, ಬಿಇಓ ಉತ್ತರ ವಲಯ ವ್ಯಾಪ್ತಿಯಲ್ಲಿ ಖಾಸಗಿ ಶಾಲೆಯೊಂದು ಸರ್ಕಾರದ ನಿಯಮವನ್ನು ಗಾಳಿಗೆ ತೂರಿಸಿ ಕಟ್ಟಡ ನಿರ್ಮಾಣ ಮಾಡಿದರೆ, ಕುರಿತು ಅಲ್ಲಿನ ಶಿಕ್ಷಣಾಧಿಕಾರಿಗಳ ಗಮನಕ್ಕೆ ತಂದಾಗ ಈ ಸಮಸ್ಯೆಯನ್ನು ನಿವಾರಿಸಲು ಮುಂದಾಗುತ್ತಿಲ್ಲ ಎಂದು ಸುರೇಶ್ ಅವರ ಗಮನಕ್ಕೆ ತಂದರು.

ಸಭೆಯಲ್ಲಿ ಎಂಜಿಪಿ ಸದಸ್ಯರಾದ ಎಸ್.ಕೆ.ದಿನೇಶ್, ಡಾ.ಕೆ.ಶಂಕರೇಗೌಡ, ಕೆ.ವಿ.ಬಾನುಪ್ರಶಾಂತ್, ಎಸ್.ಶೋಭನಾ, ಕೆ.ಮುರುಳಿ ಮೋಹನ, ಯಶಿತಾ, ಅರುಣ, ಕೆ.ಜಿ.ಶಶಿಧರ್, ಅರುಣ್ ಕುಮಾರ್ ಶೆಟ್ಟರ್, ಪಿ.ರಾಕೇಶ್, ಎಸ್.ವಿ.ಶಂಕರ್, ಆರ್.ಬಿ.ಶೋಭರಾಣಿ, ಸ್ಪಂದನ ಎಸ್.ರೈ, ಪಿ.ಬಿ.ಮೇಘಾ, ಪಿ.ಎನ್.ಅನನ್ಯ, ವಿಶ್ವನಾಥ್, ರಾಘವೇಂದ್ರ, ಪಿ.ಶ್ರೀವಿದ್ಯಾ, ಡಾ.ನಟರಾಜ್, ಶ್ರೀಕಂಠೇಶ್, ಕೆ.ಬಿ.ರಾಘವ್, ಪಾಯಲ್ ಆರ್.ಶಂಕರ್, ಎಂ.ಎ.ಚಿರಂತ್ ಗೌಡ, ಎಂ.ಪ್ರತೀಕ್ಷ, ಎನ್.ಖುಷಿ, ವಿ.ದಯಾನಂದ ಸಾಗರ್ ಸೇರಿದಂತೆ ಅನೇಕರಿದ್ದರು.

ಸಭೆಯಲ್ಲಿ ಕೇಳಿ ಬಂದ ಸಲಹೆಗಳು

● ಶಾಲಾ ಹಂತದಲ್ಲಿ ಗ್ರಾಹಕ ಕ್ಲಬ್ ಸ್ಥಾಪಿಸಿ, ಮಾರುಕಟ್ಟೆಯಲ್ಲಾಗುವ ಮೋಸ ಕುರಿತು ಮಕ್ಕಳಲ್ಲಿ ಜಾಗೃತಿ ● ಗ್ರಾಹಕ ಕಾಯ್ದೆ ಕುರಿತು, ಪ್ರೌಢಶಾಲಾ ಹಂತದಲ್ಲಿ ಎಲ್ಲಾ ಶಿಕ್ಷಕರಿಗೂ ತರಬೇತಿ ನೀಡುವುದು ● ಸರ್ಕಾರಿ ಶಾಲಾ ಮಕ್ಕಳಿಗೆ ಗ್ರಾಹಕ ಕ್ಲಬ್ ಮಹತ್ವ, ಗ್ರಾಹಕ ಕಾಯ್ದೆ ಕುರಿತು ಪ್ರಾಯೋಗಿಕ ಕಾರ್ಯಕ್ರಮ ಆಯೋಜಿಸುವುದು. ● ಪ್ರತಿಶಾಲೆಯಲ್ಲೂ ಡಿ.24ರ ರಾಷ್ಟ್ರೀಯ ಗ್ರಾಹಕ ದಿನವನ್ನು ಕಡ್ಡಾಯವಾಗಿ ಆಚರಿಸಲು ಸುತ್ತೋಲೆ ಹೊರಡಿಸುವಂತೆ ಮನವಿ.

ಯೋಗೇಶ್ವರ್ ಪರ ಮೈಸೂರು ಮುಖಂಡರ ಪ್ರಚಾರ



ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆ ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ.ಯೋಗೇಶ್ವರ್ ಪರ ಮೈಸೂರು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಕೆಪಿಸಿಸಿ ಸದಸ್ಯ ಹನುಮಂತು ನಾಗಮಂಗಲ, ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಕಮಲ ಅನಂತರಾಮ್, ಸಂದೇಶ್ ಮಡಿವಾಳ್, ಎಲ್.ಎಂ.ಗೋಪಾಲ್, ಮಹೇಂದ್ರ ಕಾಗಿನೆಲೆ, ನಾರಾಯಣ, ವೆಂಕಟೇಶ್ ಮಡಿವಾಳ್, ರವಿಕುಮಾರ್ ಕುಂಬಾರ್, ಶಶಿಕುಮಾರ್, ಲಕ್ಷ್ಮಿನಾರಾಯಣ ಮತ್ತಿತರರು ಮತಯಾಚಿಸಿದರು.

ವಸ್ತು ಪ್ರದರ್ಶನದಲ್ಲಿ ಉಚಿತ ಆರೋಗ್ಯ ತಪಾಸಣಾ ಕೇಂದ್ರ ಉದ್ಘಾಟನೆ



ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಸಾರ್ವಜನಿಕರಿಗೆ 'ಉಚಿತ ಆರೋಗ್ಯ ತಪಾಸಣಾ ಕೇಂದ್ರ'ವನ್ನು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಉದ್ಘಾಟಿಸಿದರು.

ಮೈಸೂರು, ನ.10(ಎಸ್‌ಪಿಎನ್)– ದಸರಾ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಸರಾ ಆರೋಗ್ಯ ಮತ್ತು ಸ್ವಚ್ಛತಾ ಉಪಸಮಿತಿ ಹಾಗೂ ಶ್ರೀನಿವಾಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಸಹಯೋಗದೊಂದಿಗೆ ಸಾರ್ವಜನಿಕರಿಗೆ 'ಉಚಿತ ಆರೋಗ್ಯ ತಪಾಸಣಾ ಕೇಂದ್ರ'ವನ್ನು ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್ ಶುಕ್ರವಾರ ಉದ್ಘಾಟಿಸಿದರು.

ನಂತರ ಮಾತನಾಡಿ, ಸಮಾಜದಲ್ಲಿ ಆರ್ಥಿಕ ಶ್ರೀಮಂತಿಕೆಗಿಂತ, ಆರೋಗ್ಯವಂತ ಮನುಷ್ಯನೇ ನಿಜವಾದ ಭಾಗ್ಯವಂತ. ನಗರ ಪ್ರದೇಶದಲ್ಲಿ ಕಾಂಕ್ರಿಟ್ ಕಟ್ಟಡ, ವಾಯು ಮಾಲಿನ್ಯ ಹೆಚ್ಚಾಗಿ ಗಿಡ–ಮರಗಳನ್ನು ಕಡಿದು ನೈಜ ಪರಿಸರವನ್ನೇ ಹಾಳುಮಾಡಕೊಳ್ಳುತ್ತಿದ್ದೇವೆ ಎಂದು ಬೇಸರ ವ್ಯಕ್ತಪಡಿಸಿದರು. ದಸರಾ ವಸ್ತು ಪ್ರದರ್ಶನದಲ್ಲಿ ಆರೋಗ್ಯ ಮತ್ತು ಸ್ವಚ್ಛತಾ ಸಮಿತಿಯ ವತಿಯಿಂದ ಪ್ರತಿ ಶನಿವಾರ ಮತ್ತು ಭಾನುವಾರ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿದ್ದು, ವಸ್ತು ಪ್ರದರ್ಶನಕ್ಕೆ ಬರುವ ಪ್ರವಾಸಿಗರು, ಪ್ರೇಕ್ಷಕರು ಇದನ್ನ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮನವಿ ಮಾಡಿದರು.

ಈ ವೇಳೆ ಶ್ರೀನಿವಾಸ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕರಾದ ಗಂಧನಹಳ್ಳಿ ವೆಂಕಟೇಶ್ ರವರು ಮಾತನಾಡಿದರು. ವಸ್ತು ಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಮಾಜಿ ಉಪಮೇಯರ್ ಪುಷ್ಪಲತಾ ಜಗನ್ನಾಥ್, ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ, ಅಲ್ಪಸಂಖ್ಯಾತ ಅಧ್ಯಕ್ಷ ಆರಿಫ್ ಪಾಷಾ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯರಾದ ಬಿರುಹುಂಡಿ ಬಸವಣ್ಣ, ಮುಖಂಡರಾದ ಹಿನಕಲ್ ಉದಯ್, ದಕ್ಷಿಣಾಮೂರ್ತಿ, ಶೌಕತ್ ಅಲಿಖಾನ್, ಆರೋಗ್ಯ ಮತ್ತು ಸ್ವಚ್ಛತಾ ಉಪ ಸಮಿತಿ ಕಾರ್ಯಧ್ಯಕ್ಷ ಫೈರೋಜ್ ಖಾನ್, ಉಪಾಧ್ಯಕ್ಷ ಪದ್ಮನಾಭನ್, ಮೊಸಿನ್ ಖಾನ್, ನಾಜೀರ್ ಖಾನ್, ಮಹೇಂದ್ರ ಕಾಗಿನೆಲೆ, ಮಲ್ಲಿಕಾರ್ಜುನ್, ಜಗದೀಶ್, ರಂಗಸ್ವಾಮಿ, ಹಾಗೂ ಇನ್ನಿತರರು ಹಾಜರಿದ್ದರು.

ಕನ್ನಡ ರಥ ಯಾತ್ರೆಗೆ ಅದ್ಧೂರಿ ಸ್ವಾಗತ

• ಭುವನೇಶ್ವರಿ ತಾಯಿಗೆ ಪುಷ್ಪಾರ್ಚನೆ • ಮಡಿಕೇರಿ ಮುಖ್ಯರಸ್ತೆಯಲ್ಲಿ ಮೆರವಣಿಗೆ



ಮಡಿಕೇರಿ ನಗರದ ಮುಖ್ಯರಸ್ತೆಯಲ್ಲಿ ಕನ್ನಡ ಜ್ಯೋತಿ ರಥದ ಮೆರವಣಿಗೆ ನಡೆಸಲಾಯಿತು.

ಮಡಿಕೇರಿ, ನ.10–ಡಿ.20ರಿಂದ ಮೂರು ದಿನ ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ಜ್ಯೋತಿ ರಥ ಯಾತ್ರೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸದಸ್ಯರು ನಗರದ ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತದಲ್ಲಿ ಭಾನುವಾರ ಭುವನೇಶ್ವರಿ ತಾಯಿಗೆ ಪುಷ್ಪಾರ್ಚನೆ ನೆರವೇರಿಸಿ ಸ್ವಾಗತಿಸಿ ಬರಮಾಡಿಕೊಂಡರು.

ಬಳಿಕ ಜನರಲ್ ತಿಮ್ಮಯ್ಯ ವೃತ್ತದಿಂದ ಮೇಜರ್ ಮಂಗೇರಿರ ಮುತ್ತಣ್ಣ ವೃತ್ತದ ಮೂಲಕ ನಗರದ ಮುಖ್ಯರಸ್ತೆಯಲ್ಲಿ ಕನ್ನಡ ಜ್ಯೋತಿ ರಥದ ಮೆರವಣಿಗೆ ನಡೆಸಲಾಯಿತು.

ನಂತರ ಹಳೇ ಖಾಸಗಿ ಬಸ್ ನಿಲ್ದಾಣದ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಜಿಲ್ಲಾಧಿಕಾರಿ ವೆಂಕಟ್ ರಾಜಾ, ಕನ್ನಡ ಭಾಷೆ, ನಾಡು–ನುಡಿ, ಸಂಸ್ಕೃತಿ ಕಲೆಗಳ ಬಗ್ಗೆ ಪ್ರತಿಯೊಬ್ಬರಲ್ಲೂ ಅಭಿಮಾನ ಇರಬೇಕು. ರಾಜ್ಯದ ಭಾಷೆ, ಸಂಸ್ಕೃತಿ ಸಂದೇಶ ಸಾರುವಲ್ಲಿ ಎಲ್ಲರೂ ಕೈಜೋಡಿಸಬೇಕು. ಮಂಡ್ಯದಲ್ಲಿ ನಡೆಯುವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಜಿಲ್ಲೆಯಿಂದಲೂ ಸಾವಿರಾರು ಮಂದಿ ಪಾಲ್ಗೊಳ್ಳುವಂತಾಗಬೇಕು ಎಂದರು.

ಕಸಾಪ ಜಿಲ್ಲಾಧ್ಯಕ್ಷ ಕೇಶವ್ ಕಾಮತ್ ಮಾತನಾಡಿ, ಮೂರು ದಿನ ಮಂಡ್ಯದಲ್ಲಿ ನಡೆಯಲಿರುವ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಚಾರ ಕನ್ನಡ ಜ್ಯೋತಿ ರಥವನ್ನು ಕೊಡಗು ಜಿಲ್ಲೆಯಲ್ಲಿ ಅದ್ಧೂರಿಯಾಗಿ ಸ್ವಾಗತಿಸಲಾಗಿದೆ. ರಥಯಾತ್ರೆ ಮಡಿಕೇರಿ ಮೂಲಕ ವಿರಾಜಪೇಟೆ–ಗೋಣಿಕೊಪ್ಪ–ಪೊನ್ನಂಪೇಟೆಗೆ ತೆರಳಲಿದೆ. ನ.11ರಂದು ಪೊನ್ನಂಪೇಟೆಯಿಂದ ಕುಶಾಲನಗರಕ್ಕೆ ತೆರಳಲಿದೆ. ಕುಶಾಲನಗರದಲ್ಲಿ 5 ಸಾವಿರ ಜನರಿಂದ ಕನ್ನಡ ಗೀತ ಗಾಯನ ಕಾರ್ಯಕ್ರಮ ನಡೆಯಲಿದೆ ಎಂದು ಮಾಹಿತಿ ನೀಡಿದರು.



ಮಡಿಕೇರಿಯಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನದ ಕನ್ನಡ ರಥ ಯಾತ್ರೆಯನ್ನು ಜಿಲ್ಲಾಧಿಕಾರಿ ವೆಂಕಟ್ ರಾಜಾ ಮತ್ತು ಕಸಾಪ ಸದಸ್ಯರು ಸ್ವಾಗತಿಸಿದರು.

ರಥ ಯಾತ್ರೆ ವಿಶೇಷತೆ

ಕನ್ನಡ ಜ್ಯೋತಿ ರಥ ಯಾತ್ರೆಯ ವಾಹನದ ಮುಂಭಾಗದಲ್ಲಿ ಪ್ರಮುಖವಾಗಿ ತಾಯಿ ಭುವನೇಶ್ವರಿ ಮಾತೆ ಪ್ರತಿಮೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್.ಎಂ.ವಿಶ್ವೇಶ್ವರಯ್ಯ ಅವರ ಪ್ರತಿಮೆ ಅಳವಡಿಸಲಾಗಿತ್ತು. ರಥದ ಎಡ ಮತ್ತು ಬಲ ಬದಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕವಿಗಳ ಭಾವಚಿತ್ರ ಒಳಗೊಂಡಿದ್ದು ವಿಶೇಷವಾಗಿತ್ತು. ರಥದ ಹಿಂಭಾಗ ಜೋಡೆತ್ತುಗಳಲ್ಲಿ ರೈತ ಉಳುಮೆ ಮಾಡುವ ಕಲಾಕೃತಿ ನೋಡುಗರ ಗಮನ ಸೆಳೆಯುವಂತಿತ್ತು.

ಇದೇ ಸಂದರ್ಭ ಲಹರಿ ಶಿಕ್ಷಕಿಯರ ತಂಡದಿಂದ ನಾಡಗೀತೆ ಮತ್ತು ರೈತ ಗೀತೆ ಮೂಡಿಬಂತು. ಕ್ರೆಸೆಂಟ್ ಶಾಲೆ ವಿದ್ಯಾರ್ಥಿಗಳು ಹಾಗೂ ನಗರದ ಬಾಲಕರ ಬಾಲ ಮಂದಿರದ ವಿದ್ಯಾರ್ಥಿಗಳು ಕನ್ನಡ ಗೀತೆಗಳಿಗೆ ನೃತ್ಯ ಪ್ರದರ್ಶಿಸಿ ಗಮನ ಸೆಳೆದರು. ಹಾಸನ ಜಿಲ್ಲೆಯ ಕಲಾತಂಡಗಳು ರಣಕಹಳೆ ಹಾಗೂ ಚೆಟ್ಟಿಮೇಳ ವಾದ್ಯ ನುಡಿಸುವ ಮೂಲಕ, ಸ್ತ್ರೀಶಕ್ತಿ ಗುಂಪಿನ ಸದಸ್ಯರು ಪೂರ್ಣಕುಂಭ ಸ್ವಾಗತದೊಂದಿಗೆ ತಾಯಿ ಭುವನೇಶ್ವರಿ ಕನ್ನಡ ರಥ ಯಾತ್ರೆ ಮರೆವಣಿಗೆಯಲ್ಲಿ ಸಾಗಿ ಬಂದರು.

ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ರಾಜೇಶ್ ಯಲ್ಲಪ್ಪ, ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಟಿ.ಪಿ.ರಮೇಶ್, ಗೌರವ ಕಾರ್ಯದರ್ಶಿಗಳಾದ ಎಸ್.ಐ.ಮುನೀರ್ ಅಹ್ಮದ್, ರೇವತಿ ರಮೇಶ್, ತಾಲೂಕು ಅಧ್ಯಕ್ಷೆ ಕಡ್ಲೇರ ತುಳಸಿ ಮೋಹನ್, ತಹಸೀಲ್ದಾರ್ ಪ್ರವೀಣ್ ಕುಮಾರ್, ಶಿಕ್ಷಣ ಇಲಾಖೆ ಉಪನಿರ್ದೇಶಕ ಸಿ.ರಂಗಧಾಮಪ್ಪ, ಪೌರಾಯುಕ್ತ ರಮೇಶ್, ತಾಪಂ ಇಓ ಶೇಖರ್, ಕ್ಷೇತ್ರ ಶಿಕ್ಷಣಾಧಿಕಾರಿ ದೊಡ್ಡೇಗೌಡ, ಬಿಸಿಎಂ ಇಲಾಖೆ ಅಧಿಕಾರಿ ಪಿ.ಪಿ.ಕವಿತಾ, ವೃತ್ತ ನಿರೀಕ್ಷಕ ರಾಜು, ಪೊಲೀಸ್ ನಿರೀಕ್ಷಕ ಲೋಕೇಶ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ ಮತ್ತಿತರರು ಹಾಜರಿದ್ದರು.

ಕಂಬಿಬಾಣೆ ಸರ್ಕಾರಿ ಶಾಲೆಯಲ್ಲಿ ಕಳವು



ಕಂಬಿಬಾಣೆ ಸರ್ಕಾರಿ ಶಾಲೆಯ ಬೀರುವಿನ ಬಾಗಿಲು ಮುರಿದಿರುವುದು.

ಸುಂಟಿಕೊಪ್ಪ: ಅತ್ತೂರು ನಲ್ಲೂರು ಕಂಬಿಬಾಣೆ ಗ್ರಾಮ ಪಂಚಾಯಿತಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಮಧ್ಯರಾತ್ರಿ ಕಳ್ಳತನ ನಡೆದಿದೆ. ಶಾಲೆಯ ಮುಖ್ಯಶಿಕ್ಷಕರ ಕೊಠಡಿಯಿಂದ 2 ಸಾವಿರ ರೂ. ನಗದು ಕಳವು ಮಾಡಲಾಗಿದ್ದು, ತರಗತಿ ಕೊಠಡಿಯ ಬೀಗ ಮುರಿದು ಮುಖ್ಯ ಶಿಕ್ಷಕರ ಕೊಠಡಿಯಿಂದ ಟೇಬಲ್ ಹೊದಿಕೆ ತಂದು ಕೊಠಡಿಯಲ್ಲೇ ಮಲಗಿ ಹೋಗಿರುವುದು ಕಂಡು ಬಂದಿದೆ. ಅಕ್ಷರ ದಾಸೋಹ ಅಡುಗೆ ಕೋಣೆಯ ಬೀಗ ಮುರಿಯಲು ವಿಫಲ ಪ್ರಯತ್ನ ನಡೆದಿದೆ.

ಮುಖ್ಯ ಶಿಕ್ಷಕಿ ನಯನ ದೂರು ನೀಡಿದ್ದ ಮೇರೆಗೆ ಸುಂಟಿಕೊಪ್ಪ ಪೊಲೀಸ್ ಠಾಣಾಧಿಕಾರಿ ಚಂದ್ರಶೇಖರ್, ಅಪರಾಧ ವಿಭಾಗದ ಇನ್ಸ್‌ಪೆಕ್ಟರ್ ಭಾರತಿ, ಸಿಬ್ಬಂದಿ ಶ್ವಾನದಳದೊಂದಿಗೆ ಸ್ಥಳ ಪರಿಶೀಲಿಸಿ, ಮುಂದಿನ ಕ್ರಮ ಕೈಗೊಂಡಿದ್ದಾರೆ.

ಡಿ.1ಕ್ಕೆ ರಾಷ್ಟ್ರ ಮಟ್ಟದ ಕೊಡವ ನಮ್ಮೆ ಸಾಂಸ್ಕೃತಿಕ ಸ್ಪರ್ಧೆ



ಸುದ್ದಿಗೋಷ್ಠಿಯಲ್ಲಿ ಕೊಡವ ನಮ್ಮೆ ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಾಳಿಮಾಡ ಮೋಟಯ್ಯ ಮಾತನಾಡಿದರು.

ವಿರಾಜಪೇಟೆ, ನ.10–ಕೊಡವ ಸಮಾಜಗಳ ಒಕ್ಕೂಟದಡಿ ಪಟ್ಟಣದ ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಸಾಂಸ್ಕೃತಿಕ ಕೇಂದ್ರ ಹಾಗೂ ಜನರಲ್ ತಿಮ್ಮಯ್ಯ ಕ್ರೀಡಾ ಕೇಂದ್ರದಲ್ಲಿ ಡಿ.1ರಂದು ಬೆಳಗ್ಗೆ 9.30ಕ್ಕೆ ರಾಷ್ಟ್ರಮಟ್ಟದ ಕೊಡವ ನಮ್ಮೆ ಸಾಂಸ್ಕೃತಿಕ ಸ್ಪರ್ಧೆ ಏರ್ಪಡಿಸಲಾಗಿದೆ ಎಂದು ಸಾಂಸ್ಕೃತಿಕ ಸಮಿತಿ ಅಧ್ಯಕ್ಷ ಕಾಳಿಮಾಡ ಮೋಟಯ್ಯ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಕೋಲಾಟ್, ಬಾಳೋಪಾಟ್, ಕತ್ತಿಯಾಟ್, ಬೊಳಕಾಟ್, ಉಮ್ಮತಾಟ್, ಪರಿಯಕಳಿ, ಅಡಕುವೋ, ತಾಲಿಪಾಟ್ ಸ್ಪರ್ಧೆ ನಡೆಯಲಿದೆ. ಸ್ಪರ್ಧೆಗಳು ಕೊಡವ ಸಮಾಜಗಳ ನಡುವೆ ನಡೆಯಲ್ಲಿರುವುದರಿಂದ ಪ್ರತಿ ಸ್ಪರ್ಧೆಗೆ ಪ್ರತಿ ಕೊಡವ ಕುಟುಂಬದಿಂದ ಒಂದು ತಂಡ ಮಾತ್ರ ಭಾಗವಹಿಸಬಹುದು ಎಂದರು.

ಸ್ಪರ್ಧೆಯಲ್ಲಿ ಭಾಗವಹಿಸುವ ತಂಡಗಳು ನ.20ರೊಳಗೆ ಪೊನ್ನಂಪೇಟೆ ಕೊಡವ ಸಮಾಜದ ಕಚೇರಿಯಲ್ಲಿ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಇಲ್ಲವಾದಲ್ಲಿ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಇರುವುದಿಲ್ಲ. ಹೆಚ್ಚಿನ ಮಾಹಿತಿಗೆ ಮೊ.ನಂ: 9845308228, ಅಥವಾ 9483836115 ಅನ್ನು ಸಂಪರ್ಕಿಸಬಹುದು ಎಂದು ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಸಾಂಸ್ಕೃತಿಕ ಸಮಿತಿ ಸಂಚಾಲಕ ಹಂಚೆಟ್ಟಿರ ಮನು ಮುದ್ದಪ್ಪ, ನಿರ್ದೇಶಕ ಬಾಚಿರ ಜಗದೀಶ್ ಉಪಸ್ಥಿತರಿದ್ದರು.

ನೆಟ್‌ವರ್ಕ್ ಸಮಸ್ಯೆ: ಡಿಸಿಗೆ ದೂರು

ಮಡಿಕೇರಿ: ಕೊಡಗು–ಕೇರಳ ಗಡಿಭಾಗದ ಕರಿಕೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ನೂತನ ಬಿಎಸ್‌ಎನ್‌ಎಲ್ ಟವರ್ ನಿರ್ಮಾಣಗೊಂಡು 2 ವರ್ಷ ಕಳೆದರೂ ಕಾರ್ಯಾರಂಭಗೊಂಡಿಲ್ಲ. ಇದರಿಂದ ನೆಟ್‌ವರ್ಕ್ ಸಮಸ್ಯೆ ಎದುರಾಗಿದ್ದು, ಈ ಕುರಿತು ಗ್ರಾಪಂ ಅಧ್ಯಕ್ಷ ಎನ್.ಬಾಲಚಂದ್ರನ್ ನಾಯರ್ ಜಿಲ್ಲಾಧಿಕಾರಿಗೆ ದೂರು ಸಲ್ಲಿಸಿದ್ದಾರೆ.



ಬಿಎಸ್‌ಎನ್‌ಎಲ್ ಟವರ್

ಗ್ರಾಪಂ ವ್ಯಾಪ್ತಿಯ ಗ್ರಾಮಸ್ಥರು, ವಿದ್ಯಾರ್ಥಿಗಳು, ಖಾಸಗಿ ಸಂಸ್ಥೆಗಳು, ಸರ್ಕಾರಿ ಕಚೇರಿ ಸಿಬ್ಬಂದಿ ನೆಟ್‌ವರ್ಕ್ ಸಮಸ್ಯೆ ಎದುರಿಸುತ್ತಿದ್ದಾರೆ. ತುರ್ತು ಸಂದರ್ಭಗಳಲ್ಲಿ ಕರೆ ಮಾಡುವುದಕ್ಕೂ ನೆಟ್‌ವರ್ಕ್ ಸಿಗುತ್ತಿಲ್ಲ. ಜೊತೆಗೆ ಗ್ರಾಪಂ ಕೆಲಸ ಕಾರ್ಯಗಳು ಕುಂಠಿತಗೊಳ್ಳುತ್ತಿದೆ. ಎಲ್ಲಾ ಕಾರ್ಯ ಚಟುವಟಿಕೆಗಳು ಅಂತರ್ಜಾಲ ಮತ್ತು ನಿಸ್ತಂತು ವ್ಯವಸ್ಥೆ ಮೂಲಕವೇ ನಡೆಯುವ ಈ ಕಾಲಘಟ್ಟದಲ್ಲಿ ನೆಟ್‌ವರ್ಕ್ ಸೌಲಭ್ಯವೇ ಇರದಿದ್ದರೆ ಕಾರ್ಯ ನಿರ್ವಹಿಸುವುದಾದರೂ ಹೇಗೆ ಎಂದು ಪ್ರಶ್ನಿಸಿದ್ದಾರೆ.

ನೆಟ್‌ವರ್ಕ್ ಸಮಸ್ಯೆ ತೀವ್ರ ಸ್ವರೂಪ ಪಡೆದುಕೊಂಡ ಸಂದರ್ಭ ಗ್ರಾಮಸ್ಥರ ಒತ್ತಾಯಕ್ಕೆ ಮಣಿದು ಕರಿಕೆ ಚೆತ್ತುಕಾಯದಲ್ಲಿ ನೂತನ ಬಿಎಸ್‌ಎನ್‌ಎಲ್ ಟವರ್ ನಿರ್ಮಿಸಲಾಯಿತು. ಆದರೆ, ಟವರ್ ನಿರ್ಮಾಣವಾಗಿದೆಯೇ ಹೊರತು ಇಲ್ಲಿಯವರೆಗೆ ಕಾರ್ಯಾರಂಭ ಮಾಡಿಲ್ಲ. ಕರಿಕೆ ವ್ಯಾಪ್ತಿಯಲ್ಲಿ ಬಿಎಸ್‌ಎನ್‌ಎಲ್ ಟವರ್ ಹೊರತುಪಡಿಸಿದರೆ ಬೇರೆ ಯಾವುದೇ ನೆಟ್ ವರ್ಕ್ ಅಥವಾ ಟವರ್‌ಗಳಿಲ್ಲ. ನೂತನ ಟವರ್ ನಿರ್ಮಾಣಗೊಂಡಾಗ ನೆಟ್‌ವರ್ಕ್ ಸಮಸ್ಯೆ ಶೀಘ್ರ ಬಗೆಹರಿಯಲಿದೆ ಎನ್ನುವ ಆಶಾಭಾವನೆ ಗ್ರಾಮಸ್ಥರಲ್ಲಿತ್ತು. ಆದರೆ, ಭರವಸೆ ಹುಸಿಯಾಗಿದ್ದು, ಜಿಲ್ಲಾಧಿಕಾರಿಗಳು ಸ್ವಯಂ ಆಸಕ್ತಿ ವಹಿಸಿ ಗಡಿ ಗ್ರಾಮದ ನೆಟ್‌ವರ್ಕ್ ಸಮಸ್ಯೆಗೆ ಮುಕ್ತಿ ಹಾಡಬೇಕೆಂದು ಬಾಲಚಂದ್ರನ್ ನಾಯರ್ ಮನವಿ ಮಾಡಿದ್ದಾರೆ.

ಗುಂಡು ಹಾರಿಸಿ ಆಟೋ ಚಾಲಕನ ಕೊಲೆಗೆ ಯತ್ನ

ಮಡಿಕೇರಿ: ಬಂದೂಕಿನಿಂದ ಗುಂಡು ಹಾರಿಸಿ ಆಟೋ ಚಾಲಕನ ಕೊಲೆಗೆ ಯತ್ನಿಸಿರುವ ಘಟನೆ ಸೋಮವಾರಪೇಟೆ ಪೊಲೀಸ್ ಠಾಣೆ ವ್ಯಾಪ್ತಿಯ ಹಚ್ಚಿನಾಡು ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಮಾದಾಪುರ ಬಳಿಯ ಹಟ್ಟಿ ಹೊಳೆಯಲ್ಲಿ ಆಟೋ ಚಾಲಕ ಅಣ್ಣಯ್ಯ ಅವರು ಗುಂಡೇಟಿನಿಂದ ತೀವ್ರ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ.

ಶನಿವಾರ ರಾತ್ರಿ ಅಣ್ಣಯ್ಯ ತಮ್ಮ ಮನೆ ಸಮೀಪದ ಕಾರ್ಮಿಕ ಚಾಂಡ ಎಂಬಾತ ಅಣ್ಣಯ್ಯ ಮೇಲೆ ಗುಂಡು ಹಾರಿಸಿದ್ದಾನೆ. ಪರಿಣಾಮ ಅಣ್ಣಯ್ಯ ಹೊಟ್ಟೆಯ ಎಡಭಾಗ ಮತ್ತು ಎಡ ಮೊಣ ಕೈಗೆ ಗುಂಡು ತಗುಲಿದ್ದು, ತೀವ್ರವಾಗಿ ಗಾಯಗೊಂಡಿದ್ದಾರೆ.

ಮಾಹಿತಿ ಅರಿತ ಮಾದಾಪುರ ಪೊಲೀಸರು ಸ್ಥಳಕ್ಕೆ ತೆರಳಿ ಮನೆ ಬಳಿ ಗಾಯಗೊಂಡು ಬಿದ್ದಿದ್ದ ಅಣ್ಣಯ್ಯ ಅವರನ್ನು ಆ್ಯಂಬುಲೆನ್ಸ್‌ನಲ್ಲಿ ಸಾಗಿಸಿ ಮಡಿಕೇರಿ ಜಿಲ್ಲಾಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮಂಗಳೂರಿನ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಗಾಯಾಳು ಅಣ್ಣಯ್ಯ ಮತ್ತು ಅವರ ಸಹೋದರನ ನಡುವೆ ಆಸ್ತಿ ವಿಚಾರವಾಗಿ ವೈಷಮ್ಯವಿದೆ ಎನ್ನಲಾಗುತ್ತಿದೆ. ಸಹೋದರನ ಕುಮ್ಮಕ್ಕಿನಿಂದ ಕಾರ್ಮಿಕ ಚಾಂಡ ಅಣ್ಣಯ್ಯಗೆ ಗುಂಡು ಹೊಡೆದಿದ್ದಾನೆ ಎಂದು ಸಾರ್ವಜನಿಕ ವಲಯದಲ್ಲಿ ಮಾತುಗಳು ಕೇಳಿ ಬರುತ್ತಿವೆ. ಆರೋಪಿ ಚಾಂಡ ಪರಾರಿಯಾಗಿದ್ದು, ಆತನ ಪತ್ತೆಗಾಗಿ ತನಿಖೆ ಚುರುಕುಗೊಳಿಸಲಾಗಿದೆ. ಈ ಸಂಬಂಧ ಸೋಮವಾರಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಮಫಲಕಗಳಲ್ಲಿ ಕನ್ನಡ ಬಳಸುವಂತೆ ಮನವಿ



ನಾಗೇಂದ್ರ ಪ್ರಸಾದ್

ಮಡಿಕೇರಿ: ಸರ್ಕಾರ ಆದೇಶದಂತೆ ಜಿಲ್ಲೆಯ ಎಲ್ಲಾ ವರ್ತಕರು ಹಾಗೂ ವಾಣಿಜ್ಯೋದ್ಯಮಿಗಳು ತಮ್ಮ ಅಂಗಡಿ, ವಾಣಿಜ್ಯ ಕಟ್ಟಡಗಳ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಸುವಂತೆ ಕೊಡಗು ಜಿಲ್ಲಾ ಚೇಂಬರ್ ಆಫ್ ಕಾಮರ್ಸ್‌ನ ಅಧ್ಯಕ್ಷ ನಾಗೇಂದ್ರ ಪ್ರಸಾದ್ ಮನವಿ ಮಾಡಿದ್ದಾರೆ.

ಹಿಂದೆಯೇ ನಾಮಫಲಕಗಳಲ್ಲಿ ಶೇ.60ರಷ್ಟು ಕನ್ನಡ ಭಾಷೆ ಬಳಸುವಂತೆ ಜಿಲ್ಲಾಡಳಿತ ಆದೇಶಿಸಿತ್ತು ವಾಣಿಜ್ಯೋದ್ಯಮಿಗಳು ಹಾಗೂ ವರ್ತಕರ ಹಿತ ದೃಷ್ಟಿಯಿಂದ ಮೇ 22ರಂದು ಶಾಸಕ ಡಾ.ಮಂತರ್‌ಗೌಡ ಹಾಗೂ ಜಿಲ್ಲಾಧಿಕಾರಿಗೆ ಜಿಲ್ಲಾ ಚೇಂಬರ್ ಆಫ್ ಕಾಮರ್ಸ್ ಮನವಿ ಸಲ್ಲಿಸಿ 3 ತಿಂಗಳ ಕಾಲಾವಕಾಶ ಕೋರಿತ್ತು ಈಗಾಗಲೇ ಈ ಕಾಲಾವಕಾಶ ಮುಗಿದಿದ್ದು, ಕನ್ನಡ ಭಾಷೆ ಬಳಸುವ ಮೂಲಕ ಎಲ್ಲರೂ ಸರ್ಕಾರ ಆದೇಶ ಪಾಲಿಸಬೇಕು. ಇತರೆ ಭಾಷೆಯ ಮೇಲ್ಭಾಗದಲ್ಲಿ ಕನ್ನಡವನ್ನು ದೊಡ್ಡ ಅಕ್ಷರಗಳಲ್ಲಿ ಬರೆಯಬೇಕು.

ಮಡಿಕೇರಿ ನಗರಸಭಾ ವ್ಯಾಪ್ತಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿರುವ ನಾಮಫಲಕಗಳನ್ನು ತೆರವುಗೊಳಿಸುತ್ತಿದೆ. ಆದ್ದರಿಂದ ಎಲ್ಲಾ ವರ್ತಕರು ಹಾಗೂ ವಾಣಿಜ್ಯೋದ್ಯಮಿಗಳು ಮುಂದಿನ 4–5 ದಿನಗಳೊಳಗೆ ಶೇ.60ರಷ್ಟು ಕನ್ನಡ ಭಾಷೆ ನಾಮಫಲಕವನ್ನು ಅಳವಡಿಸುವಂತೆ ನಾಗೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಅನಧಿಕೃತ ಶೆಡ್ ತೆರವಿಗೆ ಸೂಚನೆ



ಯಳಂದೂರಿನಲ್ಲಿ ಅಕ್ರಮವಾಗಿ ನಿರ್ಮಿಸುತ್ತಿದ್ದ ಶೆಡ್ ಅನ್ನು ಪಪಂ ಮುಖ್ಯಾಧಿಕಾರಿ ಎಂ.ಪಿ.ಮಹೇಶ್ ಕುಮಾರ್ ಪರಿಶೀಲಿಸಿದರು.

ಯಳಂದೂರು, ನ.10– ಪಟ್ಟಣದ ಬಳೇಮಂಟಪದ ಬಳಿಯ ಖಾಲಿ ನಿವೇಶನದಲ್ಲಿ ಅಕ್ರಮವಾಗಿ ನಿರ್ಮಿಸುತ್ತಿದ್ದ ಅಂಗಡಿ ಶೆಡ್ ಅನ್ನು ತೆರವುಗೊಳಿಸುವಂತೆ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಎಂ.ಪಿ.ಮಹೇಶ್ ಕುಮಾರ್ ಸೂಚಿಸಿದರು.

ಬಳೇಮಂಟಪ ಸಮೀಪ ಕೇಂದ್ರ ಪುರಾತತ್ವ ಇಲಾಖೆ 100 ಮೀಟರ್ ಸುತ್ತ ಯಾವುದೇ ಕಟ್ಟಡ, ಮನೆ, ಅಂಗಡಿ ಸೇರಿದಂತೆ ಕಟ್ಟಡಗಳನ್ನು ನಿರ್ಮಾಣ ಮಾಡಲು ಅನುಮತಿ ನೀಡುವುದಿಲ್ಲ. ಆದರೂ ಬಳೇಮಂಟಪದ ಸಮೀಪದಲ್ಲಿ ಅಂಗಡಿ ಶೆಡ್ ನಿರ್ಮಾಸಲಾಗುತ್ತಿದೆ. ಮೊದಲು ತೆರವುಗೊಳಿಸುವಂತೆ ಪಪಂ ಅಧಿಕಾರಿಗಳು ಸೂಚಿಸಿದ್ದಾರೆ. ಇಲ್ಲವಾದಲ್ಲಿ ಕ್ರಮ ವಹಿಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

ಕಾರ್ಮಿಕನಿಗೆ ಸ್ಥಳದಲ್ಲೇ ಬಿಪಿಎಲ್ ಕಾರ್ಡ್

ಅರ್ಜಿ ಹಾಕಿದ ದಿನವೇ ಪರಿಶೀಲಿಸಿದ ಆಹಾರ ಇಲಾಖೆ ಉಪನಿರ್ದೇಶಕರು



ಇ-ಶ್ರಮ್ ಕಾರ್ಡ್ ಫಲಾನುಭವಿ ಬೂದಿಪಡಗದ ರುದ್ರೇಗೌಡಗೆ ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ ಬಿಪಿಎಲ್ ಕಾರ್ಡ್ ವಿತರಿಸಿದರು.

ಚಾಮರಾಜನಗರ, ನ.10–ಇ–ಶ್ರಮ್ ಕಾರ್ಡ್ ಹೊಂದಿದ್ದು, ಬಿಪಿಎಲ್ ಕಾರ್ಡ್‌ನಿಂದ ವಂಚಿತನಾಗಿದ್ದ ಗಿರಿಜನ ಕಾರ್ಮಿಕ ಬೂದಿಪಡಗದ (ರಂಗಸಂದ್ರ) ರುದ್ರೇಗೌಡನಿಗೆ ಅರ್ಜಿ ಹಾಕಿದ ದಿನವೇ ಬಿಪಿಎಲ್ ಕಾರ್ಡ್ ಅನ್ನು ಆಹಾರ ಇಲಾಖೆ ಉಪನಿರ್ದೇಶಕ ಯೋಗಾನಂದ ವಿತರಿಸಿದರು.

ನಗರದ ತಾಲೂಕು ಆಡಳಿತ ಕಚೇರಿಯ ಆಹಾರ ಶಾಖೆಯಲ್ಲಿ ಇ–ಶ್ರಮ್ ನೋಂದಾಯಿತರಿಗೆ ಬಿಪಿಎಲ್ ಕಾರ್ಡ್ ನೀಡುವ ಶಿಬಿರದಲ್ಲಿ ಕಾರ್ಡ್ ವಿತರಿಸಿ ಮಾತನಾಡಿದ ಯೋಗಾನಂದ, ಜಿಲ್ಲೆಯಲ್ಲಿ 2 ಸಾವಿರಕ್ಕೂ ಹೆಚ್ಚು ಇ–ಶ್ರಮ್ ಕಾರ್ಡ್ ಹೊಂದಿರುವ ಅರ್ಹ ಕಾರ್ಮಿಕರು ಬಿಪಿಎಲ್ ಕಾರ್ಡ್‌ಗಳಿಂದ ವಂಚಿತರಾಗಿದ್ದರು. ಇವರೆಲ್ಲರಿಗೂ ಬಿಪಿಎಲ್ ಕಾರ್ಡ್ ನೀಡುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿದೆ. ಅದರಂತೆ ಜಿಲ್ಲೆಯಾದ್ಯಂತ ಮೂರು ದಿನ ಶಿಬಿರ ಆಯೋಜಿಸಲಾಗಿದೆ ಎಂದರು.

ಅರ್ಹ ಇ–ಶ್ರಮ್ ಕಾರ್ಡ್ ಫಲಾನುಭವಿಗಳಿಗೆ ಕಾರ್ಮಿಕ, ಕಂದಾಯ ಹಾಗೂ ಆಹಾರ ಇಲಾಖೆ ಅಧಿಕಾರಿಗಳು ಆಯಾ ಗ್ರಾಮಗಳ ನ್ಯಾಯಬೆಲೆ ಅಂಗಡಿಗಳ ಮಾಲೀಕರ ಮೂಲಕ ಕರೆ ಮಾಡಿ, ಬಿಪಿಎಲ್ ಕಾರ್ಡ್ ಪಡೆದುಕೊಳ್ಳುವಂತೆ ಸೂಚನೆ ನೀಡಿದ್ದೇವೆ ಎಂದು ತಿಳಿಸಿದರು.

ರಂಗಸಂದ್ರದ ಕಾರ್ಮಿಕ ರುದ್ರೇಗೌಡನ ಪತ್ನಿ ಮಹದೇವಮ್ಮನಿಗೆ ಅರ್ಜಿ ಸಲ್ಲಿಸಿದ ಕೆಲ ಗಂಟೆಗಳಲ್ಲೇ ಪರಿಶೀಲಿಸಿ, ಸ್ಥಳದಲ್ಲೇ ಬಿಪಿಎಲ್ ಕಾರ್ಡ್ ವಿತರಣೆ ಮಾಡಿದ್ದೇವೆ. ಇಂತಹ ಅನೇಕ ಅರ್ಹರಿಗೆ ಪಡಿತರ ಚೀಟಿ ವಿತರಣೆಯನ್ನು ಆಯಾ ತಾಲೂಕು ಆಹಾರ ಇಲಾಖೆಯ ಅಧಿಕಾರಿಗಳು ನೀಡುತ್ತಿದ್ದಾರೆ. ಬಹಳ ಯಶಸ್ವಿಯಾಗಿ ಶಿಬಿರ ನಡೆಯುತ್ತಿದ್ದು, ಈಗಾಗಲೇ ಶೇ.80ರಷ್ಟು ಗುರಿ ಸಾಧಿಸಲಾಗಿದೆ. ಉಳಿದ ಶೇ.20ರಷ್ಟು ಫಲಾನುಭವಿಗಳ ಮೊಬೈಲ್ ನಂಬರ್ ಸರಿಯಿಲ್ಲ. ಜೊತೆಗೆ ನಿಗದಿತ ಸ್ಥಳದಲ್ಲಿ ಅವರು ವಾಸವಾಗಿಲ್ಲ. ನಾನಾ ಕಾರಣಗಳಿಂದ ವಲಸೆ ಹೋಗಿರುವ ಕಾರ್ಮಿಕರನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ಇಲಾಖೆ ಸಿಬ್ಬಂದಿ ನಿರತರಾಗಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಕಾರ್ಮಿಕ ಇಲಾಖೆ ಆಹಾರ ನಿರೀಕ್ಷಕ ದಿನಕರ್, ಎಂ.ನಾಗೇಶ, ಶ್ರೀಧರ್, ಮಧುಸೂಧನ್, ಕಾರ್ತಿಕ್ ಇತರರು ಇದ್ದರು.

ಸೇತುವೆಗೆ ಬೈಕ್ ಡಿಕ್ಕಿ: ಸವಾರ ಸಾವು

ಚಾಮರಾಜನಗರ, ನ.10–ಸೇತುವೆಗೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಹಿಂಬದಿ ಸವಾರ ಸ್ಥಳದಲ್ಲೇ ಮೃತಪಟ್ಟಿದ್ದು, ಮತ್ತೊಬ್ಬನಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ತಾಲೂಕಿನ ಕಮರವಾಡಿ ಗೇಟ್ ಬಳಿ ಭಾನುವಾರ ಸಂಜೆ ನಡೆದಿದೆ.

ತಾಲೂಕಿನ ಪಣ್ಯದಹುಂಡಿ ಗ್ರಾಮದ ನಿವಾಸಿ ಚಂದ್ರನಾಯಕ (30) ಮೃತಪಟ್ಟಿದ್ದು, ಅದೇ ಗ್ರಾಮದ ಬೈಕ್ ಚಾಲನೆ ಮಾಡುತ್ತಿದ್ದ ನರೇಂದ್ರನಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಇಬ್ಬರು ಶ್ರೀರಂಗಪಟ್ಟಣದಿಂದ ಗಾರೆ ಕೆಲಸ ಮುಗಿಸಿಕೊಂಡು ಸ್ವಗ್ರಾಮ ಪಣ್ಯದಹುಂಡಿಗೆ ಬರುತ್ತಿದ್ದಾಗ ಸಂತೇಮರಹಳ್ಳಿ ಸಮೀಪದ ಕಮರವಾಡಿ ಗೇಟ್ ಬಳಿ ಗುಂಡಿಗೆ ಬೈಕ್ ಇಳಿದು ಸೇತುವೆಗೆ ಡಿಕ್ಕಿ ಹೊಡೆದಿದೆ. ಪರಿಣಾಮ ಹಿಂಬದಿ ಸವಾರ ಚಂದ್ರನಾಯಕ ಮೃತಪಟ್ಟಿದ್ದು, ನರೇಂದ್ರನಿಗೆ ಸಣ್ಣಪುಟ್ಟ ಗಾಯಗಳಾಗಿವೆ.

ಸಂತೇಮರಹಳ್ಳಿ ಪೊಲೀಸ್ ಠಾಣೆ ಎಸ್‌ಐ ತಾಜುದ್ದೀನ್ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬೈಕ್‌ನಿಂದ ಬಿದ್ದು ಗಾಯಗೊಂಡಿದ್ದ ಸವಾರ ಸಾವು

ಕೊಳ್ಳೇಗಾಲ, ನ.10– ಬೈಕ್‌ನಿಂದ ಬಿದ್ದು ಗಾಯಗೊಂಡು ಆಸ್ಪತ್ರೆಗೆ ದಾಖಲಾಗಿದ್ದ ಸವಾರ ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿರುವ ಘಟನೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಮಂಡ್ಯ ತಾಲೂಕಿನ ಹೆಮ್ಮಿಗೆ ಗ್ರಾಮದ ನಂದೀಶ್(28) ಮೃತ ಸವಾರ. ಈತ ನ.6ರಂದು ರಾತ್ರಿ ತನ್ನ ಸ್ನೇಹಿತ ಬೈಕ್ ಚಾಲನೆ ಮಾಡುತ್ತಿದ್ದ ರಾಹುಲ್ ಜೊತೆ ಮಹದೇಶ್ವರಬೆಟ್ಟಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು. ಈ ವೇಳೆ ತಾಲೂಕಿನ ಧನಗೆರೆ–ಸರಗೂರು ಕೆರೆ ಸಮೀಪ ಹಿಂಬದಿ ಕುಳಿತ್ತಿದ್ದ ನಂದೀಶ್ ಆಯತಪ್ಪಿ ಕೆಳಗೆ ಬಿದ್ದು ಗಾಯಗೊಂಡಿದ್ದರು. ನಂತರ ಕೊಳ್ಳೇಗಾಲ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ಕೊಡಿಸಿ, ಬಳಿಕ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಆದರೆ, ಚಿಕಿತ್ಸೆ ಫಲಕಾರಿಯಾಗದೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಣ ಗಾಂಜಾ ಸಾಗಿಸುತ್ತಿದ್ದವನ ಬಂಧನ



ಮಹದೇವ

ಕೊಳ್ಳೇಗಾಲ, ನ.10–ಒಣ ಗಾಂಜಾ ಸಾಗಿಸುತ್ತಿದ್ದ ವ್ಯಕ್ತಿಯನ್ನು ಪಟ್ಟಣ ಠಾಣೆ ಪೊಲೀಸರು ಶನಿವಾರ ಬಂಧಿಸಿ, ಸುಮಾರು 2.67 ಕೆಜಿ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಹನೂರು ತಾಲೂಕಿನ ಕುರಟ್ಟಿ ಹೊಸೂರು ವ್ಯಾಪ್ತಿಯ ಈವಿಲೇಜ್ ನಿವಾಸಿ ಮಹದೇವ(47) ಬಂಧಿತ. ಈತ ಮಾರಾಟ ಮಾಡಲು ಮಂಡ್ಯಗೆ ಸಾಗಿಸುತ್ತಿದ್ದಾಗ ಪಟ್ಟಣದ ಪ್ರವಾಸಿ ಮಂದಿರ ಮುಂಭಾಗ ಸಿಕ್ಕಿಬಿದ್ದಿದ್ದಾನೆ.


ಕಾರ್ಯಾಚರಣೆಯಲ್ಲಿ ಎಸ್‌ಐ ವರ್ಷಾ, ಎಎಸ್‌ಐ ತಖೀವುಲ್ಲಾ, ಮುಖ್ಯಪೇದೆ ವೆಂಕಟೇಶ್, ರವಿಕುಮಾರ್, ಪೇದೆಗಳಾದ ಬಿಳಿಗೌಡ, ಹೆಚ್.ಸಿ. ರಾಜೀವ್, ರೋಹಿತ್, ಲಿಂಗಪ್ಪ, ಆನಂದ, ಚಾಲಕ ಮಹದೇವಪ್ರಭು ಭಾಗವಹಿಸಿದ್ದರು.

ಕೆರೆಯಲ್ಲಿ ತಾಯಿ, ಮಗನ ಶವ ಪತ್ತೆ: ಆತ್ಮಹತ್ಯೆ ಶಂಕೆ

ಚಾಮರಾಜನಗರ, ನ.10– ತಾಲೂಕಿನ ಯಾನಗಹಳ್ಳಿ ಸಮೀಪದ ಮೇಲೂರು ಕೆರೆಯಲ್ಲಿ ಶನಿವಾರ ತಾಯಿ ಮತ್ತು ಮಗನ ಶವ ಪತ್ತೆಯಾಗಿದ್ದು, ಪೊಲೀಸರು ಆತ್ಮಹತ್ಯೆ ಎಂದು ಶಂಕಿಸಿದ್ದಾರೆ.

ಹೊನ್ನಹಳ್ಳಿ ಗ್ರಾಮದ ಶಿವಮ್ಮ (35) ಹಾಗೂ ಆಕೆಯ ಮಗ ಹರೀಶ್(7) ಮೃತರು. ಶನಿವಾರ ಬೆಳಗ್ಗೆ ಶವಗಳು ತೇಲಾಡುತ್ತಿದ್ದುದ್ದನ್ನು ಸ್ಥಳೀಯರು ಗಮನಿಸಿ ಪೊಲೀಸರಿಗೆ ತಿಳಿಸಿದ್ದರು. ನಂತರ ಗ್ರಾಮಾಂತರ ಠಾಣೆ ಪೊಲೀಸರು ಸ್ಥಳ ಪರಿಶೀಲಿಸಿದ್ದರು. ಶಿವಮ್ಮಳ ಗಂಡ ಮಂಜು ಗಾರೆ ಕೆಲಸ ಮಾಡುತ್ತಿದ್ದು, ಹಣಕಾಸು ಸಮಸ್ಯೆಯಿಂದ ಶಿವಮ್ಮ ಮಗನ ಜೊತೆ ಕೆರೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪೊಲೀಸರು ಶಂಕಿಸಿದ್ದಾರೆ. ಡಿವೈಎಸ್‌ಪಿ ಲಕ್ಷ್ಮಯ್ಯ, ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಚಿಕ್ಕರಾಜಶೆಟ್ಟಿ ಮತ್ತು ಸಿಬ್ಬಂದಿ ಸ್ಥಳ ಪರಿಶೀಲಿಸಿ, ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಅರಕಲವಾಡಿ ಅಮ್ಮಣ್ಣಮ್ಮ ನಿಧನ



ಚಾಮರಾಜನಗರ, ನ.10– ತಾಲೂಕಿನ ಅರಕಲವಾಡಿ ಗ್ರಾಮದ ದಿ.ಪುಟ್ಟಸ್ವಾಮಪ್ಪನವರ ಪತ್ನಿ ಅಮ್ಮಣ್ಣಮ್ಮ(92) ಭಾನುವಾರ ಮುಂಜಾನೆ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಪುತ್ರನನ್ನು ಅಗಲಿದ್ದಾರೆ. ಭಾನುವಾರ ಮಧ್ಯಾಹ್ನ ಮತರ ತೋಟದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಮಲೆಯಾಳಿ ಸಮಾಜದಿಂದ ಸಂಭ್ರಮದ ಓಣಂ ಆಚರಣೆ



ಚಾಮರಾಜನಗರದ ಜೋಡಿರಸ್ತೆಯ ಸಂತಪೌಲರ ಸಮುದಾಯ ಭವನದಲ್ಲಿ ನಡೆದ ಓಣಂ ಆಚರಣೆಯಲ್ಲಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಚಾಮರಾಜನಗರ, ನ.10–ಜಿಲ್ಲಾ ಮಲಯಾಳಿ ಸಮಾಜದಿಂದ ನಗರದ ಜೋಡಿರಸ್ತೆಯ ಸಂತಪೌಲರ ಸಮುದಾಯ ಭವನದಲ್ಲಿ ಭಾನುವಾರ ಸಂಭ್ರಮದಿಂದ ಓಣಂ ಆಚರಿಸಲಾಯಿತು.

ಓಣಂ ಹಬ್ಬದ ವಿಶೇಷತೆಯಾದ ವಿವಿಧ ಬಣ್ಣದ ಹೂವುಗಳ ಆಕರ್ಷಕ ರಂಗೋಲಿ, ಚಂಡೆ ಮದ್ದಳೆಯ ನಾದ ಮನ ಸೆಳೆಯಿತು. ದೀಪ ಬೆಳಗಿಸಿ ಸಮಾರಂಭ ಉದ್ಘಾಟಿಸಿದ ಜಿಲ್ಲಾ ಮಲೆಯಾಳಿ ಸಮಾಜದ ಅಧ್ಯಕ್ಷ ರಾಜು ವರ್ಗೀಸ್ ಮಾತನಾಡಿ, ಜಾತಿ, ಮತ ಭೇದವಿಲ್ಲದೆ ಎಲ್ಲಾ ಮಲೆಯಾಳಿ ಭಾಷಿಕರು ಒಂದೆಡೆ ಸೇರಿ ಓಣಂ ಆಚರಿಸುತ್ತಿದ್ದಾರೆ. ಇತರೆ ಸಮಾಜ, ಭಾಷೆಯವರು ಒಟ್ಟುಗೂಡುವುದರಿಂದ ಮಲೆಯಾಳಿ ಕನ್ನಡಿಗರ ಸಮ್ಮಿಲನವಾಗುತ್ತದೆ. ಕರ್ನಾಟಕದಲ್ಲಿ ಜೀವನ ಕಟ್ಟಿಕೊಂಡಿರುವ ಕೇರಳಿಗರು ಕನ್ನಡದಲ್ಲೇ ವ್ಯವಹರಿಸುತ್ತಾರೆ ಎಂದರು.

ಮಲೆಯಾಳಿ ಸಮಾಜದ ಮೈಸೂರು ವಿಭಾಗದ ಸಂಯೋಜಕ ಪ್ರದೀಪ್ ಕುಮಾರ್ ಮಾತನಾಡಿ, ಮಲೆಯಾಳಂ ಮಿಷನ್ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕರ್ನಾಟಕದಲ್ಲಿ ನೆಲೆಸಿರುವ ಪರಭಾಷಿಗರಿಗೆ ಕನ್ನಡ ಕಲಿಸುವ ಯೋಜನೆ ರೂಪಿಸಿರುವಂತೆ ಕೇರಳ ಸರ್ಕಾರ ದೇಶದ ಎಲ್ಲೆಡೆ ನೆಲೆಸಿರುವ ಪರಭಾಷಿಗರಿಗೆ ಮಲೆಯಾಳಂ ಮಿಷನ್ ಹೆಸರಿನಲ್ಲಿ ಮಲೆಯಾಳಿ ಭಾಷೆ ಕಲಿಸುವ ಬೃಹತ್ ಕಾರ್ಯಕ್ರಮ ರೂಪಿಸಿ ಜಾರಿಗೊಳಿಸಿದೆ. ಇದು ಆನ್‌ಲೈನ್‌ನಲ್ಲೂ ಲಭ್ಯವಿದೆ. ಇದೀಗ ವಿದೇಶಗಳಿಗೂ ವಿಸ್ತರಿಸಲಾಗಿದೆ. ಕರ್ನಾಟಕದಲ್ಲಿ ಬದುಕು ಕಟ್ಟಿಕೊಂಡಿರುವ ಎಲ್ಲಾ ಕೇರಳಿಗರೂ ಕನ್ನಡ ಕಲಿತು ವ್ಯವಹರಿಸಬೇಕು. ಸೌಹಾರ್ದತೆ ಕಾಪಾಡಿಕೊಳ್ಳಬೇಕೆಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸಮಾಜ ಸೇವಾ ಕಾರ್ಯ ಮಾಡುತ್ತಿರುವ ವೈದ್ಯ ಬಸವರಾಜೇಂದ್ರ, ಜಿಲ್ಲಾ ರಾಜ್ಯೋತ್ಸವ ಪುರಸ್ಕೃತ ಪತ್ರಕರ್ತ ಅಬ್ರಹಾಂ ಡಿ.ಸಿಲ್ವ ಅವರನ್ನು ಸನ್ಮಾನಿಸಲಾಯಿತು. ವಿಶೇಷ ದೀಪ ನೃತ್ಯ, ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಿ, ಪ್ರತಿಭಾ ಪುರಸ್ಕಾರ ನೀಡಲಾಯಿತು. ಮುಖಂಡರಾದ ಸುಧಾ ಗಣೇಶ್, ರಾಬರ್ಟ್, ಮಂಜು ಜಸ್ಟಿನ್, ಅಜಿತ್, ಸಜು, ವೇಣು, ಪ್ರಕಾಶ್, ಶಶಿ, ರೆಜಿ ಅಜಿತ್, ಸಿಬಿನ್, ಮುರಳಿ, ವಿಜಯಕುಮಾರ್ ಇದ್ದರು.



ಶಾಸಕ ಎ.ಆರ್. ಕೃಷ್ಣಮೂರ್ತಿಗೆ ಅಭಿನಂದನೆ...

ಕೊಳ್ಳೇಗಾಲದ ಜನನಿ ಆಸ್ಪತ್ರೆಗೆ ಮೈಸೂರಿನ ಅಪೋಲೊ ಬಿಜಿಎಸ್ ಆಸ್ಪತ್ರೆ ವತಿಯಿಂದ ನೀಡಿರುವ ಆಂಬ್ಯುಲೆನ್ಸ್ ಅನ್ನು ಸಾರ್ವಜನಿಕ ಸೇವೆಗೆ ಸಮರ್ಪಿಸಿದ ಶಾಸಕ ಎ.ಆರ್. ಕೃಷ್ಣಮೂರ್ತಿ ಅವರನ್ನು ಜನನಿ ಆಸ್ಪತ್ರೆ ಸಂಸ್ಥಾಪಕ ಡಾ.ಪ್ರವೀಣ್ ಕುಮಾರ್ ಅಭಿನಂದಿಸಿದರು. ಡಾ.ಅಮನ್ ನಾಯಕ್, ಡಾ.ಅರುಣ್ ಶ್ರೀನಿವಾಸ್, ಡಾ.ಗೋಪಾಲ್ ಇನ್ನಿತರರಿದ್ದರು.

ಮೈಸೂರು ಮಿತ್ರ

ಅಂಗವಿಕಲ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿಗೆ ಸಹಕಾರ



ಹುಣಸೂರು, ನ.10– ತಾಲೂಕಿನಲ್ಲಿ 409 ವಿದ್ಯಾರ್ಥಿಗಳು ಅಂಗವಿಕಲತೆಯಿಂದ ಬಳಲುತ್ತಿದ್ದು, ಅವರಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ ಉಚಿತ ಸಾಧನ ಸಲಕರಣೆ ವಿತರಿಸಿ ಶೈಕ್ಷಣಿಕ ಪ್ರಗತಿಗೆ ಸಹಕರಿಸಿದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಪಿ.ಮಹದೇವ್ ತಿಳಿಸಿದರು.

ನಗರದಲ್ಲಿ ನಡೆದ ವಿಕಲಾಂಗ ವಿದ್ಯಾರ್ಥಿಗಳ ಉಚಿತ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದ ಅವರು, ತಾಲೂಕಿನಲ್ಲಿ 1 ರಿಂದ 10ನೇ ತರಗತಿವರೆಗೆ ಒಟ್ಟು 409 ವಿದ್ಯಾರ್ಥಿಗಳು ಅಂಗವೈಕಲ್ಯಕ್ಕೆ ಒಳಗಾಗಿದ್ದು, ಇವರಿಗೆ ವಿಶೇಷ ಆದ್ಯತೆ ಮೇಲೆ ಕಾಲ ಕಾಲಕ್ಕೆ ತಪಾಸಣೆ ಮತ್ತು ಶೈಕ್ಷಣಿಕ ಪ್ರಗತಿಗೆ ವಿಶೇಷ ತರಬೇತಿ ನೀಡುವ ಕೆಲಸ ನಡೆದಿದೆ ಎಂದರು.

ಈ ವಿದ್ಯಾರ್ಥಿಗಳು ಪಾರ್ಶ್ವವಾಯು, ಬಹುವಿಕಲತೆ, ಶ್ರವಣದೋಷ, ಅಂಧತ್ವಗಳಿಂದ ಬಳಲುತ್ತಿದ್ದಾರೆ. ಈ ವಿದ್ಯಾರ್ಥಿಗಳಿಗೆ ರಾಷ್ಟ್ರೀಯ ಬಾಲಸ್ವಾಸ್ಥ್ಯ ಯೋಜನೆ ಅಡಿ ಜೆಎಸ್‌ಎಸ್ ಮತ್ತು ಮೇಟಗಳ್ಳಿ ಶ್ರವಣದೋಷ ಆಸ್ಪತ್ರೆಯಲ್ಲಿ ತಪಾಸಣೆ ನಡೆಸಲಾಗುತ್ತಿದೆ. ಅಂಗವಿಕಲ ವಿದ್ಯಾರ್ಥಿಗಳಿಗೆ ಉಚಿತ ಸಾಧನ ಸಲಕರಣೆಯನ್ನು ಅಲಿಂ ಕೋ ಸಂಸ್ಥೆ ಪ್ರಾಯೋಜಿಸಿದೆ ಎಂದರು.

ಶಿಬಿರದಲ್ಲಿ ಹುಣಸೂರು ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಮಹದೇವ ಸ್ವಾಮಿ, ಡಾ.ಶಿವಪ್ರಕಾಶ್, ಶಿಕ್ಷಣ ಇಲಾಖೆ ಸಂಪನ್ಮೂಲ ವ್ಯಕ್ತಿ ತ್ರಿನೇತ್ರ, ಪ್ರಭಾಕರ್, ಸೋಮಶೇಖರ್, ವೀರಭದ್ರಪ್ಪ ಇದ್ದರು.

ನಾಳೆ ಹೆಚ್.ಡಿ.ಕೋಟೆಗೆ ಸಿಎಂ ಸಿದ್ದರಾಮಯ್ಯ ಭೇಟಿ

ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ, ವಾಲ್ಮೀಕಿ ಜಯಂತಿಯಲ್ಲಿ ಭಾಗಿ: ಶಾಸಕ ಅನಿಲ್ ಮಾಹಿತಿ

ಹೆಚ್.ಡಿ.ಕೋಟೆ, ನ.10– ಪಟ್ಟಣದಲ್ಲಿ ನ.12ರಂದು ನಡೆಯುವ ಮಹರ್ಷಿ ವಾಲ್ಮೀಕಿ ಜಯಂತಿ ಹಾಗೂ ಅಂದಾಜು 450 ಕೋಟಿ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಭೇಟಿ ನೀಡುವ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಅವರು ಅಧಿಕಾರಿಗಳೊಂದಿಗೆ ಕಾರ್ಯಕ್ರಮದ ಸಿದ್ಧತೆ ಪರಿಶೀಲಿಸಿದರು.

ನಂತರ ಮಾತನಾಡಿದ ಅವರು ಪಟ್ಟಣದ ಜೂನಿಯರ್ ಕಾಲೇಜು ಆವರಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಅದ್ದೂರಿಯಾಗಿ ನಡೆಯಲಿದ್ದು, ಪ್ರಸನ್ನನಂದಾಪುರಿ ಸ್ವಾಮೀಜಿ ಅವರು ಸಾನಿಧ್ಯ ವಹಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭಾಗವಹಿಸಿ ವಿವಿಧ ಇಲಾಖೆಯ 450 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ. ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಹಾಗೂ ಸಮಾಜ ಕಲ್ಯಾಣ, ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.





ಶಾಸಕ ಅನಿಲ್ ಅಧಿಕಾರಿಗಳೊಂದಿಗೆ ಸ್ಥಳ ಪರಿಶೀಲಿಸಿದರು. ಮತ್ತೊಂದು ಚಿತ್ರದಲ್ಲಿ ತಾಲೂಕಿನ ಕೆರೆಹಾಡಿ ಆದಿವಾಸಿಗಳೊಂದಿಗೆ ಚರ್ಚೆ ನಡೆಸಿದರು

ಮಹದೇವಪ್ಪ ವಾಲ್ಮೀಕಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಲಿದ್ದಾರೆ. ಸಚಿವರಾದ ಕೆ.ಎಸ್.ರಾಜಣ್ಣ ಕೆ.ವೆಂಕಟೇಶ್ ಅವರು ಸ್ತಬ್ದ ಚಿತ್ರಗಳಿಗೆ ಬಹುಮಾನ ವಿತರಿಸಲಿದ್ದಾರೆ ಎಂದರು.

> ವಾಲ್ಮೀಕಿ ಜಯಂತಿ ಅಂಗವಾಗಿ ವಿವಿಧ ಗ್ರಾಮಗಳಿಂದ ಸ್ತಬ್ಧ ಚಿತ್ರಗಳು ಭಾಗವಹಿಸಲಿದ್ದು, ಮೊದಲ ಬಹುಮಾನ 50 ಸಾವಿರ, ಎರಡನೇ ಬಹುಮಾನ 25 ಸಾವಿರ, ಮೂರನೇ ಬಹುಮಾನ 10 ಸಾವಿರ ರೂಪಾಯಿ ನೀಡಲಾಗುವುದು. - ಅನಿಲ್ ಶಾಸಕ.

ತಾಲೂಕಿನ ಜನತೆ ಕಾರ್ಯಕ್ರಮದಲ್ಲಿ ಪಕ್ಷಾತೀತ, ಜಾತ್ಯಾತೀತವಾಗಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ವಾಲ್ಮೀಕಿ ಜಯಂತಿ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ಹಾಡಿಗೆ ಭೇಟಿ: ಕಾರ್ಯಕ್ರಮದ ಬಳಿಕ ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಾಲೂಕಿನ ಕೆರೆ ಹಾಡಿಯ ಆದಿವಾಸಿಗಳ ಜೊತೆ ಸಂವಾದ ನಡೆಸಲಿರುವ ಹಿನ್ನೆಲೆಯಲ್ಲಿ ಶಾಸಕ ಅನಿಲ್ ಕೆರೆ ಹಾಡಿಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ವೇಳೆ ಹಾಡಿ ನಿವಾಸಿಗಳೊಂದಿಗೆ ಮಾತನಾಡಿದ ಶಾಸಕರು ಸಿಎಂ ಸಿದ್ದರಾಮಯ್ಯ ಮಂಗಳವಾರ ಹಾಡಿಗೆ ಭೇಟಿ ನೀಡಲಿದ್ದು, ನಿಮ್ಮ ಸಮಸ್ಯೆಗಳನ್ನು ಅವರಿಗೆ ಮನವರಿಕೆ ಮಾಡಿಕೊಡುವಂತೆ ತಿಳಿಸಿದರು.

ಈ ವೇಳೆ ಹುಣಸೂರು ಉಪವಿಭಾಗಾಧಿಕಾರಿ ವಿಜಯಕುಮಾರ್, ತಹಸೀಲ್ದಾರ್ ಶ್ರೀನಿವಾಸ್, ಡಿವೈಎಸ್‌ಪಿ ಗೋಪಾಲಕೃಷ್ಣ, ಸಿಪಿಐ ಶಬ್ಬೀರ್ ಹುಸೇನ್, ಇಓ ಧರಣೇಶ್, ಎಇಇಗಳಾದ ಗಣೇಶ್, ರಾಮೇಗೌಡ, ಕೃಷಿ ಅಧಿಕಾರಿ ಜಯರಾಮ್, ತೋಟಗಾರಿಕೆ ಇಲಾಖೆಯ ನೇತ್ರಾವತಿ, ಸಿಡಿಪಿಓ ದೀಪ, ರಾಮಸ್ವಾಮಿ, ಗಿರಿಜನ ಜಿಲ್ಲಾ ಸಮನ್ವಯಾಧಿಕಾರಿ ಮಲ್ಲೇಶ್, ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿ ಮಹೇಶ್, ಪಶು ವೈದ್ಯಾಧಿಕಾರಿ ಪ್ರಸನ್ನ ಕುಮಾರ್, ಶಶಿಕಲಾ, ಜಯ ಕರ್ನಾಟಕ ರಾಜ್ಯ ಉಪಾಧ್ಯಕ್ಷ ಸತೀಶ್ ಗೌಡ, ಮೈಮುಲ್ ನಿರ್ದೇಶಕ ಈರೇಗೌಡ, ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಚಿಕ್ಕಮಾದು ಅಭಿಮಾನಿ ಬಳಗದ ಅಧ್ಯಕ್ಷ ಜಿನ್ನಹಳ್ಳಿ ರಾಜನಾಯಕ, ಸೋಮೇಶ್, ಡಿಸಿಸಿ ಸದಸ್ಯ ಪರಶಿವ ಮೂರ್ತಿ, ಮುಖಂಡರಾದ ನಾಗನಹಳ್ಳಿ ಪ್ರದೀಪ, ಗಣೇಶ್ ಆಚಾರ್, ಹೊಂಡಾ ನಯಾಜ್, ಶಫಿ ಇನ್ನಿತರರಿದ್ದರು.

ಪ್ರತಿಭಾ ಪುರಸ್ಕಾರ ವಿದ್ಯಾರ್ಥಿಗಳ ಜವಾಬ್ದಾರಿ ಹೆಚ್ಚಿಸಲಿದೆ

ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ಆಲಗೂಡು ರಾಮಚಂದ್ರ



ತಿ.ನರಸೀಪುರ ಪಟ್ಟಣದಲ್ಲಿ ತಾಲೂಕು ಗಾಣಿಗರ ಸಂಘದ ವತಿಯಿಂದ ಆಯೋಜಿಸಲಾಗಿದ್ದ ಪ್ರತಿಭಾ ಪುರಸ್ಕಾರ ಹಾಗೂ ಅಭಿನಂದನಾ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ತಿ.ನರಸೀಪುರ, ನ.10– ಪ್ರತಿಭಾ ಪುರಸ್ಕಾರಗಳು ವಿದ್ಯಾರ್ಥಿಗಳ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಲಿದ್ದು, ಇದು ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿದೆ ಎಂದು ತಾಲೂಕು ಗಾಣಿಗರ ಸಂಘದ ಅಧ್ಯಕ್ಷ ಆಲಗೂಡು ರಾಮಚಂದ್ರ ತಿಳಿಸಿದರು.

ಪಟ್ಟಣದ ದಳವಾಯಿ ಅಗ್ರಹಾರ ಬೀದಿಯಲ್ಲಿರುವ ತಾಲೂಕು ಗಾಣಿಗರ ಸಂಘ (ಸೋಸಲೆ)ದಲ್ಲಿ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಳೆದ ಹಲವು ವರ್ಷಗಳಿಂದ ನಿರಂತರವಾಗಿ ಸಂಘದಿಂದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಆಯೋಜಿಸಿಕೊಂಡು ಬರಲಾಗುತ್ತಿದೆ ಅನಿವಾರ್ಯ ಕಾರಣಗಳಿಂದ ಸಾಮೂಹಿಕ ವಿವಾಹ ಕಾರ್ಯಕ್ರಮ ಸ್ಥಗಿತಗೊಂಡಿದೆ ಆದರೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಿರಂತರವಾಗಿ ಸಾಗಿದೆ ಎಂದರು.

ಪ್ರತಿಯೊಂದು ಮಕ್ಕಳಲ್ಲೂ ಒಂದೊಂದು ಪ್ರತಿಭೆ ಇರುತ್ತದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಕರು ಹಾಗೂ ಶಿಕ್ಷಕರು ಗುರುತಿಸಿ ಪ್ರೋತ್ಸಾಹಿಸಬೇಕು. ಆಗ ಇನ್ನಷ್ಟು ಸಾಧನೆ ಮಾಡಲು ಸಹಕಾರಿಯಾಗಲಿದೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ವಿದ್ಯಾರ್ಥಿಗಳ ಜೀವನದ ಪ್ರಮುಖ ತಿರುವಿನ ಘಟ್ಟ, ಇಲ್ಲಿ ಯಶಸ್ಸು ಸಾಧಿಸಿದರೆ ಮುಂದೆ ಸುಲಭವಾಗಿ ಗುರಿ ಮುಟ್ಟಬಹುದು ಎಂದರು.

ಜೀವನದಲ್ಲಿ ಕಠಿಣ ಪರಿಶ್ರಮ ಮತ್ತು ಗುರಿ ಇದ್ದಾಗ ಮಾತ್ರ ಯಶಸ್ಸು ಗಳಿಸಲು ಸಾಧ್ಯ ಎಂದ ಅವರು, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ವಿದ್ಯಾರ್ಥಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಹಲವು ಅವಕಾಶಗಳಿವೆ. ಆದರೆ ಅದನ್ನು ಪಡೆದುಕೊಳ್ಳುವತ್ತ ಕಠಿಣ ಪರಿಶ್ರಮ ಮತ್ತು ಸ್ಪರ್ಧಾತ್ಮಕ ಚಿಂತನೆ ಅಗತ್ಯವಿದೆ ಎಂದರು.

ರಾಜ್ಯದಲ್ಲಿ ನಮ್ಮ ಮಕ್ಕಳಿಗೆ ಹಲವು ಅವಕಾಶಗಳಿದ್ದು, ಅದರ ಸದುಪಯೋಗ ಪಡೆಯುವ ಕೆಲಸ ಆಗಬೇಕು. ಮುಂದಿನ 20 ವರ್ಷಗಳಿಗೆ ಬೇಕಾದ ಉದ್ಯೋಗಗಳು ಭಾರತದಲ್ಲೇ ಇದ್ದು, ಅದಕ್ಕೆ ಬೇಕಾದ ಶಿಕ್ಷಣ ಪಡೆಯುವತ್ತ ನಮ್ಮ ಮಕ್ಕಳು ಪ್ರಯತ್ನಿಸಬೇಕು. ಮಕ್ಕಳು ತಮ್ಮನ್ನು ಹೆಚ್ಚು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ತೊಡಗಿಸಿಕೊಂಡಾಗ ಮಾತ್ರ ಉತ್ತಮ ಫಲಿತಾಂಶದೊಂದಿಗೆ ಒಳ್ಳೆಯ ಉದ್ಯೋಗ ಪಡೆಯಲು ಸಾಧ್ಯ. ಆ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಹೊಸ ಶಿಕ್ಷಣ ನೀತಿಯಂತೆ ಚಿಕ್ಕಂದಿನಲ್ಲೇ ಇದಕ್ಕೆ ಸಜ್ಜುಗೊಳ್ಳಬೇಕು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಗಾಣಿಗ ಸಮಾಜದ ಮುಖಂಡ ವೆಂಕಟರಮಣಶೆಟ್ಟಿ, ವಿದ್ಯಾರ್ಥಿಗಳು ತಮ್ಮ ಭವಿಷ್ಯ ರೂಪಿಸಿಕೊಳ್ಳುವತ್ತ ಗಮನ ಹರಿಸಬೇಕು. ಬೇಡದ ವಿಷಯಗಳತ್ತ ಚಿತ್ತ ಹರಿಸದೆ ಏಕಾಗ್ರತೆಯಿಂದ ಶಿಕ್ಷಣ ಪಡೆಯಲು ಮುಂದಾಗಬೇಕು. ಮೊಬೈಲ್ ನಮಗೆ ಅನಿವಾರ್ಯ ಹೊರತು ಅದೇ ಜೀವನ ಅಲ್ಲ. ಹಾಗಾಗಿ ಪೋಷಕರು ತಮ್ಮ ಮಕ್ಕಳಿಗೆ ಹೆಚ್ಚಾಗಿ ಮೊಬೈಲ್ ನೀಡದೇ ಅವರ ವಿದ್ಯಾಭ್ಯಾಸಕ್ಕೆ ಬೇಕಾದ ಅವಶ್ಯಕತೆಗಳನ್ನು ಪೂರೈಸಿ ಅವರು ಉನ್ನತ ವ್ಯಾಸಂಗ ಮಾಡಿ ತಮ್ಮ ಭವಿಷ್ಯ ರೂಪಿಸಿಕೊಳ್ಳಲು ಸಹಕಾರ ಹಾಗೂ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ತೋರಿದ 26 ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಸಂಘದ ಗೌರವಾಧ್ಯಕ್ಷ ಸೋಸಲೆ ಮಹದೇವಶೆಟ್ಟಿ, ಕಾರ್ಯದರ್ಶಿ ಆರ್.ರಾಮು, ಖಜಾಂಚಿ ಎಂ.ಮಹದೇವಸ್ವಾಮಿ, ಸಂಘಟನಾ ಕಾರ್ಯದರ್ಶಿ ಶಾಮಿಯಾನ ಶಿವರಾಜು, ಸುರೇಶ್, ಶಿಕ್ಷಕ ಮಹದೇವಪ್ಪ, ಸಂಘದ ಮಾಜಿ ಸಹಕಾರ್ಯದರ್ಶಿ ಸಿ.ಜಯಣ್ಣ, ಸಮಾಜ ಸೇವಕ ಗಿರಿ ಮಲ್ಲೇಶ್, ಆರ್.ತಮ್ಮಯ್ಯ ಸೇರಿದಂತೆ ಸಮಾಜದ ಮುಖಂಡರು, ಪೋಷಕರು ಹಾಜರಿದ್ದರು.

ಶೌಚಾಲಯ ವಂಚಿತ ದೊಡ್ಡಕವಲಂದೆ ಶಾಲೆ

ಶೌಚಾಲಯ ನಿರ್ಮಿಸದಿದ್ದರೆ ವಿದ್ಯಾರ್ಥಿಗಳಿಂದ ಶಾಲೆ ತೊರೆಯುವ ನಿರ್ಧಾರ



ನಂಜನಗೂಡು, ನ.10– ತಾಲೂಕಿನ ದೊಡ್ಡಕವಲಂದೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಯಲೇ ಶೌಚಾಲಯವಾಗಿದ್ದು, ವಿದ್ಯಾರ್ಥಿಗಳು ಶೌಚಾಲಯ ವ್ಯವಸ್ಥೆ ಕಲ್ಪಿಸದಿದ್ದರೆ ಶಾಲೆ ತೊರೆಯಲು ನಿರ್ಧರಿಸಿದ್ದಾರೆ.

ದೇಶದ ಪ್ರತಿ ಹಳ್ಳಿಗಳಲ್ಲಿ ಶೌಚಾಲಯ ವ್ಯವಸ್ಥೆ ಕಲ್ಪಿಸಬೇಕು ಎಂಬುದು ಪ್ರಧಾನಿ ಮೋದಿ ಅವರ ಕನಸು. ಆದರೆ ತಾಲೂಕಿನ ದೊಡ್ಡಕವಲಂದೆ ಗ್ರಾಮದ ಸರ್ಕಾರಿ ಶಾಲೆ ವಿದ್ಯಾರ್ಥಿನಿಯರ ಪರಿಸ್ಥಿತಿ ಹೇಳ ತೀರದಾಗಿದೆ. ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ ವಿದ್ಯಾರ್ಥಿನಿಯರು ಶೌಚಾಲಯಕ್ಕೆಂದು ಒಂದು ಕಿಲೋಮೀಟರ್ ದೂರ ಕ್ರಮಿಸಿ ನಿರ್ಜನ ಪ್ರದೇಶಕ್ಕೆ ತೆರಳಬೇಕಿದೆ. ಈ ಪ್ರದೇಶದಲ್ಲಿ ವಿದ್ಯಾರ್ಥಿನಿಯರಿಗೆ ರಕ್ಷಣೆ ನೀಡುವವರು ಯಾರು ಎಂಬ ಪ್ರಶ್ನೆಯು ಉದ್ಭವಿಸಿದೆ. ಶೌಚಾಲಯ ವ್ಯವಸ್ಥೆ ಕಲ್ಪಿಸುವಂತೆ ಶಾಲೆ ಮುಖ್ಯೋಪಾಧ್ಯಾಯ ಸಿಸಿಲಿಯ ಮೇರಿ ಕೌಲಂದೆ ಪಿಡಿಓ ಹಾಗೂ ಶಿಕ್ಷಣ ಇಲಾಖೆ ತಾಲೂಕು ಅಧಿಕಾರಿಗಳಿಗೆ ನಿರಂತರವಾಗಿ ಪತ್ರ ಬರೆದಿದ್ದರೂ ಸಹ ಶೌಚಾಲಯ ವ್ಯವಸ್ಥೆ ಕಲ್ಪಿಸಲು ಅಧಿಕಾರಿಗಳು ಮುಂದಾಗಿಲ್ಲ. ಗ್ರಾಪಂನಿಂದ ಕಳೆದ 2 ವರ್ಷಗಳ ಹಿಂದೆ ಶಾಲೆಯಲ್ಲಿ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ನರೇಗಾ ಯೋಜನೆ ಅಡಿ 3.30 ಲಕ್ಷ ರೂ. ವೆಚ್ಚದಲ್ಲಿ ಗುದ್ದಲಿ ಪೂಜೆ ನೆರವೇರಿಸಿ ಅಡಿಪಾಯ ಹಾಕಲಾಗಿತ್ತು ಆದರೆ ಅಧಿಕಾರಿಗಳ ಹಿತಾಸಕ್ತಿ ಕೊರತೆಯಿಂದ ಕಾಮಗಾರಿ ಅಡಿಪಾಯಕಷ್ಟೇ ಸೀಮಿತಗೊಳಿಸಿ ನಾಪತ್ತೆಯಾಗಿದ್ದಾರೆ. ಇದರಿಂದ ಶಿಕ್ಷಕಿಯರು ಸಹ ಶೌಚಾಲಯ ವ್ಯವಸ್ಥೆ ಇಲ್ಲದೆ ಕಾರ್ಯ ನಿರ್ವಹಿಸುವ ಪರಿಸ್ಥಿತಿ ನಿರ್ಮಾಣವಾಗಿದೆ.

ಶಾಲೆ ಮುಖ್ಯೋಪಾಧ್ಯಾಯ ಸಿಸಿಲಿಯ ಮೇರಿ ಮಾತನಾಡಿ, ಶಾಲೆಯಲ್ಲಿ 1 ರಿಂದ 7ನೇ ತರಗತಿವರೆಗೆ ನೂರಕ್ಕೂ ಹೆಚ್ಚು ಮಕ್ಕಳಿದ್ದಾರೆ ಆದರೆ ಶಾಲೆಯಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದಿರುವುದರಿಂದ ವಿದ್ಯಾರ್ಥಿನಿಯರು ಬಯಲಲ್ಲೇ ಶೌಚ ಕಾರ್ಯ ಮುಗಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಶಾಲೆಯಲ್ಲಿ ಕಾರ್ಯ ನಿರ್ವಹಿಸುವ ಮಹಿಳಾ ಶಿಕ್ಷಕಿಯರು ಇದರಿಂದ ಹೊರತಾಗಿಲ್ಲ. ಇದು ನಾಗರಿಕ ಸಮಾಜ ತಲೆ ತಗ್ಗಿಸುವಂತಹ ವಿಚಾರವಾಗಿದೆ. ಈ ಕೂಡಲೇ ಅಧಿಕಾರಿಗಳು ಜನಪ್ರತಿನಿಧಿಗಳು ಕ್ರಮವಹಿಸಿ ಶಾಲೆಯಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಡಲು ಕ್ರಮವಹಿಸಬೇಕಿದೆ.


ಶಾಸಕ ದರ್ಶನ್ ಮಾತನಾಡಿ, ತಾಲೂಕಿನ ದೊಡ್ಡ ಕವಲಂದೆ ಸರ್ಕಾರಿ ಶಾಲೆಯಲ್ಲಿ ಗ್ರಾಪಂನಿಂದ ಶೀಘ್ರ ಶೌಚಾಲಯ ನಿರ್ಮಿಸಿಕೊಡಲು ಕ್ರಮವಹಿಸುತ್ತೇನೆ ಎಂದರು.

ಆರ್.ಎಸ್. ಸಂದೀಪ್‌ಗೆ ಪಿಎಚ್.ಡಿ ಪದವಿ



ಮೈಸೂರು: ಡಾ. ಎ.ಸಿ. ಪ್ರಮೀಳಾ ಅವರ ಮಾರ್ಗದರ್ಶನದಲ್ಲಿ ಆರ್.ಎಸ್. ಸಂದೀಪ್ ಅವರು ವಾಣಿಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಸದೃಢ ಆರೋಗ್ಯಕ್ಕಾಗಿ ವಾಕಥಾನ್ ನಡಿಗೆ



ಹುಣಸೂರು, ನ.10– ನಗರದಲ್ಲಿ ಹುಣಸೂರು ಗ್ರಾಮಾಂತರ ಪೊಲೀಸ್ ಠಾಣೆ ವತಿಯಿಂದ 'ಸದೃಢ ಆರೋಗ್ಯಕ್ಕಾಗಿ ವಾಕಥಾನ್ ನಡಿಗೆ' ಕಾರ್ಯಕ್ರಮ ಆಯೋಜಿಸಲಾಗಿತ್ತು.

ನಗರದ ಗ್ರಾಮಾಂತರ ಠಾಣೆಯಿಂದ ತಾಲೂಕಿನ ರಾಮೇನಹಳ್ಳಿ ಬೆಟ್ಟದವರೆಗೆ 4 ಕಿಮೀ ವಾಕಥಾನ್ ನಡೆಯಿತು. ಈ ವೇಳೆ ಪೊಲೀಸ್ ಅಧೀಕ್ಷಕ ಗೋಪಾಲಕೃಷ್ಣ, ಪೊಲೀಸ್ ನಿರೀಕ್ಷಕ ಎನ್.ಮುನಿಯಪ್ಪ ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ನಗರದ ಅಪೋಲೋ ಆಸ್ಪತ್ರೆ ಡಾ.ಲಿಖಿತ್ ಅವರು ಪೊಲೀಸ್ ಸಿಬ್ಬಂದಿಗೆ ಉತ್ತಮ ಆರೋಗ್ಯ ಪಡೆಯಲು ಅನುಸರಿಸಬೇಕಾದ ಸಲಹೆ ಸೂಚನೆಗಳನ್ನು ನೀಡಿದರು. ಈ ವೇಳೆ ಈ ವೇಳೆ ಎಸ್‌ಐ ರಾಧ, ಶ್ರೀರಾಮ್ ಇನ್ನಿತರರಿದ್ದರು.

ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಪಡೆದಿರುವ

ಬಿಪಿಎಲ್ ಕಾರ್ಡ್‌ಗಳು ಎಪಿಎಲ್ ಆಗಿ ಬದಲಾವಣೆ



ಬೆಟ್ಟದಪುರ, ನ.10– ಪಿರಿಯಾಪಟ್ಟಣ ತಾಲೂಕು ಆಹಾರ ಇಲಾಖೆ ಕಳೆದ ಆಗಸ್ಟ್‌ನಿಂದ ಅಕ್ಟೋಬರ್‌ವರೆಗೆ ಮಾಹಿತಿ ಕಲೆ ಹಾಕಿದ್ದು, ಸರ್ಕಾರದ ನಿಯಮಕ್ಕೆ ವಿರುದ್ಧವಾಗಿ ಬಿಪಿಎಲ್ ಕಾರ್ಡ್‌ಗಳನ್ನು ಹೊಂದಿ ಸೌಲಭ್ಯಗಳನ್ನು ಪಡೆಯುತ್ತಿರುವ ಹಲವು ಕಾರ್ಡುಗಳನ್ನು ಎಪಿಎಲ್ ಕಾರ್ಡ್‌ಗಳಾಗಿ ಪರಿವರ್ತನೆ ಮಾಡಿ ಕಟ್ಟುನಿಟ್ಟಿನ ಕ್ರಮ ಜರುಗಿಸಿದೆ.

ತಾಲೂಕಿನಲ್ಲಿ ಸರ್ಕಾರಿ ನೌಕರಿ ಹೊಂದಿರುವ 15, ಆದಾಯ ತೆರಿಗೆ ಪಾವತಿಸುತ್ತಿರುವ 261 ಬಿಪಿಎಲ್ ಕಾರ್ಡ್ ಹಾಗೂ 1.20 ಲಕ್ಷಕ್ಕಿಂತ ಹೆಚ್ಚಿನ ವಾರ್ಷಿಕ ಆದಾಯ ಹೊಂದಿರುವ 82 ಎಎವೈ(ಅಂತ್ಯೋದಯ) ಪಡಿತರ ಚೀಟಿಗಳು ಎಪಿಎಲ್ ಚೀಟಿಗಳಾಗಿ ಪರಿವರ್ತನೆಗೊಂಡಿದೆ. ಅದೇ ರೀತಿ 5189 ಬಿಪಿಎಲ್ ಕಾರ್ಡ್‌ಗಳ ಕುಟುಂಬ 1.20 ಲಕ್ಷಕ್ಕಿಂತ ಹೆಚ್ಚಿನ ಆದಾಯ ಹೊಂದಿದ್ದು, ಆ ಕಾರ್ಡುಗಳನ್ನು ಇಲಾಖೆ ಪರಿಶೀಲನೆಯಲ್ಲಿ ಇಟ್ಟಿದೆ. ಅಲ್ಲದೇ ಕಳೆದ 6 ತಿಂಗಳಿಂದ ಪಡಿತರ ಪಡೆಯದ 130 ಎಎವೈ ಹಾಗೂ 1537 ಬಿಪಿಎಲ್ ಸೇರಿದಂತೆ ಒಟ್ಟು 1667 ಕಾರ್ಡುಗಳನ್ನು ಇಲಾಖೆ ಅನರ್ಹಗೊಳಿಸಿದೆ. ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಬಿಪಿಎಲ್ ಪಡಿತರ ಚೀಟಿ ಪಡೆಯಲು ಹಾಗೂ ಹೊಂದಿರಲು ಹಲವು ಅರ್ಹತೆಯ ಮಾನದಂಡಗಳನ್ನು ವಿಧಿಸಿದೆ. ಅದರಂತೆ ಕುಟುಂಬದ ವಾರ್ಷಿಕ ಆದಾಯ 1.20 ಲಕ್ಷಕ್ಕಿಂತಲೂ ಹೆಚ್ಚಿರುವವರು, ಮ್ಯಾಕ್ಸಿ ಕ್ಯಾಬ್, ಟ್ಯಾಕ್ಸಿ ಹೊಂದಿರುವ ಇತ್ಯಾದಿ ಕುಟುಂಬಗಳನ್ನು ಹೊರತುಪಡಿಸಿ ವೈಟ್ ಬೋರ್ಡ್‌ನ 4 ಚಕ್ರದ ವಾಹನ ಉಳ್ಳವರು, ಆದಾಯ ತೆರಿಗೆ ಪಾವತಿಸುವವರು, ಗ್ರಾಮೀಣ ಪ್ರದೇಶದಲ್ಲಿ 3 ಹೆಕ್ಟೇರ್ ಭೂಮಿ ಹೊಂದಿರುವವರು, ನಗರ ಪ್ರದೇಶಗಳಲ್ಲಿ 1000 ಚದರ ಅಡಿ ವಿಸ್ತೀರ್ಣ ಸ್ವಂತ ಮನೆ ಹೊಂದಿರುವವರು, ಸರ್ಕಾರಿ, ಅರೆ ಸರ್ಕಾರಿ ಉದ್ಯೋಗದಲ್ಲಿರುವವರು ಬಿಪಿಎಲ್ ಕಾರ್ಡ್ ಪಡೆಯಲು ಅನರ್ಹರು ಎಂದು ಆದೇಶದಲ್ಲಿ ತಿಳಿಸಲಾಗಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಿರಿಯಾಪಟ್ಟಣದ ಆಡಳಿತ ಭವನದಲ್ಲಿರುವ ಆಹಾರ ಇಲಾಖೆ ವಿಭಾಗಕ್ಕೆ ನ.30 ರೊಳಗೆ ತಂದು ವಾಪಸ್ ಮಾಡಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಅಂತಹವರನ್ನು ಪತ್ತೆಹಚ್ಚಿ ಕಾರ್ಡ್ ರದ್ದು ಮಾಡಿ ಇಲಾಖೆ ಕಾನೂನು ರೀತಿಯ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ಎಂದು ಕಟ್ಟುನಿಟ್ಟಿನ ಸೂಚನೆ ನೀಡಿದೆ.

ನಿವೃತ್ತ ದೈಹಿಕ ಶಿಕ್ಷಕರಿಗೆ ಸನ್ಮಾನ



ನಿವೃತ್ತ ದೈಹಿಕ ಶಿಕ್ಷಕ ವಾಸುದೇವ್ ದಂಪತಿಯನ್ನು ಸನ್ಮಾನಿಸಲಾಯಿತು.

ಸರಗೂರು, ನ10– ತಾಲೂಕಿನ ಕೊತ್ತೇಗಾಲ ಸರ್ಕಾರಿ ಪ್ರೌಢಶಾಲೆ ದೈಹಿಕ ಶಿಕ್ಷಕರಾಗಿ ಸೇವೆ ಸಲ್ಲಿಸಿ ನಿವೃತ್ತರಾದ ವಾಸುದೇವ್ ಹಾಗೂ ಮಂಜುಳಾ ದಂಪತಿಯನ್ನು ಬೆಂಗಳೂರಿನ ಆಯುಕ್ತರ ಕಚೇರಿ ಹಿರಿಯ ಸಹಾಯಕ ನಿರ್ದೇಶಕ ರಾಮಪ್ರಸಾದ್ ಸನ್ಮಾನಿಸಿದರು.

ನಂತರ ಮಾತನಾಡಿದ ಅವರು, ಮಕ್ಕಳ ಭವಿಷ್ಯ ರೂಪಿಸುವಲ್ಲಿ ಶಿಕ್ಷಕರ ಪಾತ್ರ ಅಪಾರ. ಇಲ್ಲಿನ ಕೊತ್ತೇಗಾಲ ಶಾಲೆಯಲ್ಲಿ ದೈಹಿಕ ಶಿಕ್ಷಕರಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾಗಿರುವ ಅವರ ಮುಂದಿನ ಜೀವನ ಸುಖಕರವಾಗಿರಲಿ ಎಂದು ತಿಳಿಸಿದರು.

ಈ ವೇಳೆ ಬೀಚನಹಳ್ಳಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಶ್ರೀನಿವಾಸ್, ಹೆಚ್.ಡಿ.ಕೋಟೆ ಜೂನಿಯರ್ ಕಾಲೇಜು ದೈಹಿಕ ಶಿಕ್ಷಕ ಹೆಚ್.ಆರ್.ರವಿ ಉಪಸ್ಥಿತರಿದ್ದರು.

ನಿರಂತರ ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿ

ಶಾಸಕ ಡಿ.ರವಿಶಂಕರ್



ಕೆ.ಆರ್.ನಗರದಲ್ಲಿ ನಡೆದ ಹನುಮಾಸನ ಮಕ್ಕಳ ಗ್ಲೋಬಲ್ ಯೋಗ ರೆಕಾರ್ಡ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳು.

ಕೆ.ಆರ್.ನಗರ, ನ.10– ನಿರಂತರ ಯೋಗಾಭ್ಯಾಸದಿಂದ ಆರೋಗ್ಯ ವೃದ್ಧಿಯಾಗುವ ಜೊತೆಗೆ ಮಾನಸಿಕ ಒತ್ತಡ ಕಡಿಮೆಯಾಗಲಿದೆ ಎಂದು ಶಾಸಕ ಡಿ.ರವಿಶಂಕರ್ ತಿಳಿಸಿದರು.

ಪಟ್ಟಣದ ಕೃಷ್ಣರಾಜೇಂದ್ರ ಕ್ರೀಡಾಂಗಣದಲ್ಲಿ ಶನಿವಾರ ಬೆಳಗ್ಗೆ ಸುಮುಖ ಯೋಗ ಕೇಂದ್ರದಿಂದ ನಡೆದ ಹನುಮಾಸನ ಮಕ್ಕಳ ಗ್ಲೋಬಲ್ ಯೋಗ ರೆಕಾರ್ಡ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಯುಗದಲ್ಲಿ ಯಾಂತ್ರಿಕ ಬದುಕು ನಡೆಸುತ್ತಿರುವ ನಮಗೆ ಪ್ರಸ್ತುತ ಯೋಗದ ಅವಶ್ಯಕತೆ ಇದೆ ಎಂದರು.

ಅಗತ್ಯ ತರಬೇತಿ ಪಡೆದು ಮನೆಯಲ್ಲೇ ಯೋಗ ಮಾಡಿ ಎಂದು ಸಲಹೆ ನೀಡಿದ ಶಾಸಕರು, ಪ್ರಸ್ತುತ ಯೋಗ ವಿಶ್ವದಲ್ಲಿಯೇ ಜನ ಮನ್ನಣೆ ಗಳಿಸಿದ್ದು, ಪ್ರತಿಯೊಬ್ಬರೂ ಯೋಗ ಕಲಿತು ಅದರ ಅಗತ್ಯತೆಯನ್ನು ಇತರರಿಗೂ ಸಾರಬೇಕೆಂದರು.

ವಿಶ್ವಾದ್ಯಂತ ಜೂ.21ರಂದು ವಿಶ್ವ ಯೋಗ ದಿನಾಚರಣೆ ಆಚರಿಸುತ್ತಿರುವುದು ಯೋಗದ ಮಹತ್ವವನ್ನು ತಿಳಿಸುತ್ತದೆ. ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲೂ ಯೋಗ ತರಬೇತಿ ಕೇಂದ್ರ ಆರಂಭಿಸಲು ಕ್ರಮ ಕೈಗೊಳ್ಳುವುದಾಗಿ ನುಡಿದರು.

ಏಕಕಾಲಕ್ಕೆ 1101ಕ್ಕೂ ಹೆಚ್ಚು ಮಕ್ಕಳಿಂದ ಹನುಮಾಸನದ ಮೂಲಕ ಮಕ್ಕಳ ಗ್ಲೋಬಲ್ ಯೋಗ ರೆಕಾರ್ಡ್ ಕಾರ್ಯಕ್ರಮ ಮಾಡಿರುವುದು ಎಲ್ಲರೂ ಹೆಮ್ಮೆಪಡುವ ವಿಚಾರ. ಇಂತಹ ಕಾರ್ಯಕ್ರಮದ ಮೂಲಕ ಅಭೂತಪೂರ್ವ ಸಾಧನೆ ಮಾಡಿರುವವರು ಅಭಿನಂದನೆಗೆ ಅರ್ಹರು ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ಬೆಂಗಳೂರಿನ ಪತಂಜಲಿ ಯೋಗ ಟ್ರಸ್ಟ್ ಅಧ್ಯಕ್ಷ ಡಾ.ಪ್ರಕಾಶ್ ಗುರೂಜಿ ಮಾತನಾಡಿ, ಯೋಗ ಚೈತನ್ಯದ ಚಿಲುಮೆಯಾಗಿದ್ದು ನಿತ್ಯ ಅಭ್ಯಾಸ ಮಾಡಿದರೆ ರೋಗ ಮುಕ್ತರಾಗಿ ಜೀವನ ನಡೆಸಬಹುದು ಎಂದರು.

ಬೆಂಗಳೂರಿನ ಸ್ವಾಮಿ ವಿವೇಕಾನಂದ ಯೋಗ ಟ್ರಸ್ಟ್ ಮುಖ್ಯಸ್ಥ ಡಾ.ದೇವರಾಜ ಯೋಗಿ ಗುರೂಜಿ, ಕೆಆರ್.ನಗರ ಪತಂಜಲಿ ಯೋಗ ಟ್ರಸ್ಟ್ ಅಧ್ಯಕ್ಷ ಪಿ.ಆರ್.ವಿಶ್ವನಾಥ ಶೆಟ್ಟಿ, ನವನಗರ ಅರ್ಬನ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ರಾಜೀವ್ ಗಾಂಧಿ ಹೌಸಿಂಗ್ ಸೊಸೈಟಿ ನಿರ್ದೇಶಕ ಜಿ.ಕೆ.ಹರೀಶ್, ಬಿಇಓ ಆರ್.ಕೃಷ್ಣಪ್ಪ ಮಾತನಾಡಿದರು.

ಈ ವೇಳೆ 1101ಕ್ಕೂ ಅಧಿಕ ಮಕ್ಕಳು ಯೋಗದ ಮೂಲಕ ಸಾಮೂಹಿಕವಾಗಿ ಮಾಡಿದ ಹನುಮಾಸನ ಎಲ್ಲರ ಗಮನ ಸೆಳೆದು ನೆರೆದಿದ್ದವರ ಪ್ರಶಂಸೆಗೆ ಪಾತ್ರವಾಯಿತು.

ಕಾರ್ಯಕ್ರಮಕ್ಕೂ ಮುನ್ನ ಹಿರಿಯ ಸಿವಿಲ್ ನ್ಯಾಯಾಧೀಶ ಬಿ.ಸಿ.ಅರವಿಂದ್ರ ಮತ್ತು ಪ್ರಧಾನ ಸಿವಿಲ್ ನ್ಯಾಯಾಧೀಶ ಎಸ್.ಚಂದನ್ ಅವರು ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಶುಭ ಕೋರಿದರು.

ಡಿಡಿಪಿಐ ಜವರೇಗೌಡ, ಯೋಗಾಚಾರ್ಯ ಡಾ.ಪಿ.ಎನ್.ಗಣೇಶ್ ಕುಮಾರ್, ಉಪ ತಹಸೀಲ್ದಾರ್ ಹೆಚ್.ಆರ್.ಅರುಣ್ ಕುಮಾರ್, ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್, ಯೋಗ ಗುರುಗಳಾದ ರೇವಣ್ಣ, ಯೋಗಮಣಿ, ಮಹದೇವ್, ಉಮೇಶ್, ಯೋಗಪಟುಗಳಾದ ಮಣಿಕಂಠ, ಹೆಚ್.ಆರ್. ನವೀನ್ ಕುಮಾರ್, ಪುರಸಭೆ ಸದಸ್ಯರಾದ ನಟರಾಜು, ಶಿವುನಾಯಕ್, ಸೈಯದ್ ಸಿದ್ದಿಕ್, ಮಾಜಿ ಸದಸ್ಯರಾದ ರಾ.ಜ.ಶ್ರೀಕಾಂತ್, ಕೆ.ವಿನಯ್, ನಗರ ಯೋಜನಾ ಪ್ರಾಧಿಕಾರದ ನಿರ್ದೇಶಕ ಕೆ.ಎನ್.ಪ್ರಸನ್ನ ಕುಮಾರ್, ಮುಖಂಡರಾದ ಪುಟ್ಟರಾಜು, ಸಂಜಯ್ ತಿಲಕ್ ಮತ್ತಿತರರಿದ್ದರು.

ಛಾಯಾಗ್ರಾಹಕ ಮಹೇಶ್ ನಿಧನ



ತಿ.ನರಸೀಪುರ, ನ.10– ತಾಲೂಕಿನ ವ್ಯಾಸರಾಜಪುರ ಗ್ರಾಮದ ನಿವಾಸಿ, ಛಾಯಾಗ್ರಹಕ ಮಹೇಶ್(32) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತ್ನಿ, 4 ತಿಂಗಳ ಮಗು ಹಾಗೂ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಸ್ವಗ್ರಾಮದಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಹೇಶ್ ನಿಧನಕ್ಕೆ ತಾಲೂಕು ಛಾಯಾಗ್ರಾಹಕರ ಸಂಘ ಸಂತಾಪ ಸೂಚಿಸಿದೆ.

ಪಾರ್ವತಮ್ಮ



ಹುಣಸೂರು, ನ.10– ತಾಲೂಕಿನ ಬನ್ನಿಕುಪ್ಪೆ ಗ್ರಾಮದ ನಿವಾಸಿ ಸಿದ್ದಲಿಂಗಪ್ಪ ಅವರ ಪತ್ನಿ, ಪಾರ್ವತಮ್ಮ(58) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಪತಿ, ಪುತ್ರ ತಾಲೂಕು ಕೇಬಲ್ ಆಪರೇಟರ್ ಸಂಘದ ಅಧ್ಯಕ್ಷ ಸುಧಾಕರ್, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗ್ರಾಮದ ಮೃತರ ಜಮೀನಿನಲ್ಲಿ ಸಂಜೆ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ರಾಜಮ್ಮ



ಹೆಚ್.ಡಿ.ಕೋಟೆ, ನ.10– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ಪಿವನ್ ನಾಗಣ್ಣ ಅವರ ಪತ್ನಿ ರಾಜಮ್ಮ(77) ಭಾನುವಾರ ಬೆಳಗ್ಗೆ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಓದಿನ ಬಗ್ಗೆ ಪ್ರೀತಿ ಇರಲಿ, ಶಿಕ್ಷಣ ವ್ಯಕ್ತಿತ್ವ ರೂಪಿಸುತ್ತದೆ

ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ. ಪದ್ಮಾ ಶೇಖರ್ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿ ಗಾಂಧಿಭವನದಲ್ಲಿ ಭಾನುವಾರ ನಡೆದ ರಾಜ್ಯೋತ್ಸವ, ಸಾಧಕರಿಗೆ ಸನ್ಮಾನ ಹಾಗೂ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಉದ್ಘಾಟಿಸಿದರು. ಪ್ರೊ.ಎಸ್. ನರೇಂದ್ರಕುಮಾರ್, ಅಂಶಿ ಪ್ರಸನ್ನಕುಮಾರ್, ನಾಗರಾಜ ವಿ. ಭೈರಿ, ನ.ಗಂಗಾಧರಪ್ಪ, ಮಹಾಬಲೇಶ್ವರ ಭೈರಿ, ಆರ್.ಕೃಷ್ಣೋಜಿರಾವ್, ಎನ್.ಬೆಟ್ಟೇಗೌಡ, ಎ.ಸಿ.ರವಿ, ಇಂದಿರಾ ವೆಂಕಟೇಶ್, ಕೆ.ಎಸ್.ಭಾರ್ಗವಿ, ಎಸ್.ಸುನಿಲ್ ಕುಮಾರ್, ಜಿ.ಶ್ರೀನಿವಾಸ್ ಇದ್ದಾರೆ.

ಮೈಸೂರು, ನ.10– ಓದಿನ ಬಗ್ಗೆ ಪ್ರೀತಿ ಇರಲಿ ಏಕೆಂದರೆ ಶಿಕ್ಷಣ ವ್ಯಕ್ತಿತ್ವವನ್ನು ರೂಪಿಸುತ್ತದೆ ಎಂದು ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾ ಶೇಖರ್ ಹೇಳಿದರು.

ಅಲೆಯನ್ಸ್ ಕ್ಲಬ್ ಆಫ್ ರಾಧಾಕೃಷ್ಣ, ಸಾವಿತ್ರಿಬಾಯಿಫುಲೆ, ಸಂಜನ ಬಳಗ ಪ್ರತಿಷ್ಠಾನ ವತಿಯಿಂದ ಮಾನಸ ಗಂಗೋತ್ರಿ ಗಾಂಧಿ ಭವನದಲ್ಲಿ ಭಾನುವಾರ ಏರ್ಪಡಿಸಿದ್ದ ರಾಜ್ಯೋತ್ಸವ, ಶಿಕ್ಷಕರು, ವೈದ್ಯರು, ಎಂಜಿನಿಯರ್ ದಿನಾಚರಣೆ, ಸರ್ಕಾರಿ ಪ್ರೌಢಶಾಲೆಗಳ ಅರ್ಹ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣದಿಂದ ಎಲ್ಲವೂ ಸಾಧ್ಯ, ಆದ್ದರಿಂದ ಓದು ನಮ್ಮ ಪ್ರಥಮ ಆಯ್ಕೆಯಾಗಬೇಕು. ಇದು ವ್ಯಕ್ತಿತ್ವವನ್ನು ಗಟ್ಟಿಗೊಳಿಸುತ್ತದೆ. ಭವಿಷ್ಯವನ್ನು ರೂಪಿಸುತ್ತದೆ. ಆದ್ದರಿಂದ ಗುರುಗಳ ಮಾರ್ಗದರ್ಶನದಲ್ಲಿ ಗುರಿ ತಲುಪಬೇಕು. ಆ ಮೂಲಕ ಜ್ಞಾನ ವಿಸ್ತಾರ ಮಾಡಿಕೊಳ್ಳಬೇಕು. ಇದಕ್ಕೆ ಸಾಕಷ್ಟು ಸಿದ್ಧತೆ ಬೇಕಾಗುತ್ತದೆ ಎಂದು ಅವರು ಹೇಳಿದರು.

ಗಾಂಧಿ ಭವನ ನಿರ್ದೇಶಕ ಪ್ರೊ.ಎಸ್. ನರೇಂದ್ರಕುಮಾರ್ ಮಾತನಾಡಿ, ಪ್ರತಿಯೊಬ್ಬರಿಗೂ ಪ್ರೀತಿ, ಕಾರುಣ್ಯ, ಮೈತ್ರಿ ಮುಖ್ಯ. ಮನಸ್ಸು ಒಳಿತು ಹಾಗೂ ಕೆಡಕು ಎರಡನ್ನೂ ಮಾಡಬಲ್ಲದು. ಹೀಗಾಗಿ ಅದರ ನಿಯಂತ್ರಣ ಮುಖ್ಯ. ಜ್ಞಾನದ ಬೆಳಕಿನಿಂದ ಅಜ್ಞಾನದ ಕತ್ತಲು ಓಡಿಸಬೇಕು. ಅಂಬೇಡ್ಕರ್, ಮಹಾತ್ಮಗಾಂಧಿ, ಸಾವಿತ್ರಿಬಾಯಿ ಪುಲೆ, ಕುವೆಂಪು ಅವರ ಆದರ್ಶಗಳ ಹಾದಿಯಲ್ಲಿ ಸಾಗಿ, ಮನುಷ್ಯ ಪ್ರಜ್ಞೆ ಬೆಳೆಸಿಕೊಳ್ಳಬೇಕು ಎಂದರು.

ರಾಜ್ಯೋತ್ಸವ ಕುರಿತು ಅಲೆಯನ್ಸ್ ಕ್ಲಬ್‌ಗಳ ಒಕ್ಕೂಟದ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ. ಬೈರಿ ಮಾತನಾಡಿ, ಕನ್ನಡನಾಡಿನ ಇತಿಹಾಸವನ್ನು ವಿವರಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಅಲೆಯನ್ಸ್ ಜಿಲ್ಲಾ ರಾಜ್ಯಪಾಲ ಸಿರಿ ಬಾಲು, ಎರಡನೇ ಉಪ ರಾಜ್ಯಪಾಲ ಮಹಾಬಲೇಶ್ವರ ಭೈರಿ, ಖಜಾಂಚಿ ಆರ್.ಕೃಷ್ಣೋಜಿರಾವ್, ಸಾರ್ವಜನಿಕ ಸಂಪರ್ಕಾಧಿಕಾರಿ ಎನ್.ಬೆಟ್ಟೇಗೌಡ, ಪ್ರಾಂತೀಯ ಅಧ್ಯಕ್ಷರಾದ ಎ.ಸಿ.ರವಿ, ಇಂದಿರಾ ವೆಂಕಟೇಶ್, ಸಾವಿತ್ರಿಬಾಯಿ ಪುಲೆ ಕ್ಲಬ್ ಅಧ್ಯಕ್ಷೆ ಕೆ.ಎಸ್.ಭಾರ್ಗವಿ ಮುಖ್ಯ ಅತಿಥಿಗಳಾಗಿದ್ದರು. ಅಲೆಯನ್ಸ್ ಕ್ಲಬ್ ಆಫ್ ರಾಧಾಕೃಷ್ಣ ಎನ್. ಸುನಿಲ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು.


ಡಾ. ಪೂರ್ಣಿಮಾ, ಶ್ರೀಲತಾ, ಸಿ.ಎಸ್.ವಾಣಿ ನಾಡಗೀತೆ ಹಾಡಿದರು. ಇದೇ ಸಂದರ್ಭದಲ್ಲಿ ಎಂಜಿನಿಯರ್ ಲಾವ್ಯಾ ತಯಾರಿಸಿರುವ 'ಪದಕಟ್ಟು' ಅನಾವರಣ ಮಾಡಲಾಯಿತು.

ರಾಷ್ಟ್ರಪ್ರಶಸ್ತಿ ಪುರಸ್ಕೃತ ಶಿಕ್ಷಕ ಹುಣಸೂರು ಸರ್ಕಾರಿ ಬಾಲಕಿಯರ ಪಿಯು ಕಾಲೇಜಿನ ಎಚ್.ಎನ್.ಗಿರೀಶ್, ರಾಜ್ಯಪ್ರಶಸ್ತಿ ಪುರಸ್ಕೃತ ಪ್ರಾಂಶುಪಾಲ ಇದೇ ಕಾಲೇಜಿನ ಎ.ರಾಮೇಗೌಡ, ಶಿಕ್ಷಕ ಹಿನ್ಕಲ್ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಕೆ.ಎಸ್.ಮಧುಸೂದನ್, ಅಲ್ಲದೇ ಪ್ರಾಧ್ಯಾಪಕರಾದ ಎನ್.ಕೆ.ಲೋಲಾಕ್ಷಿ, ಸಿ. ಗುರುಸಿದ್ದಯ್ಯ, ಲ್ಯಾನ್ಸಿ ಡಿಸೋಜ, ಶಿವಾನಂದ ಸಿಂಧನಕೇರ, ಸತ್ಯನಾರಾಯಣ, ಎಂಜಿನಿಯರ್, ಡಾಕ್ಟರ್ ಹಾಗೂ ಶಿಕ್ಷಕ ದಂಪತಿಗಳಾದ ಡಾ.ಶ್ರೀನಾಥ್, ಡಾ. ಮಧು ಶ್ರೀನಾಥ್, ಜಗದೀಶ್ ಆರ್.ತುಂಗಾ, ನೇತ್ರಾವತಿ, ಡಾ. ಎಸ್.ಎಸ್.ಪಾರ್ಥಸಾರಥಿ, ಮನೋಹರ್, ಶ್ರೀಲತಾ ಮನೋಹರ್, ಎಸ್.ಎನ್.ಮಹದೇವು, ಪಿ.ಆರ್. ಪದ್ಮಾ, ಡಾ. ದೇವಿ ಆನಂದ್, ಡಾ. ಪೂರ್ಣಿಮಾ, ಡಾ. ಎ.ಒ.ಚಿರಂಜೀವಿ, ಕೆ.ಮಹಾಬಲೇಶಪ್ಪ, ಜಿ.ಸಿ.ಭವ್ಯಾ, ಶಾರದಾ ಶಿವಲಿಂಗಸ್ವಾಮಿ, ಪದ್ಮಾ, ರಾಜರತ್ನಮ್ಮ, ವನಿತಾ, ಜಿ.ಸಿ.ಉಷಾ, ರೇಷ್ಮಾ ಖಾತೂನ್, ಎ.ಲತಾ, ಎಂ.ವಿ.ಜಯಶ್ರೀ, ಸಿ.ಜೆ.ಯಶವಂತ ಕುಮಾರ್, ಎಚ್.ಎಸ್. ಶ್ರೀಕಂಠಮೂರ್ತಿ, ಎಂ.ಸಿದ್ದರಾಜು, ನಿವೃತ್ತ ಯೋಧ ಪಿ.ಎಸ್. ಅಶೋಕ್, ಪ್ರಗತಿಪರ ರೈತರಾದ ರಂಗಸಮುದ್ರ ಪಿ.ರಮೇಶ್, ಕಳಲೆ ಜವರನಾಯಕ, ನಗರ ನೈರ್ಮಲ್ಯ ರಕ್ಷಕರಾದ ಗಂಗೋತ್ರಿ ಬಡಾವಣೆಯ ಶಿವು ಹಾಗೂ ಸುಜಾತ ಅವರನ್ನು ಸನ್ಮಾನಿಸಲಾಯಿತು.

ಸರ್ಕಾರಿ ಪ್ರೌಢಶಾಲೆಗಳಲ್ಲಿ ಓದಿ ಶೇ. 90ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದು, ವ್ಯಾಸಂಗ ಮಾಡುತ್ತಿರುವ ಆರ್ಥಿಕವಾಗಿ ಹಿಂದುಳಿದ ಪ್ರತಿಭಾವಂತ ಮತ್ತು ಏಕಪೋಷಕ ವಿದ್ಯಾರ್ಥಿಗಳಿಗೆ ತಲಾ 1,000 ರೂ ಪ್ರೋತ್ಸಾಹ ಧನ ವಿತರಿಸಲಾಯಿತು. ಪಿಯುಸಿಯಲ್ಲಿ ರಾಜ್ಯಕ್ಕೆ ಎಂಟನೇ ರ್‍ಯಾಂಕ್ ಪಡೆದಿರುವ ಮೈಸೂರು ತಾಲೂಕಿನ ವಿಜಯಲಕ್ಷ್ಮಿ ಅವರನ್ನು ಸನ್ಮಾನಿಸಲಾಯಿತು.

ದಿನಮಣಿ ಅವರ 'ಬಯಲು ದೀಪ' ಕೃತಿ ಬಿಡುಗಡೆ

ಹೆಣ್ಣು ಎಲ್ಲರಿಗೂ ಬೆಳಕು : ಸತ್ಯಮಂಗಲ ಮಹಾದೇವ



ಮೈಸೂರು, ನ.10(ಜಿಎ)–ಕುಟುಂಬ, ಸಮಾಜಕ್ಕಾಗಿ ಬದುಕುತ್ತಲೇ ಹೆಣ್ಣು ತನ್ನ ಇರುವಿಕೆಯನ್ನೂ ಸಾಬೀತುಪಡಿಸುತ್ತಾಳೆ ಎಂದು ಶೇಷಾದ್ರಿಪುರಂ ಸಂಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಸತ್ಯಮಂಗಲ ಮಹಾದೇವ ತಿಳಿಸಿದರು.

ಮೈಸೂರಿನ ರಂಗಾಯಣದ ಬಿ.ವಿ.ಕಾರಂತ ರಂಗ ಚಾವಡಿಯಲ್ಲಿ ದೇಸಿರಂಗ ಸಾಂಸ್ಕೃತಿಕ ಟ್ರಸ್ಟ್‌ನಲ್ಲಿ ಆಯೋಜಿಸಿದ್ದ ಬಿ.ಎಸ್.ದಿನಮಣಿ ಅವರ 'ಬಯಲು ದೀಪ' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹೆಣ್ಣು ಎಲ್ಲರಿಗೂ ಬೆಳಕಾಗುತ್ತಾಳೆ. ಕೃತಿ ಹೆಸರಿನಲ್ಲಿ ಬಳಸಿರುವ ಬಯಲು ಎಂಬ ಪದ ಅಕ್ಕಮಹಾದೇವಿ, ಅಲ್ಲಮರ ಆಲೋಚನೆಯನ್ನು ನಮ್ಮಲ್ಲಿ ಬಿತ್ತುತ್ತದೆ ಹಾಗೇ ಸಮಾಜ ಸೃಷ್ಟಿಸಿದ ಎಲ್ಲೆಗಳನ್ನು ಮೀರಿ ಜಗತ್ತನ್ನು ಅರಿಯುವ ಹೆಣ್ಣಿನ ಭಾವನೆಗಳನ್ನು ಬಯಲು ದೀಪ ಕೃತಿ ಹೊರಹೊಮ್ಮಿಸುತ್ತದೆ ಎಂದರು.

ಪ್ರಭುತ್ವವನ್ನು ಪ್ರಶ್ನಿಸುವ ಕವನವೂ ಇಲ್ಲಿದೆ ಸಂವಿಧಾನವನ್ನು ಮೂಲೆಗಿರಿಸಿ, ಬಡವರ ಬದುಕಿಗೆ ಬೆಂಕಿಯನ್ನಿರಿಸಿ ಬೆಚ್ಚಗಿರುವ ರಾಜನ ಬಗ್ಗೆ ಇಲ್ಲಿ ಆಕ್ರೋಶವಿದೆ. ಸಹಜ ಮತ್ತು ಸರಳ ಭಾಷೆಯಲ್ಲಿ ನಿರೂಪಿತ ವಾದ ಕವಿತೆಗಳು ಶ್ರೇಷ್ಠವಾಗಿರುತ್ತವೆ ಎಂದು ತಿಳಿಸಿದರು.

ಪತ್ರಕರ್ತ ರಘುನಾಥ ಚ.ಹ ಕೃತಿ ಬಿಡುಗಡೆಗೊಳಿಸಿ ಮಾತನಾಡಿ, ಜನಪರ ಬರವಣಿಗೆಯಿಂದ ಲೇಖಕ, ಕವಿ ಹುಟ್ಟುತ್ತಾನೆ. ಮಹಿಳೆಯರು ಇಂದು ಸಾಹಿತ್ಯ ಕೃಷಿಯಲ್ಲಿ ಹೆಚ್ಚು ತೊಡಗಿದ್ದು, ಬೌದ್ಧಿಕವಲಯದ ಪ್ರಗತಿಯನ್ನು ಸೂಚಿಸುತ್ತದೆ. ಈ ಕೃತಿ ಹೆಣ್ಣಿನ ಅಂತರಂಗವನ್ನು ತೆರೆದಿಡುತ್ತದೆ, ನಮ್ಮನ್ನು ಸಂವಾದಕ್ಕಿಳಿಸುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಸಾಹಿತಿ ವಿಕ್ರಂ ಚದುರಂಗ, ಪ್ರಕಾಶಕ ಸಂಸ್ಕೃತಿ ಸುಬ್ರಹ್ಮಣ್ಯ, ಲೇಖಕಿ ಬಿ.ಎಸ್.ದಿನಮಣಿ, ಟ್ರಸ್ಟ್ ಸ್ಥಾಪಕ ಕೃಷ್ಣ ಜನಮನ ಉಪಸ್ಥಿತರಿದ್ದರು.

ನ.14ರಿಂದ ಮೈಸೂರಿನ ಭಾರತ್ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಅಂತರರಾಷ್ಟ್ರೀಯ ಕಲಾಕೂಟ

ದೇಶ-ವಿದೇಶಿ ಕಲಾವಿದರಿಂದ ಚಿತ್ರಗಳ ರಚನೆ

ಮೈಸೂರು, ನ.10(ಜಿಎ)–ಬೆಂಗಳೂರಿನ ಹೆಚ್‌ಸಿಜಿ ಫೌಂಡೇಶನ್‌ನ ಸ್ವಸ್ತಿ ಕಾಂಟೆಂಪರರಿ ಆರ್ಟ್ ಗ್ಯಾಲರಿ ವತಿಯಿಂದ ಮೈಸೂರಿನ ಹೆಬ್ಬಾಳಿನಲ್ಲಿರುವ ಭಾರತ್ ಹಾಸ್ಪಿಟಲ್ ಮತ್ತು ಇನ್‌ಸ್ಟಿಟ್ಯೂಟ್ ಆಫ್ ಆಂಕೊಲಜಿ ಆಸ್ಪತ್ರೆಯ ಆವರಣದಲ್ಲಿ ನ.14 ರಿಂದ 23 ರವರೆಗೆ ಅಂತರರಾಷ್ಟ್ರೀಯ ಕಲಾಕೂಟ ಆಯೋಜಿಸಲಾಗಿದೆ ಎಂದು ಗ್ಯಾಲರಿ ನಿರ್ದೇಶಕಿ ಭಾಗ್ಯ ಅಜಯ್ ಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕಲಾಕೂಟದಲ್ಲಿ ಭಾರತ ಮಾತ್ರವಲ್ಲದೆ ಅರ್ಜೆಂಟೀನಾ, ಜರ್ಮನಿ, ಲೆಬನಾನ್, ಮಲೇಶಿಯಾ, ಲಿಥುವೇನಿಯಾ, ಮಾಂಟೆನೆಗ್ರೊ ಸೇರಿದಂತೆ ಅಂತರರಾಷ್ಟ್ರೀಯ ಕಲಾವಿದರು ಭಾಗವಹಿಸಲಿದ್ದಾರೆ. ವಿದೇಶಿ ಚಿತ್ರ ಕಲಾವಿದರು ಇಲ್ಲಿಗೆ ಬರುವುದರಿಂದ ಸಾಂಸ್ಕೃತಿಕ ವಿಚಾರಗಳ ವಿನಿಮಯವೂ ಆಗಲಿದೆ ಎಂದರು.

ಕಲಾವಿದರು ನ.14 ರಿಂದ 23ರವರೆಗೆ ನಡೆಯುವ ಈ ಕಲಾಕೂಟದಲ್ಲಿ ಭಾಗವಹಿಸಿ ಚಿತ್ರಗಳನ್ನು ರಚಿಸುತ್ತಾರೆ. ಬಳಿಕ ಕಲಾವಿದರ ಎಲ್ಲಾ ಕಲಾಕೃತಿಗಳನ್ನು ನ.23 ರಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ಪ್ರದರ್ಶಿಸಲಾಗುತ್ತದೆ. ಸಾರ್ವಜನಿಕರಿಗೆ ಈ ದಿನ ಮಾತ್ರ ಪ್ರವೇಶ ಉಚಿತ ಇರುತ್ತದೆ. ನಂತರ ನ. 25 ರಿಂದ ಬೆಂಗಳೂರಿನ ಸ್ವಸ್ತಿ ಕಾಂಟೆಂಪರರಿ ಆರ್ಟ್ ಗ್ಯಾಲರಿಯಲ್ಲಿ ಕಲಾಕೃತಿಗಳನ್ನು ಒಂದು ತಿಂಗಳ ಕಾಲ ಪ್ರದರ್ಶನ ಮಾಡಲಾಗುತ್ತದೆ. ಆ ಮೂಲಕ, ಕಲಾಭಿಮಾನಿಗಳು ಚಿತ್ರಗಳನ್ನು ವೀಕ್ಷಿಸಲು ಮತ್ತು ಖರೀದಿಸಲು ಅವಕಾಶವನ್ನು ಕಲ್ಪಿಸಲಾಗಿದೆ. ಈ ಕಲಾಕೃತಿಗಳ ಮಾರಾಟದಿಂದ ಬರುವ ಎಲ್ಲಾ ಆದಾಯವನ್ನು ವೈದ್ಯಕೀಯ ಸಹಾಯದ ಅಗತ್ಯವಿರುವ ಕ್ಯಾನ್ಸರ್ ರೋಗಿಗಳಿಗಾಗಿ ಹೆಚ್‌ಸಿಜಿ ಫೌಂಡೇಶನ್‌ಗೆ ದಾನ ಮಾಡಲಾಗುತ್ತದೆ. ಈ ರೀತಿ ಕಳೆದ 2007ರಿಂದ ಕಲಾಕೂಟ ನಡೆಸುತ್ತಿದ್ದು, ಇದರಿಂದ ಸುಮಾರು 350ಕ್ಕೂ ಅಧಿಕ ರೋಗಿಗಳಿಗೆ ಅನುಕೂಲವಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಲಾ ಗ್ಯಾಲರಿಯ ಸಂಯೋಜಕಿ ಕೆ.ದೀಕ್ಷಿತಾ ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಸ್ವಸ್ತಿ ಕಾಂಟೆಂಪರರಿ ಆರ್ಟ್ ಗ್ಯಾಲರಿ ನಿರ್ದೇಶಕಿ ಭಾಗ್ಯ ಅಜಯ್ ಕುಮಾರ್ ಮಾತನಾಡಿದರು.

36ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿ ಉದ್ಘಾಟನೆ

ಕ್ರೀಡಾ ಸಮುದಾಯ ಸಂಪರ್ಕಿಸಲು, ಪ್ರೇರೇಪಿಸಲು ಅಂಚೆ ಮಾಧ್ಯಮ ಸೂಕ್ತ ಸಾಧನ



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 36ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಮೇಜರ್ ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತೆ ತೃಪ್ತಿ ಮುರುಗುಂಡ ಉದ್ಘಾಟಿಸಿದರು.

ಮೈಸೂರು, ನ.10(ಜಿಎ)–ಕ್ರೀಡಾ ಸಮುದಾಯವನ್ನು ಸಂಪರ್ಕಿಸಲು ಮತ್ತು ಪ್ರೇರೇಪಿಸಲು ಅಂಚೆ ಮಾಧ್ಯಮವು ಸೂಕ್ತ ಸಾಧನ ಎಂದು ಮೇಜರ್ ಧ್ಯಾನಚಂದ್ ಪ್ರಶಸ್ತಿ ಪುರಸ್ಕೃತೆ ತೃಪ್ತಿ ಮುರುಗುಂಡೆ ತಿಳಿಸಿದರು.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಯೋಜಿಸಿದ್ದ 36ನೇ ಅಖಿಲ ಭಾರತ ಅಂಚೆ ಬ್ಯಾಡ್ಮಿಂಟನ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಭಾರತದಲ್ಲಿನ ಕ್ರೀಡಾ ಕ್ಷೇತ್ರಕ್ಕೆ ಹೆಚ್ಚಿನ ಬೆಂಬಲದ ಅಗತ್ಯವಿದೆ. ಎಲ್ಲಾ ವಯೋಮಾನದ ಜನರು ಪಂದ್ಯಾವಳಿಗಳಲ್ಲಿ ಒಟ್ಟುಗೂಡುವುದು ಅಪರೂಪದ ಸಂದರ್ಭಗಳಲ್ಲಿ ಒಂದಾಗಿದ್ದು, ಗೆಲುವು ಸುಲಭವಾಗಿ ಸಿಗುವುದಿಲ್ಲ. ಹಂತವಾಗಿ ಎಲ್ಲಾ ಸವಾಲನ್ನು ಎದುರಿಸಿದಾಗ ಗೆಲುವಿನ ಖುಷಿ ಸಿಗಲಿದೆ ಎಂದು ತಮ್ಮ ಸ್ವಂತ ಅನುಭವಗಳನ್ನು ಹೇಳಿ, ಕ್ರೀಡಾಪಟುಗಳು ಎದುರಿಸಬೇಕಾದ ಸವಾಲುಗಳೇನು ಎಂದು ತಿಳಿಸಿದರು.

ದೇಶದ ಜನರ ಮನಸ್ಥಿತಿಯನ್ನು ಬದಲಾಯಿಸುವ ಅಗತ್ಯವಿದೆ ಭಾರತವನ್ನು ನಿಜವಾದ ಕ್ರೀಡಾ ರಾಷ್ಟ್ರವಾಗಿಸಲು ಪಾಲಕರು ತಮ್ಮ ಮಕ್ಕಳನ್ನು ಕ್ರೀಡೆಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. 2036ರ ಒಲಂಪಿಕ್ಸ್‌ನಲ್ಲಿ ಭಾರತವು ಹೆಚ್ಚು ಪದಕಗಳನ್ನು ಗೆಲ್ಲುವ ದೇಶವನ್ನಾಗಿ ಮಾಡಲು ತರಬೇತಿ ನೀಡಿ, ಭಾರತವನ್ನು ಕ್ರೀಡಾ ದೇಶವನ್ನಾಗಿ ಮಾಡುವ ಪಣ ತೊಡಬೇಕು ಎಂದರು.

ಕರ್ನಾಟಕ ವಿಭಾಗದ ಚೀಫ್ ಪೋಸ್ಟ್ ಮಾಸ್ಟರ್ ಎಸ್ ರಾಜೇಂದ್ರ ಕುಮಾರ್ ಮಾತನಾಡಿ, ಅಂಚೆ ಇಲಾಖೆಯು ಕೇವಲ ಈ ಪಂದ್ಯಾವಳಿಯನ್ನು ಮಾತ್ರವಲ್ಲದೆ ಈ ವಾರ ನಡೆಯುತ್ತಿರುವ ಮಹಿಳಾ ಬೈಕ್ ರ್‍ಯಾಲಿಗೂ ಸಾಥ್ ನೀಡಿದೆ. ಅಂಚೆ ಪತ್ರ ಸ್ಪರ್ಧೆಯು ಡಿಸೆಂಬರ್ ಕೊನೆಯ ವಾರದ ತನಕ ನಡೆಯುತ್ತಿದ್ದು ಆಸಕ್ತರು ಪತ್ರ ಬರೆಯಬಹುದು. ಇಲಾಖೆಯೂ ನಿರಂತರವಾಗಿ ಜನರ ಜೊತೆಗೆ ಉತ್ತಮ ಸಂಬಂಧವನ್ನು ಹೊಂದಿದೆ ಎಂದು ತಿಳಿಸಿ, ದೇಶದ 21 ರಾಜ್ಯಗಳಿಂದ ಬಂದಿರುವ ಎಲ್ಲಾ ಕ್ರೀಡಾಪಟುಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಬೆಂಗಳೂರು ಮುಖ್ಯ ಕಚೇರಿಯ ರೀಜನ್ ಪೋಸ್ಟ್ ಮಾಸ್ಟರ್ ಜನರಲ್ ಎಲ್.ಕೆ.ಡ್ಯಾಶ್ , ಉತ್ತರ ಕರ್ನಾಟಕ ಅಂಚೆ ವಲಯದ ಪೋಸ್ಟರ್ ಮಾಸ್ಟರ್ ಜನರಲ್ ಕರ್ನಲ್ ಸುಶೀಲ್ ಕುಮಾರ್, ದಕ್ಷಿಣ ಕರ್ನಾಟಕ ಅಂಚೆ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಚಂದ್ರಶೇಖರ್ ಕಾಕುಮನು, ದಕ್ಷಿಣ ಕರ್ನಾಟಕ ಅಂಚೆ ವಲಯದ ನಿರ್ದೇಶಕ ಸಂದೇಶ್ ಮಹದೇವಪ್ಪ ಹಾಗೂ ಮೈಸೂರು ವಿಭಾಗದ ಅಂಚೆಯ ಎಲ್ಲಾ ಸಿಬ್ಬಂದಿಗಳು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ವಿಶ್ವಂ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಬಘೀರ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೂಲ್ ಭುಲಯ್ಯ 3 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಸಂಗೀತಾ ಸಂತೋಷ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಬಘೀರ (ಕ)	4 ಪ್ರದರ್ಶನಗಳು
ರಾಜಕಮಲ್	
ಅಮರನ್ (ಕ)	4 ಪ್ರದರ್ಶನಗಳು
ಸಂಗಂ	
ನವಗ್ರಹ (ಕ)	4 ಪ್ರದರ್ಶನಗಳು
ಲಿಡೋ	
ಎಲಾ ಕುನ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿಂಗಂ ಅಗೇನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಸಂಗೀತಾ ಸಂತೋಷ (ಕ)	2 ಪ್ರದರ್ಶನಗಳು
ಆದಿ ಪರ್ವ(ಕ)	2 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಲಕ್ಕಿ ಭಾಸ್ಕರ್ (ತೆ): ಬೆ.10.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಲಕ್ಕಿ ಭಾಸ್ಕರ್ (ಮ): ರಾ.9.55ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಬೆ.10.55ಕ್ಕೆ, ಬ್ಲಡಿ ಬೆಗ್ಗರ್ (ತ): ಮ.1.20ಕ್ಕೆ, ಬ್ರದರ್ (ತ): ಸಂ.4.20ಕ್ಕೆ, ಬಘೀರ (ಕ): ರಾ.7.05ಕ್ಕೆ, ಕ (ತೆ): ರಾ.10.10ಕ್ಕೆ.
ಸ್ಕ್ರೀನ್ 3	ಅಮರನ್ (ತ): ಬೆ.10.05ಕ್ಕೆ, ಮ.1.15ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಅನ್ನ (ಕ): ಸಂ.4.30ಕ್ಕೆ.
ಸ್ಕ್ರೀನ್ 4	ಬಘೀರ (ಕ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.15ಕ್ಕೆ, ರಾ.10.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ವೆಟ್ಟೈಯನ್ (ತ): ಮ.1ಕ್ಕೆ, ಎಲ್ಲಿಗೆ ಪಯಣ ಯಾವುದೋ ದಾರಿ (ಕ): ಸಂ.4ಕ್ಕೆ, ಮಾರ್ಟಿನ್ (ಕ): ಸಂ.6.30ಕ್ಕೆ, ವೆಟ್ಟೈಯನ್ (ತ): ರಾ.9.15ಕ್ಕೆ.
ಸ್ಕ್ರೀನ್ 2	ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ಮ.1.30ಕ್ಕೆ, ಸಂ.4ಕ್ಕೆ, ರಾ.7ಕ್ಕೆ.
ಸ್ಕ್ರೀನ್ 3	ಯಲಾಕುನ್ನಿ (ಕ): ಮ.1.30ಕ್ಕೆ, ಒಬ್ಬಟ್ಟು (ಕ): ಸಂ.4.30ಕ್ಕೆ, ಉದಾಹರಣೆ (ಕ): ರಾ.7ಕ್ಕೆ, ವೆನಂ ದಿ ಲಾಸ್ಟ್ ಡ್ಯಾನ್ಸ್ (3ಡಿ)(ಇಂ): ರಾ.9.15ಕ್ಕೆ.
ಸ್ಕ್ರೀನ್ 4	ಮಾರ್ಟಿನ್ (ಕ): ಮ.1.10ಕ್ಕೆ, ಯಲಾಕುನ್ನಿ (ಕ): ಮ.3.55ಕ್ಕೆ, ವೆಟ್ಟೈಯನ್ (ತ): ಸಂ.6.30ಕ್ಕೆ, ಪಣಿ (ಮ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪ್ರತ್ಯೇಕ ಪ್ರಕರಣಗಳಲ್ಲಿ ಮೂವರು ನಾಪತ್ತೆ

ಮೈಸೂರು, ನ.10(ಎಸ್‌ಪಿಎನ್)– ವಿಜಯನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಇಬ್ಬರು ಯುವತಿಯರು, 80 ವರ್ಷದ ವೃದ್ಧೆಯೊಬ್ಬರು ಕಾಣೆಯಾಗಿದ್ದು, ಈ ಕುರಿತು ಮೂರು ಪ್ರತ್ಯೇಕ ಪ್ರಕರಣ ದಾಖಲಾಗಿವೆ.

ಯುವತಿ ಎಂ.ಎಸ್.ಅಮೃತ: ಬಿಬಿಎ ವ್ಯಾಸಂಗ ಮುಗಿಸಿ, ಖಾಸಗಿ ಕಾರ್ಖಾನೆಯಲ್ಲಿ ಕೆಲಸ ಮಾಡಿಕೊಂಡಿದ್ದ 20 ವರ್ಷದ ಎಂ.ಎಸ್.ಅಮೃತ, ಗ್ರಾಮ ಲೆಕ್ಕಿಗ ಸರ್ಕಾರಿ ಹುದ್ದೆಗೆ ಅ.27ರಂದು ಪರೀಕ್ಷೆ ಬರೆಯಲು ಹೋದ ಅಮೃತ ಅವರು, ಮತ್ತೆ ವಾಪಸ್ ಮನೆಗೆ ಬಂದಿಲ್ಲ ಎಂದು ಯುವತಿಯ ತಾಯಿ ಎಂ.ವಿ.ಸುಮಾ ವಿಜಯನಗರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಗೃಹಿಣಿ ಬಿ.ಎ.ಸೋನು: ಮೈಸೂರಿನ ಖಾಸಗಿ ಕ್ಲಿನಿಕ್‌ನಲ್ಲಿ ನರ್ಸ್ ಸೇವೆ ಸಲ್ಲಿಸುತ್ತಿದ್ದ ಕೂರ್ಗಳ್ಳಿ ನಿವಾಸಿ ಬಿ.ಎ.ಸೋನು ಅವರು ಅ.28 ರಂದು ಮನೆಯಿಂದ ನಾಪತ್ತೆಯಾಗಿದ್ದಾರೆ ಎಂದು ಸೋನು ಅವರ ಪತಿ, ಆಟೋ ಚಾಲಕ ದೇವರಾಜು ವಿಜಯನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವೃದ್ಧೆ ಕಮಲಮ್ಮ: ಮೈಸೂರು ಕುಂಬಾರಕೊಪ್ಪಲು ಮಹದೇಶ್ವರ ಬಡಾವಣೆಯ 4ನೇ ಕ್ರಾಸ್ ನಿವಾಸಿ ಲೇಟ್ ಸೋಮಾಚಾರಿ ಅವರ ಪತ್ನಿ 80 ವರ್ಷದ ಕಮಲಮ್ಮ ಅ.31ರಂದು ನಾಪತ್ತೆಯಾಗಿದ್ದಾರೆ. ಇವರಿಗೆ ಇಬ್ಬರು ಹೆಣ್ಣು ಮತ್ತು ಇಬ್ಬರು ಪುತ್ರರಿದ್ದಾರೆ. ಆದರೆ, ಕಮಲಮ್ಮ ಮಕ್ಕಳು, ಸೊಸೆಯರೊಂದಿಗೆ ಹೊಂದಾಣಿಕೆ ಆಗದ ಕಾರಣ ಪ್ರತ್ಯೇಕವಾಗಿ ವಾಸವಿದ್ದರು ಎಂದು ಪುತ್ರ ರವಿ ವಿಜಯನಗರ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ನಾಪತ್ತೆಯಾದ ಮೂವರ ಗುರುತು ಸಾರ್ವಜನಿಕರಿಗೆ ಪತ್ತೆಯಾದಲ್ಲಿ ವಿಜಯನಗರ ಠಾಣೆ ದೂ.ಸಂ:0821–2418317, 98458–62184 ಸಂಪರ್ಕಿಸಬಹುದು ಎಂದು ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಹಿಂದೂ ಸಭಾ ಮಂದಿರದ ಬಳಿ ಹಿಂಸಾಚಾರ: ಮತ್ತೋರ್ವನ ಬಂಧನ

ಬ್ರಾಂಪ್ಟನ್: ಬ್ರಾಂಪ್ಟನ್‌ನ ಹಿಂದೂ ಸಭಾ ಮಂದಿರದಲ್ಲಿ ನಡೆದ ಪ್ರತಿಭಟನೆಯ ವೇಳೆ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ ಆರೋಪದ ಮೇಲೆ ಕೆನಡಾ ಪೊಲೀಸರು ಮತ್ತೋರ್ವನನ್ನು ಬಂಧಿಸಿದ್ದಾರೆ. ಪೀಲ್ ಪ್ರಾದೇಶಿಕ ಪೊಲೀಸರ ಹೇಳಿಕೆ ಪ್ರಕಾರ, ಕ್ರಿಮಿನಲ್ ಇನ್ವೆಸ್ಟಿಗೇಶನ್ಸ್ ಬ್ಯೂರೋದ ತನಿಖಾಧಿಕಾರಿಗಳು ಬ್ರಾಂಪ್ಟನ್‌ನ ದೇವಸ್ಥಾನದಲ್ಲಿ ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ 35 ವರ್ಷದ ಇಂದರ್‌ಜೀತ್ ಗೋಸಲ್ ಎಂಬಾತನನ್ನು ಬಂಧಿಸಿದ್ದಾರೆ. ಈತ ಕೆನಡಾದಲ್ಲಿ ಸಿಖ್ಸ್ ಫಾರ್ ಜಸ್ಟಿಸ್ (ಎಸ್‌ಎಫ್‌ಜೆ) ಸಂಘಟನೆಯ ಸಂಯೋಜಕನಾಗಿದ್ದ. ಈತನ ಬಂಧನ ಬೆನ್ನಲ್ಲೇ ಸಮಾರಂಭವೊಂದರಲ್ಲಿ ಖಲಿಸ್ತಾನಿ ಧ್ವಜವನ್ನು ಹಿಡಿದು ಭಾರತೀಯ ತ್ರಿವರ್ಣ ಧ್ವಜದ ಮೇಲೆ ನಿಂತಿರುವ ಇಂದರ್‌ಜೀತ್ ಫೋಟೊವೊಂದು ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದ್ದು, ವೈರಲ್ ಆಗಿದೆ. ನವೆಂಬರ್ 3ರಂದು ಖಲಿಸ್ತಾನ ಧ್ವಜಗಳನ್ನು ಹಿಡಿದಿದ್ದ ಪ್ರತಿಭಟನಾಕಾರರು ಕೆನಡಾದ ಬ್ರಾಂಪ್ಟನ್‌ನಲ್ಲಿರುವ ಹಿಂದೂಸಭಾ ದೇವಾಲಯದ ಆವರಣದೊಳಗೆ ನುಗ್ಗಿ, ಅಲ್ಲಿನ ಜನರೊಂದಿಗೆ ಘರ್ಷಣೆ ನಡೆಸಿದ್ದರು. ಘಟನೆಗೆ ಸಂಬಂಧಿಸಿದಂತೆ ಇಲ್ಲಿಯವರೆಗೆ ಸುಮಾರು ನಾಲ್ವರನ್ನು ಬಂಧಿಸಲಾಗಿದ್ದು, ಈ ಪೈಕಿ ಇಬ್ಬರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ.


67ನೇ ಗ್ರ್ಯಾಮಿ ಪ್ರಶಸ್ತಿಗೆ ರಿಕಿ ಕೇಜ್, ಅನೌಶ್ಕಾ ಶಂಕರ್ ನಾಮನಿರ್ದೇಶನ



ನವದೆಹಲಿ: ರಿಕಿ ಕೇಜ್ ಮತ್ತು ಅನೌಷ್ಕಾ ಶಂಕರ್ 67ನೇ ಗ್ರ್ಯಾಮಿ ಪ್ರಶಸ್ತಿಗಳಿಗೆ ನಾಮನಿರ್ದೇಶನಗೊಂಡಿದ್ದಾರೆ. ಮೂರು ಬಾರಿ ಗ್ರ್ಯಾಮಿ ವಿಜೇತರಾದ ಕೇಜ್ ಶುಕ್ರವಾರದಂದು ರೆಕಾರ್ಡಿಂಗ್ ಅಕಾಡೆಮಿಯು ಘೋಷಿಸಿದಂತೆ ಅತ್ಯುತ್ತಮ ಹೊಸ ಯುಗ, ಆಂಬಿಯೆಂಟ್ ಅಥವಾ ಚಾಂಟ್ ಆಲ್ಬಮ್ ವಿಭಾಗದಲ್ಲಿ ಬ್ರೇಕ್ ಆಫ್ ಡಾನ್‌ಗಾಗಿ 4ನೇ ನಾಮನಿರ್ದೇಶನವನ್ನು ಗಳಿಸಿದ್ದಾರೆ.

75 ಪ್ರತಿಶತಕ್ಕಿಂತಲೂ ಹೆಚ್ಚು ಹೊಸ ಗಾಯನ ಅಥವಾ ವಾದ್ಯಗಳ ಹೊಸ ಯುಗದ ಧ್ವನಿಮುದ್ರಣಗಳನ್ನು ಒಳಗೊಂಡಿರುವ ಆಲ್ಬಮ್‌ಗಳನ್ನು ಒಳಗೊಂಡಿರುವ ವರ್ಗವು, ಸಿತಾರ್ ವಾದಕ ಮತ್ತು ಸಂಯೋಜಕ ಶಂಕರ್ ಅವರ ಅಧ್ಯಾಯ II: ಹೌ ಡಾರ್ಕ್ ಇಟ್ ಈಸ್ ಬಿಫೋರ್ ಡಾನ್‌ನ್ನು ಸಹ ಒಳಗೊಂಡಿದೆ. ರಾಧಿಕಾ ವೆಕಾರಿಯಾ ಅವರ ವಾರಿಯರ್ಸ್ ಆಫ್ ಲೈಟ್, ಫ್ಲೌಟಿಸ್ಟ್ ವೂಟರ್ ಕೆಲ್ಲರ್‌ಮ್ಯಾನ್ ಮತ್ತು ಸೆಲಿಸ್ಟ್ ಎರು ಮಾಟ್ಸುಮೊಟೊ ಅವರ ಸಹಯೋಗದಲ್ಲಿ ರಚಿಸಲಾದ ವಾಣಿಜ್ಯೋದ್ಯಮಿ ಮತ್ತು ಸಂಗೀತಗಾರ್ತಿ ಚಂದ್ರಿಕಾ ಟಂಡನ್ ಅವರ ತ್ರಿವೇಣಿ ಸಹ ನಾಮನಿರ್ದೇಶನಗೊಂಡ ವರ್ಗದಲ್ಲಿ ಸ್ಥಾನಪಡೆದಿವೆ. ಶಂಕರ್, ಜಾಕೋಬ್ ಕೊಲಿಯರ್ ಅವರ ಎ ರಾಕ್ ಸಮ್ ವೇರ್ ಹಾಡಿನ ವೈಶಿಷ್ಟ್ಯಪೂರ್ಣ ಪಾತ್ರಕ್ಕಾಗಿ ಹೆಚ್ಚುವರಿ ನಾಮನಿರ್ದೇಶನ ಗಳಿಸಿದರು.

ವಿದ್ಯಾರ್ಥಿ ವೀಸಾ ಯೋಜನೆ ಸ್ಥಗಿತಗೊಳಿಸಿದ ಕೆನಡಾ



ಕೆನಡಾ: ಭಾರಿ ಜನಪ್ರಿಯತೆ ಪಡೆದಿದ್ದ 'ವಿದ್ಯಾರ್ಥಿ ನೇರ ಸ್ಟ್ರೀಮ್' ವೀಸಾ ಯೋಜನೆಯನ್ನು ಮುಕ್ತಾಯಗೊಳಿಸುವುದಾಗಿ ಕೆನಡಾ ಘೋಷಣೆ ಮಾಡಿದೆ.

ವಿದ್ಯಾರ್ಥಿ ನೇರ ಸ್ಟ್ರೀಮ್ ಅನ್ನು ಸ್ಥಗಿತಗೊಳಿಸುವುದರ ಹಿಂದೆ ಕೆನಡಾದಲ್ಲಿ ಹೆಚ್ಚುತ್ತಿರುವ ವಸತಿ ಬಿಕ್ಕಟ್ಟು ಮತ್ತು ಸಂಪನ್ಮೂಲಗಳ ಕೊರತೆಯನ್ನು ನಿಭಾಯಿಸುವ ಉದ್ದೇಶವನ್ನು ಕೆನಡಾ ಉಲ್ಲೇಖಿಸಿದೆ. ಆದರೆ ಕೆನಡಾದ ಈ ನಿರ್ಧಾರದಿಂದಾಗಿ ಭಾರತೀಯ ವಿದ್ಯಾರ್ಥಿಗಳು ಈಗ ಬಹಳಷ್ಟು ತೊಂದರೆಗಳನ್ನು ಎದುರಿಸುವ ಸಾಧ್ಯತೆ ಇದೆ. ಕಾರಣ ಈಗ ಭಾರತೀಯ ವಿದ್ಯಾರ್ಥಿಗಳು ಕೆನಡಾದ ವೀಸಾ ಪಡೆಯಲು ದೀರ್ಘ ಪ್ರಕ್ರಿಯೆಯನ್ನು ಎದುರಿಸಲಿದ್ದಾರೆ. ಕೆನಡಾ ಸರ್ಕಾರವು ತನ್ನ ವೆಬ್‌ಸೈಟ್‌ನಲ್ಲಿ ವಿದ್ಯಾರ್ಥಿ ನೇರ ಸ್ಟ್ರೀಮ್ ಯೋಜನೆ ಸ್ಥಗಿತತೆಯ ಬಗ್ಗೆ ಘೋಷಿಸಿದೆ. ಈ ಕಾರ್ಯಕ್ರಮವನ್ನು ಬಲಪಡಿಸಲು, ವಿದ್ಯಾರ್ಥಿಗಳ ಸುರಕ್ಷತೆಯನ್ನು ಹೆಚ್ಚಿಸಲು ಮತ್ತು ಸಮಾನ ಅವಕಾಶಗಳನ್ನು ಒದಗಿಸಲು ಈ ನಿರ್ಧಾರವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಲಾಗಿದೆ. ನ.8 ರಂದು ಮಧ್ಯಾಹ್ನ 2 ಗಂಟೆಯವರೆಗೆ ಸ್ವೀಕರಿಸಿದ ಎಲ್ಲಾ ಅರ್ಜಿಗಳನ್ನು ಈ ಯೋಜನೆಯಡಿಯಲ್ಲಿ ಪ್ರಕ್ರಿಯೆಗೊಳಿಸಲಾಗುವುದು ಎಂದು ತಿಳಿಸಲಾಗಿದೆ.

ನುಸುಳುಕೋರ ತಂದೆ, ಆದಿವಾಸಿ ತಾಯಿಯ ಮಕ್ಕಳಿಗೆ ಬುಡಕಟ್ಟು ಹಕ್ಕು ನೀಡುವುದಿಲ್ಲ



ರಾಂಚಿ: ಜಾರ್ಖಂಡ್‌ನಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ, ನುಸುಳುಕೋರ ತಂದೆ ಮತ್ತು ಸ್ಥಳೀಯ ಆದಿವಾಸಿ ತಾಯಿಯ ಮಕ್ಕಳಿಗೆ ಬುಡಕಟ್ಟು ಹಕ್ಕುಗಳನ್ನು ನೀಡುವುದಿಲ್ಲ ಎಂದು ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಹೇಳಿದ್ದಾರೆ.

ಪಲಮು ಜಿಲ್ಲೆಯ ಬಿಶ್ರಾಮ್‌ಪುರದಲ್ಲಿ ಚುನಾವಣಾ ರ್‍ಯಾಲಿಯನ್ನುದ್ದೇಶಿಸಿ ಮಾತನಾಡಿದ ನಡ್ಡಾ, ಜೆಎಂಎಂ ನೇತೃತ್ವದ ಸರ್ಕಾರವು ಬಾಂಗ್ಲಾದೇಶಿ ನುಸುಳುಕೋರರಿಗೆ ಆಶ್ರಯ ನೀಡಿದೆ. ಆದರೆ ಬಿಜೆಪಿ ಅಧಿಕಾರಕ್ಕೆ ಬಂದರೆ ಅವರನ್ನು ಓಡಿಸಲಾಗುವುದು ಎಂದರು.

ರಾಜ್ಯದಲ್ಲಿ ಭ್ರಷ್ಟರು ಮತ್ತು ಕಳ್ಳರು ಜೆಎಂಎಂ ನೇತೃತ್ವದ ಸರ್ಕಾರದ ಭಾಗವಾಗಿದ್ದಾರೆ. ಜಾರ್ಖಂಡ್‌ನಲ್ಲಿ ಸಿಂಗಲ್ ಇಂಜಿನ್ ಸರ್ಕಾರವನ್ನು ಕಿತ್ತೊಗೆಯುವ ಸಮಯ ಬಂದಿದೆ ಮತ್ತು ಸರ್ವತೋಮುಖ ಅಭಿವೃದ್ಧಿಗಾಗಿ ಇಲ್ಲಿ ಡಬಲ್ ಇಂಜಿನ್ ಸರ್ಕಾರ ರಚಿಸುವ ಸಮಯ ಬಂದಿದೆ ಎಂದರು. ಜಾರ್ಖಂಡ್‌ನಲ್ಲಿ ಹೇಮಂತ್ ಸೋರೆನ್ ನೇತೃತ್ವದ ಸರ್ಕಾರವು ಬಾಂಗ್ಲಾ ನುಸುಳುಕೋರರಿಗೆ ಕೆಂಪು ಹಾಸಿನ ಸ್ವಾಗತವನ್ನು ನೀಡುತ್ತಿದೆ ಎಂದು ಆರೋಪಿಸಿದ ಕೇಂದ್ರ ಗೃಹ ಸಚಿವ ಅಮಿತ್ ಶಾ, ರಾಜ್ಯದಲ್ಲಿ ಬಿಜೆಪಿ ಸರ್ಕಾರ ರಚನೆಯಾದ ತಕ್ಷಣ ಅಂತಹ ಶಕ್ತಿಗಳನ್ನು ಗಡಿಪಾರು ಮಾಡಲಾಗುವುದು ಎಂದು ಹೇಳಿದ್ದಾರೆ.

ಬಾಂಗ್ಲಾದೇಶದಲ್ಲಿ ಶೇಖ್ ಹಸೀನಾ ಪಕ್ಷದ ನೂರಕ್ಕೂ ಹೆಚ್ಚು ಕಾರ್ಯಕರ್ತರ ಬಂಧನ



ಢಾಕಾ: ಬಾಂಗ್ಲಾದೇಶದಲ್ಲಿ ಮತ್ತೊಮ್ಮೆ ರಾಜಕೀಯ ಕೋಲಾಹಲ ಉಂಟಾಗಿದೆ. ಆಗಸ್ಟ್ 2024ರಲ್ಲಿ ನಡೆದ ಸರ್ಕಾರದ ವಿರುದ್ಧದ ದಂಗೆಯ ನಂತರ ಬಾಂಗ್ಲಾದೇಶ ಇನ್ನೂ ಸ್ಥಿರವಾಗಿಲ್ಲ. ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ನೂರಾರು ಕಾರ್ಯಕರ್ತರನ್ನು ಬಾಂಗ್ಲಾದೇಶ ಸೇನೆ ಬಂಧಿಸಿದೆ. ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಅವಾಮಿ ಲೀಗ್ ಪಕ್ಷದ ಬೆಂಬಲಿಗರು ಬಾಂಗ್ಲಾದೇಶದ ರಾಜಧಾನಿಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಲು ಮುಂದಾದ ವೇಳೆ ಈ ಘಟನೆ ನಡೆದಿದೆ. ಇದಕ್ಕೂ ಮೊದಲು, ಬಾಂಗ್ಲಾದೇಶದ ಮಧ್ಯಂತರ ಸರ್ಕಾರವು ಶನಿವಾರ ಅವಾಮಿ ಲೀಗ್ ನಡೆಸಲು ಉದ್ದೇಶಿಸಿದ್ದ ರ್‍ಯಾಲಿಯನ್ನು ಆಯೋಜಿಸಲು ಅನುಮತಿ ನೀಡುವುದಿಲ್ಲ ಎಂದು ಸ್ಪಷ್ಟಪಡಿಸಿತ್ತು. ಅವಾಮಿ ಲೀಗ್‌ನ ಸಭೆ ಮತ್ತು ಪ್ರತಿಭಟನೆಗಳನ್ನು ತಡೆಯಲು ಢಾಕಾದ ಹಲವು ಪ್ರದೇಶಗಳಲ್ಲಿ ಸೇನೆ ಮತ್ತು ಪೊಲೀಸರನ್ನು ನಿಯೋಜಿಸಲಾಗಿದೆ.

ಅರಮನೆಗೆ ಪ್ರವೇಶ ಶುಲ್ಕ ಒಂಬತ್ತು ಪಟ್ಟು ಹೆಚ್ಚಾದರೂ ವಿದೇಶಿ ಪ್ರವಾಸಿಗರು ಭೇಟಿ ದುಪ್ಪಟ್ಟು!

ಇದೇ ಅ.25ರಿಂದ 31ರವರೆಗೆ 952 ವಿದೇಶಿ ಪ್ರವಾಸಿಗರು ಅರಮನೆಗೆ ಭೇಟಿ, 2023ರ ಇದೇ ಅವಧಿಯಲ್ಲಿ 634 ವಿದೇಶಿಗರು ಭೇಟಿ



ಭಾನುವಾರ ಮೈಸೂರು ಅರಮನೆಗೆ ಭೇಟಿ ನೀಡಿದ್ದ ವಿದೇಶಿ ಪ್ರವಾಸಿಗರು.

ಮೈಸೂರು,ನ.10(ಪಿಎಂ)– ಅರಮನೆಗೆ ವಿದೇಶಿ ಪ್ರವಾಸಿಗರ ಪ್ರವೇಶ ಶುಲ್ಕವನ್ನು ಒಂಬತ್ತು ಪಟ್ಟು ಹೆಚ್ಚಿಸಿದರೂ ವಿದೇಶಿಗರ ಭೇಟಿ ಮಾತ್ರ ದುಪ್ಪಟ್ಟಾಗಿದೆ! ಹೌದು, ಅಕ್ಟೋಬರ್ ಕೊನೆ ವಾರದಲ್ಲಿ ಮೈಸೂರು ಅರಮನೆ ಪ್ರವೇಶ ಶುಲ್ಕವನ್ನು ವಿದೇಶಿ ಪ್ರವಾಸಿಗರಿಗೆ 100 ರೂ.ನಿಂದ ಸಾವಿರ ರೂ.ವರೆಗೆ ಅಂದರೆ, ಒಂಬತ್ತು ಪಟ್ಟು ಹೆಚ್ಚಿಸಿದಾಗ, ಪ್ರವಾಸೋದ್ಯಮದ ವಿವಿಧ ವಲಯಗಳಿಂದ ಇದಕ್ಕೆ ಭಾರೀ ವಿರೋಧ ವ್ಯಕ್ತವಾಯಿತು.

ಅಲ್ಲದೆ, ಮೈಸೂರು ಅರಮನೆ ಮಂಡಳಿಯ ಈ ಕ್ರಮದಿಂದ ಅರಮನೆಗೆ ಭೇಟಿ ನೀಡುವ ವಿದೇಶಿಗರ ಸಂಖ್ಯೆ ಇಳಿಮುಖಗೊಳ್ಳುತ್ತದೆ ಎಂದೇ ವಿಶ್ಲೇಷಿಸಲಾಗಿತ್ತು. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಅರಮನೆಗೆ ವಿದೇಶಿ ಪ್ರವಾಸಿಗರ ಸಂಖ್ಯೆ ಹೆಚ್ಚಳವೇ ಆಗಿದೆ. ಅರಮನೆ ಮಂಡಳಿಯ ಅಂಕಿ–ಅಂಶಗಳೇ ಇದನ್ನು ಹೇಳುತ್ತಿವೆ. ಅಂಕಿ–ಅಂಶಗಳ ಪ್ರಕಾರ ಅಕ್ಟೋಬರ್ 25ರಿಂದ 31ರವರೆಗೆ ಒಟ್ಟು 952 ವಿದೇಶಿ ಪ್ರವಾಸಿಗರು ಅರಮನೆಗೆ ಭೇಟಿ ನೀಡಿದ್ದಾರೆ.

ಕಳೆದ ವರ್ಷ 2023ರ ಇದೇ ಅವಧಿಯಲ್ಲಿ 634 ವಿದೇಶಿ ಪ್ರವಾಸಿಗರು ಭೇಟಿ ನೀಡಿದ್ದರು. ಕೋವಿಡ್ ಆತಂಕವಿದ್ದ 2022ರ ಇದೇ ಅವಧಿಯಲ್ಲಿ 310 ವಿದೇಶಿಗರ ಮಾತ್ರ ಭೇಟಿ ನೀಡಿದ್ದರು. ಆದರೆ ಈಗ ಶುಲ್ಕ ಹೆಚ್ಚಾದರೂ ಅರಮನೆ ಅಂದಕ್ಕೆ ವಿದೇಶಿಗರ ಮನಸೋತು ಹಿಂದಿನ ವರ್ಷಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ.

> “ಕಳೆದ ಎರಡು ವರ್ಷಗಳಿಗೆ ಹೋಲಿಸಿದರೆ ಈ ಬಾರಿ ಶುಲ್ಕ ಹೆಚ್ಚಳವಿದ್ದರೂ ವಿದೇಶಿ ಪ್ರವಾಸಿಗರು ಅರಮನೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭೇಟಿ ನೀಡುತ್ತಿದ್ದಾರೆ. ಯಾವುದೇ ವಿದೇಶಿಗರು ಈ ದರ ದುಬಾರಿ ಎಂದಾಗಲಿ, ಕಡಿಮೆ ಮಾಡಬೇಕೆಂದಾಗಲಿ ಈವರೆಗೆ ಕೇಳಿಲ್ಲ. ಈಗ ವಿದೇಶಿಗರ ಭೇಟಿ ಎರಡು ಪಟ್ಟು ಹೆಚ್ಚೇ ಆಗಿದೆ.
>
> –ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕರು, ಮೈಸೂರು ಅರಮನೆ ಮಂಡಳಿ, ಮೈಸೂರು.

2024ರ ನ.1ರಿಂದ 6ರವರೆಗೆ 899 ವಿದೇಶಿಗರ ಭೇಟಿ ನೀಡಿದ್ದಾರೆ. ಅಂತೆಯೇ 2023ರ ಇದೇ ಅವಧಿಯಲ್ಲಿ 781 ಮತ್ತು 2022ರ ಇದೇ ಅವಧಿಯಲ್ಲಿ 389 ವಿದೇಶಿಗರರು ಅರಮನೆಗೆ ಭೇಟಿ ನೀಡಿದ್ದರು. ಈ ಹಿನ್ನೆಲೆಯಲ್ಲಿ ಪ್ರವೇಶ ಶುಲ್ಕ ಪರಿಷ್ಕರಣೆಯಲ್ಲಿ ದರ ದುಪ್ಪಟ್ಟಾದರೂ ಅರಮನೆಗೆ ವಿದೇಶಿಗರು ಭೇಟಿ ನೀಡುವಲ್ಲಿ ಯಾವುದೇ ಇಳಿಕೆ ಉಂಟಾಗಿಲ್ಲ ಎಂದೇ ವಿಶ್ಲೇಷಿಸಲಾಗುತ್ತಿದೆ.

ಅರಮನೆ ಮಂಡಳಿಯು ಅಕ್ಟೋಬರ್ 25ರಿಂದ ಜಾರಿಗೆ ಬರುವಂತೆ ಎಲ್ಲಾ ವಿಧದ ಪ್ರವೇಶ ಶುಲ್ಕವನ್ನು ಪರಿಷರಣೆ ಮಾಡಿತು. ಆದರೆ ಈ ಪೈಕಿ ವಿದೇಶಿ ಪ್ರವಾಸಿಗರ ಪ್ರವೇಶ ಶುಲ್ಕ 9 ಪಟ್ಟು ಹೆಚ್ಚಿಸಿತು. ಅರಮನೆ ಒಳಾವರಣದಲ್ಲಿ ಬರುವ ಚಪ್ಪಲಿ ಸ್ಟ್ಯಾಂಡ್, ಲಗ್ಗೇಜ್ ಕೊಠಡಿ ಹಾಗೂ ಶೌಚಾಲಯ ಸೇವೆಯನ್ನು ಉಚಿತವಾಗಿ ಒದಗಿಸುವ ವ್ಯವಸ್ಥೆ ಸಹ ಜಾರಿಗೊಳಿಸಿತು.

ಈ ನಡುವೆ ವಿದೇಶಿ ಪ್ರವಾಸಿಗರ ಪ್ರವೇಶಕ್ಕೆ ನಿಗದಿ ಮಾಡಿದ ದರಕ್ಕೆ ಸಂಬಂಧಿಸಿದಂತೆ ಮೈಸೂರು ಪ್ರವಾಸೋದ್ಯಮದ ವಿವಿಧ ವಲಯಗಳಿಂದ ವ್ಯಾಪಕ ವಿರೋಧ ವ್ಯಕ್ತವಾಯಿತು. ಈ ಕ್ರಮವು ವಿದೇಶಿಗರು ಅರಮನೆಗೆ ಭೇಟಿ ನೀಡುವುದಕ್ಕೆ ಹಿಂದೇಟು ಹಾಕುವುದಕ್ಕೆ ಎಡೆಯಾಗುತ್ತದೆ ಎಂದು ಎಚ್ಚರಿಸಿದ್ದರು. ಇದೀಗ ಅಂಕಿ ಅಂಶಗಳು ಇದಕ್ಕೆ ವ್ಯತಿರಿಕ್ತವಾಗಿದೆ. ಅದಾಗ್ಯೂ ಪ್ರವಾಸೋದ್ಯಮ ವಲಯದ ಅನೇಕರು ಈ ರೀತಿಯ ಹೆಚ್ಚಳವು ಒಂದಲ್ಲಾ ಒಂದು ರೀತಿಯಲ್ಲಿ ವ್ಯತಿರಿಕ್ತ ಪರಿಣಾಮ ಉಂಟು ಮಾಡುತ್ತದೆ ಎನ್ನುತ್ತಿದ್ದಾರೆ. ಮಂಡಳಿಯು ಕನಿಷ್ಠ 500 ರೂ. ದರ ನಿಗದಿಗೆ ಇಳಿಸುವುದು ಸೂಕ್ತವಾಗುತ್ತದೆ ಎಂದು ಹೆಸರೇಳಲಿಚ್ಛಿಸದ ಟೂರ್ ಆಪರೇಟರ್ ಸಹ ಹೇಳಿದರು.

ಮೈಸೂರಿನ ಮೂಲಸೌಕರ್ಯ ಬದಲಾವಣೆಗೆ ಸುಸ್ಥಿರ ಪರಿಹಾರ ಅಗತ್ಯ

ನಗರಪಾಲಿಕೆ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್ ಅಭಿಮತ





ಮೈಸೂರಿನ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ (ವಿವಿಸಿಇ) ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಆಯೋಜಿಸಿದ್ದ ಸ್ಮಾರ್ಟ್ ಕ್ಯಾಂಪಸ್‌ಗಾಗಿ ಸುಸ್ಥಿರ ಪರಿಹಾರಗಳ ಕುರಿತ ರಾಜ್ಯ ಮಟ್ಟದ ಹ್ಯಾಕಥಾನ್‌ನಲ್ಲಿ ಮೈಸೂರು ಮಹಾನಗರ ಪಾಲಿಕೆ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್ ಮಾತನಾಡಿದರು.

ಮೈಸೂರು, ನ.10– ನಗರದ ಮೂಲ ಸೌಕರ್ಯದಲ್ಲಿ ಹೊಸ ಬದಲಾವಣೆಗಳನ್ನು ತರಲು ಸುಸ್ಥಿರ ಪರಿಹಾರಗಳು ಅತ್ಯಗತ್ಯ ಎಂದು ಮೈಸೂರು ಮಹಾನಗರಪಾಲಿಕೆಯ ಕಾರ್ಯನಿರ್ವಾಹಕ ಇಂಜಿನಿಯರ್ ದೀಪಕ್ ಹೇಳಿದರು.

ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್ (ವಿವಿಸಿಇ) ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್ ಎಂಜಿನಿಯರಿಂಗ್ ವಿಭಾಗವು ಆಯೋಜಿಸಿದ್ದ ಸ್ಮಾರ್ಟ್ ಕ್ಯಾಂಪಸ್‌ಗಾಗಿ ಸುಸ್ಥಿರ ಪರಿಹಾರಗಳ ಕುರಿತ ರಾಜ್ಯ ಮಟ್ಟದ ಹ್ಯಾಕಥಾನ್‌ನಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೈಸೂರು ನಗರದಲ್ಲಿ ಸಾಂಪ್ರದಾಯಿಕ ಬೀದಿದೀಪಗಳನ್ನು ಬದಲಾಯಿಸಿ, ಇಂಧನ–ಸಮರ್ಥ ಎಲ್‌ಇಡಿ ದೀಪಗಳನ್ನು ಅಳವಡಿಸುವ ಮೂಲಕ ವಿದ್ಯುತ್ ಬಿಲ್ ಅನ್ನು ಶೇ.50ರಷ್ಟು ಕಡಿಮೆಯಾಗಲು ಸಹಕಾರಿಯಾಗಿದೆ. ಹಿಂದೆ ನಾವು ವಿದ್ಯುತ್‌ಗಾಗಿ 50 ಕೋಟಿ ರೂ. ಖರ್ಚು ಮಾಡುತ್ತಿದ್ದೆವು, ಆದರೆ ಈಗ ಅದು 25 ಕೋಟಿ ರೂಪಾಯಿಗೆ ಇಳಿಸಲಾಗಿದೆ ಎಂದು ದೀಪಕ್ ಅಂಕಿ–ಅಂಶಗಳ ಸಮೇತ ವಿವರಿಸಿದರು.

ಹೊಸ ವಿಧಾನವನ್ನು ಇತರ ಸೇವೆಗಳಾದ ಒಳಚರಂಡಿ ಸಂಸ್ಕರಣಾ ಘಟಕಗಳು (ಎಸ್‌ಟಿಪಿ) ಮತ್ತು ನೀರು ನಿರ್ವಹಣಾ ವ್ಯವಸ್ಥೆಗಳಿಗೆ ಅಳವಡಿಸಿಕೊಳ್ಳಬಹುದು. ಇದರಿಂದಾಗಿ ಶೇ.50ಕ್ಕೂ ಹೆಚ್ಚು ವೆಚ್ಚ ಉಳಿತಾಯ ಮಾಡಬಹುದು. ಜೊತೆಗೆ ನಾಗರಿಕರಿಗೆ ನೀಡುವ ಸೇವೆಗಳು ಕೂಡ ಸುಧಾರಿಸಲಿದ್ದು, ಜನರಿಗೆ ಉತ್ತಮ ಸೇವೆಗಳನ್ನು ಒದಗಿಸಲು ಸಹಕಾರಿಯಾಗಲಿದೆ. ನಾವು ಈ ಹೊಸ ಉಳಿತಾಯ ವಿಧಾನಗಳನ್ನು ಇತರ ಇಲಾಖೆಗಳಿಗೂ ವಿಸ್ತರಿಸಿದರೆ, ಹಣ ಉಳಿತಾಯ ಮಾಡಬಹುದು. ಮೈಸೂರು ಮಹಾನಗರಪಾಲಿಕೆಯಲ್ಲಿ ವ್ಯಾಪಕವಾದ ಸಂಭಾವ್ಯ ಯೋಜನೆಗಳನ್ನು ಅನ್ವೇಷಿಸಲು ಮತ್ತು ವಿವಿಧ ಸವಾಲುಗಳನ್ನು ಎದುರಿಸಲು ಸುಸ್ಥಿರ ಪರಿಹಾರಗಳನ್ನು ಎಲ್ಲರೂ ಕೈಜೋಡಿಸಬೇಕೆಂದು ದೀಪಕ್ ಕರೆ ನೀಡಿದರು.

ವಿವಿಸಿಇಯ ಪ್ರಾಂಶುಪಾಲ ಬಿ.ಸದಾಶಿವೇಗೌಡ, ಕ್ಷಿಪ್ರ ಕಲಿಕೆ ಮತ್ತು ನಾವೀನ್ಯತೆಗೆ ಸಾಧನವಾಗಿ ಹ್ಯಾಕಥಾನ್‌ಗಳ ಪ್ರಾಮುಖ್ಯತೆಯನ್ನು ವಿವರಿಸಿದರು. ಶ್ರೀಶೈಲ ರಾಮಣ್ಣನವರ್ (ಖಜಾಂಚಿ), ಗೋಪಾಲ್‌ರೆಡ್ಡಿ, ಪ್ರಾಧ್ಯಾಪಕರಾದ ಸವ್ಯಸಾಚಿ, ಅವಿನಾಶ್, ಕಾರ್ತಿಕ್ ಮತ್ತು ಭೂಷಿತ್ ಇನ್ನಿತರರು ಉಪಸ್ಥಿತರಿದ್ದರು.

ಇಂದಿನ ಮನಸ್ಸುಗಳಿಗೆ 12ನೇ ಶತಮಾನದ ಶರಣರ ಬದುಕು ಶುದ್ಧೀಕರಿಸುವ ಬೆಳಕಾಗಿದೆ



ಮೈಸೂರಿನ ವಿಜಯನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ವೃತ್ತಿ ಕಾರ್ಯಕ್ರಮವನ್ನು ಡಾ. ಎಚ್.ಬಿ.ಬೆಟ್ಟಸ್ವಾಮಿ ಉದ್ಘಾಟಿಸಿದರು.

ಮೈಸೂರು,ನ.10– ಕಲುಷಿತಗೊಂಡಿರುವ ಮನುಷ್ಯನ ಇಂದಿನ ಮನಸ್ಸುಗಳಿಗೆ 12ನೇ ಶತಮಾನದ ಶರಣರ ಬದುಕು ಶುದ್ಧೀಕರಿಸುವ ಬೆಳಕಾಗಿದೆ ಎಂದು ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯದ ಅಧ್ಯಾಪಕ ಡಾ.ಎಚ್.ಬಿ.ಬೆಟ್ಟಸ್ವಾಮಿ ಹೇಳಿದರು.

ಮೈಸೂರಿನ ವಿಜಯನಗರದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯಲ್ಲಿ ಶರಣ ಸಾಹಿತ್ಯ ಪರಿಷತ್ತು ವತಿಯಿಂದ ಹಮ್ಮಿಕೊಂಡಿದ್ದ ವೃತ್ತಿ ಕಾರ್ಯಕ್ರಮವನ್ನು ಗಿಡಕ್ಕೆ ನೀರೆರೆಯುವುದರ ಮೂಲಕ ಉದ್ಘಾಟಿಸಿ, ಮಾತನಾಡಿದರು.

ಇಂದಿನ ಎಳೆಯ ಮನಸ್ಸುಗಳಲ್ಲಿ ಸಮಾನತೆ, ಸಹಬಾಳ್ವೆ, ಸೃಜನ ಶೀಲತೆಯ ಸಂಸ್ಕೃತಿಯನ್ನು ಬಿತ್ತುವ ಕೆಲಸ ವಚನಕಾರರ ಓದಿನಿಂದ ಸಾಧ್ಯ. ಅತ್ತಲಿತ್ತಲು ಹೋಗದಂತೆ ಹೆಳವನ ಮಾಡಯ್ಯ ತಂದೆ ಬಸವಣ್ಣನವರ ವಚನವನ್ನು ಹೇಳಿ, ಇವತ್ತಿನ ಸಮಾಜಕ್ಕೆ ಬುದ್ಧಿ ಭಾವ ಕ್ರಿಯೆ ಸಮತೋಲನವಾಗಿ ಬೆಳೆಸಿಕೊಳ್ಳಲು ದಿನಕ್ಕೆ ಒಂದಾದರೂ ವಚನಗಳನ್ನು ಓದಿ ಅನುಷ್ಠಾನಕ್ಕೆ ತರುವ ಪ್ರಯತ್ನ ಆಗಬೇಕಾಗಿದೆ ಎಂದು ಹೇಳಿದರು.

ಮನುಷ್ಯತ್ವವನ್ನು ಅರಳಿಸುವ ಶಿಕ್ಷಣ ಬೇಕಾಗಿದೆ. ಆದರೆ ಇಂದು ಶಿಕ್ಷಣದಲ್ಲಾಗಲೀ, ಮಾಧ್ಯಮಗಳಲ್ಲಾಗಲೀ ಕೆರಳಿಸುವ ಅಂಶಗಳಿವೆ ಎಂದು ವಿಷಾದ ವ್ಯಕ್ತಪಡಿಸಿದರು. ಅದಕ್ಕೆ ಭೂಮಂಡಲದ ಸರ್ವ ಜನಾಂಗದ ಸುಸಂಸ್ಕೃತವಾದ ಬದುಕಿಗೆ ಶರಣರ ಮಾರ್ಗವನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲವೆಂದು ಶರಣ ಸಾಹಿತ್ಯ ಪರಿಷತ್ತು ಈ ದೆಸೆಯಲ್ಲಿ ಶಾಲಾ ಕಾಲೇಜುಗಳಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮ ಮೆಚ್ಚುವಂತದ್ದು ಎಂದು ಹೇಳಿದರು.

ದತ್ತಿದಾನಿಗಳಾದ ಮೋಹನ್ ಶಂಕರ್, ತಮ್ಮ ಹಿರಿಯರ ನೆನಪಿನಲ್ಲಿ ಮಕ್ಕಳಿಗೆ ನಡೆಸುವ ಜ್ಞಾನದ ಸಹ ಕಾರ್ಯಕ್ರಮ ಸಂತೋಷ ತಂದಿದೆ ಎಂದರು. ವಿದ್ಯಾರ್ಥಿಗಳು ಶರಣರ ಕುರಿತು ಭಾಷಣ ಸ್ಪರ್ಧೆಯಲ್ಲಿ ಭಾಗವಹಿಸಿ ಶರಣರ ಪರಿಚಯ ಮಾಡಿಸಿಕೊಟ್ಟರು. ವೇಷ–ಭೂಷಣರೊಂದಿಗೆ ಮಾತನಾಡಿದ್ದು ಒಂದು ವಿಶೇಷ ಎನಿಸಿತು ಸ್ಪರ್ಧೆಯಲ್ಲಿ ಐಶ್ವರ್ಯ, ಯಶ ಸ್ವಿನಿ, ನಿಸರ್ಗ, ಪೂಜಾ, ಮನೋಜ್, ಯೋಗಿತಾ ಅವರು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ ಬಹುಮಾನ ಪಡೆದರು.

ಪಾಲುದಾರರಾದ ಕಾಂತರಾಜು ಮತ್ತು ನಾಗೇಶ್ ಬಹುಮಾನ, ಪ್ರಮಾಣ ಪತ್ರ ವಿತರಿಸಿದರು. ಮ.ಗು.ಸದಾನಂದ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ನಂದೀಶ್ ದತ್ತಿ ದಾನಿಗಳ ಪರಿಚಯ ಮಾಡಿಕೊಟ್ಟರು. ದಿವ್ಯ ಸ್ವಾಗತಿಸಿದರೆ, ಚನ್ನಬಸಪ್ಪ ವಂದಿಸಿದರೆ, ಸಿದ್ದಲಿಂಗಪ್ಪ ನಿರೂಪಿಸಿದರು. ಪ್ರಸಾದ್, ಚಿನ್ನಸ್ವಾಮಿ, ಶಿವಕುಮಾರ್, ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಯುವ ಉದ್ಯಮಿ ಸಂದೇಶ್‌ಗೆ ಹುಟ್ಟುಹಬ್ಬದ ಅಭಿನಂದನೆ



ವಾಣಿಜ್ಯೋದ್ಯಮಿ, ಚಲನಚಿತ್ರ ನಿರ್ಮಾಪಕ ಸಂದೇಶ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಹೋಟೆಲ್ ಸಂದೇಶ್ ಗ್ರೂಪ್ಸ್‌ನ ಮ್ಯಾನೇಜರ್ ಹಾಗೂ ಸಿಬ್ಬಂದಿ ವರ್ಗದವರು ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಿದರು.

ಯದುವೀರ್ ಒಡೆಯರ್ ಅವರಿಗೆ ಅಭಿನಂದನೆ...



ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿರುವ ಶ್ರೀರಾಮು ಗೆಳೆಯರ ಬಳಗದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಮೈಸೂರು–ಕೊಡಗು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಮಾಜ ಸೇವಕರಾದ ಎಸ್.ಶ್ರೀಕಾಂತ್ ಅವರನ್ನು ಅಭಿನಂದಿಸಲಾಯಿತು. ಚಿತ್ರದಲ್ಲಿ ಬಸವ ಬಳಗದ ಅಧ್ಯಕ್ಷ ಪ್ರದೀಪ್‌ಕುಮಾರ್, ಬಳಗದ ಅಧ್ಯಕ್ಷ ಎಸ್.ಸಿ.ಸಂದೀಪ್‌ಕುಮಾರ್, ಕೆ.ಆರ್.ಬ್ಯಾಂಕ್ ಅಧ್ಯಕ್ಷ ಬಸಪ್ಪ, ಎಂ.ಜಿ.ಮೋಟಾರ್ಸ್‌ನ ಶ್ರೀಧರ್ ಇತರರಿದ್ದಾರೆ.

ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಲ್ಲಿ ಮಕ್ಕಳ ದಿನಾಚರಣೆ



ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಲ್ಲಿ ಮಕ್ಕಳ ದಿನ ಆಚರಿಸಲಾಯಿತು.

ಮೈಸೂರು, ನ.10–ಮೈಸೂರಿನ ಸಂತ ಜೋಸೆಫರ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ಶಿಕ್ಷಕರಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು.

ಶಿಕ್ಷಕರು ನೃತ್ಯ ಮಾಡುವ ಮೂಲಕ, ಹಾಡುವ ಮೂಲಕ ಮಕ್ಕಳ ಮನಗೆದ್ದರು. ಶಿಕ್ಷಕರು ಕಾರ್ಯಕ್ರಮದಲ್ಲಿ ಬೆರೆತ ರೀತಿ ಕಾರ್ಯಕ್ರಮದ ಗುಣಮಟ್ಟವನ್ನು ಇಮ್ಮಡಿಗೊಳಿಸಿತು. ಕಾರ್ಯಕ್ರಮದಲ್ಲಿ ಮಾತನಾಡಿದ ಎಂ.ಡಿ.ಇ.ಎಸ್‌ನ ಕಾರ್ಯದರ್ಶಿ ಎಡ್ವರ್ಡ್ ವಿಲಿಯಂ ಸಾಲ್ಡಾನ ಅವರು, ಶಿಕ್ಷಕರ ಉತ್ಸಾಹವನ್ನು ಶ್ಲಾಘಿಸಿದರು. ನಾವು ಬೆಳೆಯುತ್ತಾ ಹೋದಂತೆ ನಮ್ಮೊಳಗಿನ ಮಗುವನ್ನು ನಾವು ಜೋಪಾನವಾಗಿ ನೋಡಿಕೊಳ್ಳಬೇಕೆಂದು ತಿಳಿಹೇಳಿದರು. ಈ ಕಾರಣದಿಂದಾಗಿಯೇ ಇಂದು ಮಕ್ಕಳ ದಿನಾಚರಣೆ ಅಗತ್ಯವಿದೆ ಎಂದು ಅವರು ಅಭಿಪ್ರಾಯಪಟ್ಟರು.

ಇಂದಿನ ಮಕ್ಕಳು ವಯಸ್ಕರಂತೆ ವರ್ತಿಸುತ್ತಾ ಅವರೊಳಗಿನ ಮುಗ್ಧತೆಯನ್ನು ಕಳೆದುಕೊಳ್ಳುತ್ತಿದ್ದಾರೆ, ಅಂತೆಯೇ ಇದು ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ನಡುವಿನ ಅಂತರಕ್ಕೆ ಕಾರಣವಾಗುತ್ತಿದೆ ಎಂದ ಅವರು, ಆಗಾಗ್ಗೆ ಅಡ್ಡದಾರಿಗಳಿಂದ ಸಿಗುವ ಸೌಕರ್ಯಕ್ಕಿಂತ ತ್ಯಾಗದ ಅಗತ್ಯವಿರುವ ಸಂತೋಷವನ್ನು ಹುಡುಕಲು ಅವರು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿದರು. ಕಾರ್ಯಕ್ರಮದಲ್ಲಿ ಎಂ.ಡಿ.ಇ.ಎಸ್‌ನ ಖಜಾಂಚಿ ರೆವೆರೆಂಡ್ ಫಾದರ್ ನವೀನ್‌ಕುಮಾರ್ ಎ, ಸಂಸ್ಥೆಯ ತರಬೇತಿ ಮತ್ತು ಅಭಿವೃದ್ಧಿ ವಿಭಾಗದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸೆಬಿ ಮಾವೇಲಿ, ಕಾಲೇಜಿನ ಪ್ರಾಂಶುಪಾಲ ಚಂದ್ರಶೇಖರ, ಉಪ ಪ್ರಾಂಶುಪಾಲರಾದ ಶ್ರೀಮತಿ ಶಿಲ್ಪಾ, ವಿಭಾಗದ ಮುಖ್ಯಸ್ಥರು, ವಿದ್ಯಾರ್ಥಿ ಸಂಘದ ಪದಾಧಿಕಾರಿ, ವಿಭಾಗದ ಸಂಯೋಜಕರು, ವರ್ಗದ ಪ್ರಿಫೆಕ್ಟ್‌ಗಳು, ಕಾಲೇಜಿನ ಬೋಧಕ, ಬೋಧಕೇತರ ವೃಂದ ಮತ್ತು ಸುಮಾರು 1000ಕ್ಕೂ ಅಧಿಕ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಸಿಲಿಕಾಥನ್–2024 ಕ್ರೀಡಾಕೂಟ ಉದ್ಘಾಟನೆ

ಕ್ರೀಡೆಯೊಂದಿಗೆ ಓದಿನಲ್ಲೂ ಗಮನಹರಿಸಲು ಕರೆ



ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಆಯೋಜಿಸಿದ್ದ ಸಿಲಿಕಾಥನ್–2024 ಕ್ರೀಡಾಕೂಟವನ್ನು ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಉದ್ಘಾಟಿಸಿದರು.

ಮೈಸೂರು, ನ.10(ಜಿಎ)–ವಿದ್ಯಾರ್ಥಿಗಳು ಕ್ರೀಡಾ ಚಟುವಟಿಕೆಯ ಜೊತೆಗೆ ಓದಿನತ್ತಲೂ ಗಮನಕೊಡಬೇಕು ಎಂದು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ತಿಳಿಸಿದರು.

ಮೈಸೂರಿನ ಲಲಿತಾದ್ರಿಪುರದಲ್ಲಿರುವ ಸಿಲಿಕಾನ್ ಸಿಟಿ ಇಂಟರ್‌ನ್ಯಾಷನಲ್ ಶಾಲೆಯಲ್ಲಿ ಆಯೋಜಿಸಿದ್ದ ಸಿಲಿಕಾಥನ್ 2024 ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಅವರು, ಇಂದು ದೇಶದಲ್ಲಿ ಕ್ರೀಡೆಗಳಲ್ಲಿ ಭಾಗವಹಿಸಿ ಪದಕ ಸಂಪಾದಿಸುವ ಕ್ರೀಡಾಪಟುಗಳಿಗೆ ಸರ್ಕಾರಿ ಉದ್ಯೋಗಗಳು ಹೇರಳವಾಗಿ ಸಿಗುತ್ತಿವೆ. ರೈಲ್ವೆ ಮುಂತಾದ ಇಲಾಖೆಗಳಲ್ಲಿ ಹಲವಾರು ಕ್ರೀಡಾಪಟುಗಳು ಕಾರ್ಯನಿರ್ವಹಿಸುತ್ತಿದ್ದಾರೆ. ವಿದ್ಯಾಭ್ಯಾಸದಲ್ಲೂ ಮತ್ತು ಸರ್ಕಾರಿ ಉದ್ಯೋಗಗಳಲ್ಲೂ ಕ್ರೀಡಾ ವಿಭಾಗಕ್ಕೆ ಮೀಸಲಿನ ವ್ಯವಸ್ಥೆಯಿದೆ. ಕ್ರೀಡೆಗಳಲ್ಲಿ ಭಾಗವಹಿಸುವುದರಿಂದ ದೈಹಿಕ ಆರೋಗ್ಯದ ಜೊತೆ ಮಾನಸಿಕ ಆರೋಗ್ಯವೂ ವೃದ್ಧಿಯಾಗುತ್ತದೆ. ಹಾಗಾಗಿ ಎಲ್ಲಾ ಪೋಷಕರು ತಮ್ಮ ಮಕ್ಕಳನ್ನು ಕ್ರೀಡಾ ಚಟುವಟಿಕೆಗಳ ಜೊತೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಭಾಗವಹಿಸುವಂತೆ ಪ್ರೋತ್ಸಾಹಿಸಬೇಕು ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ. ನಿಂಗರಾಜ್‌ಗೌಡ ಮಾತನಾಡಿ, ಗ್ರೀಕ್, ಈಜಿಪ್ಟ್, ಭಾರತ ಸೇರಿದಂತೆ ಕ್ರೀಡಾ ಚಟುವಟಿಕೆಗಳಿಗೆ ನಾಲ್ಕು ಸಾವಿರ ವರ್ಷಗಳ ಇತಿಹಾಸವಿದೆ. ಭಾರತದಲ್ಲಿ ದೇಸಿ ಆಟಗಳಾದ ಕಬಡ್ಡಿ, ಖೋ ಖೋ, ಹಾಕಿ ಮುಂತಾದ ಕ್ರೀಡೆಗಳು ಪ್ರಸಿದ್ಧಿ ಪಡೆದಿವೆ. ಕ್ರೀಡೆಗಳು ಜೀವನದಲ್ಲಿ ಶಿಸ್ತು ತರುತ್ತವೆ. ಇದು ಖಂಡಿತವಾಗಿಯೂ ಸಮರ್ಪಣೆ ಮತ್ತು ತಾಳ್ಮೆಯ ಮೌಲ್ಯಗಳನ್ನು ಕಲಿಸುತ್ತದೆ. ಸೋಲುಗಳನ್ನು ಹೇಗೆ ನಿಭಾಯಿಸಬೇಕು ಎಂಬುದನ್ನು ಕ್ರೀಡೆಗಳು ಜನರಿಗೆ ಕಲಿಸುತ್ತವೆ. ಎಲ್ಲಕ್ಕಿಂತ ಹೆಚ್ಚಾಗಿ, ಕ್ರೀಡೆಯು ವ್ಯಕ್ತಿಗಳ ಆಲೋಚನಾ ಸಾಮರ್ಥ್ಯವನ್ನು ಸುಧಾರಿಸುತ್ತವೆ. ಕ್ರೀಡೆಗಳು ಖಂಡಿತವಾಗಿಯೂ ಮನಸ್ಸನ್ನು ಚುರುಕುಗೊಳಿಸುತ್ತವೆ ಎಂದರು.

ಸಿಲಿಕಾಥನ್‌ನಲ್ಲಿ ಮೈಸೂರಿನ ವಿವಿಧ ಶಾಲೆಗಳ 350ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪಾಲ್ಗೊಂಡು, 12 ವಿವಿಧ ಸ್ಪರ್ಧೆಗಳಲ್ಲಿ ಸ್ಪರ್ಧಿಸಿದರು. ಸಂಸ್ಥೆಯ ಕಾರ್ಯದರ್ಶಿ ಎಲ್.ರವಿ, ಶಾಲೆಯ ಪ್ರಾಂಶುಪಾಲೆ ಡಾ.ದೀಪ್ತಿ ಚತುರ್ವೇದಿ, ಕೆ.ಎನ್.ಸಂತೋಷ್, ಎಂ.ಮೋಹನ್ ಉಪಸ್ಥಿತರಿದ್ದರು.

ಇಂದು ರಂಗಕರ್ಮಿ ಗೋವಿಂದಗೌಡ ಸಂದರ್ಶನ



ಮೈಸೂರು, ನ.10– ರಂಗಕರ್ಮಿ ಎಚ್.ಎಸ್. ಗೋವಿಂದ ಗೌಡರ ಸಂದರ್ಶನ ದೂರದರ್ಶನ ಚಂದನದಲ್ಲಿ ನ.11 ರಂದು ಬೆಳಗ್ಗೆ 8 ಗಂಟೆಗೆ ನೇರಪ್ರಸಾರವಾಗಲಿದೆ.

ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಉಪಆಯುಕ್ತರಾಗಿ ಸೇವೆ ಸಲ್ಲಿಸಿ ನಿವೃತ್ತರಾಗಿರುವ ಗೋವಿಂದ ಗೌಡ, ರಂಗಭೂಮಿಯ ಸಂಗ್ರಾಹಕ, ಪರಿಚಾರಕ ಎಂದೇ ಪ್ರಸಿದ್ಧರು. ರಂಗ ರತ್ನಾಕರ ಸಂಸ್ಥೆ ಆರಂಭಿಸಿ ನಿರಂತರವಾಗಿ ರಂಗ ಚಟುವಟಿಕೆಗಳನ್ನು ಆಯೋಜಿಸುತ್ತಿದೆ.